ಸಂಪುಟ: 04 ಸಂಚಿಕೆ: 254 ಪುಟಗಳು: 08 ಬುಧವಾರ 27 ನವೆಂಬರ್ 2024 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

ಮುಂಜಾನೆ ಮಾತು

ಭೂಮಿಗಿರುವ ಸಹನಶೀಲತೆ, ಸೂರ್ಯನಿಗಿರುವ ಸಮಯ ಪ್ರಜ್ಞೆ, ಚಂದ್ರನಿಗಿರುವ ನಗು ಸದಾ ನಿಮ್ಮೊಂದಿಗಿರಲಿ...

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಮುಸ್ಲಿಮರಿಗೆ ಮತದಾನದ ಹಕ್ಕು ಇಲ್ಲದಂತೆ ಮಾಡಬೇಕು: ಸ್ವಾಮೀಜಿ

• ಉದಯವಾಹಿನಿ, ಬೆಂಗಳೂರು

ಮುಸ್ಲಿಮರಿಗೆ ಮತದಾನದ ಹಕ್ಕು ಇಲ್ಲದಂತೆ ಮಾಡಬೇಕು' ಎಂದು ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಚಂದ್ರಶೇಖರ ಸ್ವಾಮೀಜಿ ಹೇಳಿದರು. ನಗರದ ಫ್ರೀಡಂ ಪಾರ್ಕ್‌ನಲ್ಲಿ ಭಾರತೀಯ ಕಿಸಾನ್ ಸಂಘದ ನೇತೃತ್ವದಲ್ಲಿ ನಡೆಯುತ್ತಿರುವ ಪ್ರತಿಭಟನೆಯಲ್ಲಿ ಮಂಗಳವಾರ ಪಾಲ್ಗೊಂಡು ಅವರು ಮಾತನಾಡಿದರು. 'ದೇಶದಲ್ಲಿ ವಕ್ಸ್ ಮಂಡಳಿಯೇ ಇಲ್ಲದಂತೆ ಮಾಡಬೇಕು' ಎಂದೂ ಹೇಳಿದರು. 'ವಕ್ಸ್ ಮಂಡಳಿಯೇ ಇಲ್ಲದಂತೆ ಮಾಡಿದರೆ ಆಗ, ಭಾರತೀಯರೆಲ್ಲರೂ ನೆಮ್ಮದಿಯಿಂದ ಇರಲು ಸಾಧ್ಯ' ಆಗಲಿದೆ ಎಂದು ಹೇಳಿದರು. 'ರೈತರ ಜಮೀನು ಉಳಿಸಲು ಎಲ್ಲಾರೂ ಒಂದಾಗಿ ಹೋರಾಟ ನಡೆಸುವ ತುರ್ತು ಸಂದರ್ಭ ಎದುರಾಗಿದೆ. ಸರ್ಕಾರ ಹೋದರೂ ತೊಂದರೆ ಇಲ್ಲ. ವಕ್ಸ್ ಮಂಡಳಿ ರದ್ದು ಮಾಡುವ ನಿರ್ಧಾರ ತೆಗೆದುಕೊಳ್ಳಬೇಕು' ಎಂದು ತಿಳಿಸಿದರು.

## ಧರ್ಮಸಿಂಗ್, ಖರ್ಗೆಯಿಂದ ವಕ್ಫ್ ಆಸ್ತಿ ಒತ್ತುವರಿ: ಯತ್ನಾಳ

• ಉದಯವಾಹಿನಿ, ಚಿಂಚೋಳಿ

ರಾಜ್ಯದಲ್ಲಿ ವಕ್ಫ್ ಮಂಡಳಿಗೆ ಸೇರಿದ 2.77 ಲಕ್ಷ ಕೋಟಿಯಷ್ಟು ಆಸ್ತಿ ಒತ್ತುವರಿಯಾಗಿದ್ದು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮಾಜಿ ಸಿಎಂ ದಿ. ಧರ್ಮಸಿಂಗ್, ಮಾಜಿ ಸಚಿವ ಖಮರುಲ್ ಇಸ್ಲಾಂ ಕೇಂದ್ರದ ಮಾಜಿ ಸಚಿವ ಸಿಎಂ ಇಬ್ರಾಹಿಂ ಅವರೂ ವಕ್ಸ್ ಆಸ್ತಿ ಒತ್ತುವರಿ ಮಾಡಿಕೊಂಡಿದ್ದಾರೆ ಎಂಬುದು ಅನ್ವರ್ ಮಣಿ ಪ್ಪಾಡಿ ವರದಿಯಲ್ಲಿದೆ ಎಂದು ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪಿಸಿದರು. ಪಟ್ಟಣದಲ್ಲಿ ಮಂಗಳವಾರ ನಡೆದ ವಕ್ಸ್ ಭೂಕಬಳಿಕೆ ವಿರೋಧಿ ಜನಜಾಗೃತಿ ಹೋರಾಟದ ಬಹಿರಂಗ ಸಭೆಯಲ್ಲಿ ಅವರು ಮಾತನಾಡಿದರು. ನನ್ನ ಹೇಳಿಕೆಯನ್ನು ವಿರೋಧಿಸಿ ಸಿಎಂ ಇಬ್ರಾಹಿಂ ಅವರು ನನಗೆ ಮಾನಹಾನಿ ನೋಟಿಸ್ ನೀಡಿ, ಕ್ಷಮೆಗೆ ಒತ್ತಾಯಿಸಿದ್ದಾರೆ. ವಕ್ಸ್ ಮಂಡಳಿಯ ಖಬರಸ್ಥಾನದಲ್ಲಿ ಕಾಂಪ್ಲೆಕ್ಸ್ ನಿರ್ಮಿಸಿದ ಬಗ್ಗೆ ವರದಿಯಲ್ಲಿನ 60ನೇ ಪುಟ ಓದುವಂತೆ ಪ್ರತ್ಯುತ್ತರ ನೀಡಿದ್ದೇನೆ. ನಾನು ಯಾರಿಗೂ ಹೆದರುವ ಮಗನಲ್ಲ' ಎಂದು ಹೇಳಿದರು.

**ಪ್ರಿಯಾಂಕ್ ಮೆದುಳಿಲ್ಲದ ಗಿರಾಕಿ:** 'ಸಚಿವ ಪ್ರಿಯಾಂಕ್ ಖರ್ಗೆ ಅವರ ಅಜ್ಜಿ ಹಾಗೂ ಅತ್ತೆಯನ್ನು ರಜಾಕಾರರು ಸುಟ್ಟು ಹಾಕಿದ್ದರು. ರಜಾಕಾರರು ಮುಸ್ಲಿಮರಲ್ಲ ಎಂದು ಹೇಳಿಕೆ ನೀಡಿದ ಪ್ರಿಯಾಂಕ್ ಅವರು ಮೆದುಳಿಲ್ಲದ ಗಿರಾಕಿ. ದೇಶದಲ್ಲಿ ಇಂತಹ ಗಿರಾಕಿ ರಾಹುಲ್ ಗಾಂಧಿ ಮಾತ್ರ ಎಂದುಕೊಂಡಿದ್ದೆ.ಅಂತಹ ಗಿರಾಕಿ ಕಲಬುರಗಿಯಲ್ಲೂ ಇದ್ದಾರೆ. ಮತಗಳ ಆಸೆಗಾಗಿ ಈ ಪ್ರಮಾಣದ ಓಲೈಕೆ ಸರಿಯಲ್ಲ ಎಂದರು. ಬಿಜೆಪಿ ಅಧಿಕಾರಕ್ಕೆ ಬಂದರೆ ಸಂವಿಧಾನ ಬದಲಿಸುತ್ತಾರೆ ಎಂದು ಹೇಳಿಕೊಂಡು ತಿರುಗುತ್ತಿರುವವರು ಸಂವಿಧಾನವೇ ಓದಿಲ್ಲ. ಡಾ.ಬಿ.ಆರ್. ಅಂಬೇಡ್ಕರ್ ಅವರು ರಚಿಸಿದ ಸಂವಿಧಾನದಲ್ಲಿ ವಕ್ಸ್ ಮಂಡಳಿ ಕಾಯ್ದೆಯೇ ಇಲ್ಲ. ಈ ಬಗ್ಗೆ ಅವರಾರೂ ಮಾತನಾಡುವುದಿಲ್ಲ. ವಕ್ಫ್ ಹೆಸರಲ್ಲಿ ದಲಿತರ ಜಮೀನು ಕಿತ್ತುಕೊಂಡಿದ್ದರೂ ಕಾಂಗ್ರೆಸ್ಸಿಗರು ತುಟಿ ಬಿಚ್ಚುವುದಿಲ್ಲ' ಎಂದು ಹೇಳಿದರು.

## ಸ್ವಪ್ರತಿಷ್ಠೆ ಹೋರಾಟ ಮಾಡ್ತಿರೋದು ಅವ್ರಿಗೆ ಶೋಭೆ ತರಲ್ಲ: ಬಿಎಸ್‌ವೈ

• ಉದಯವಾಹಿನಿ, ಬೆಂಗಳೂರು

ಸ್ವಪ್ರತಿಷ್ಠೆಯಿಂದ ಹೋರಾಟ ಮಾಡುತ್ತಿರುವುದು ಅವರಿಗೆ ಶೋಭೆ ತರುವುದಿಲ್ಲ ಎಂದು ಯತ್ನಾಳ್ ತಂಡದ ವಿರುದ್ಧ ಮಾಜಿ ಸಿಎಂ ಬಿಎಸ್ ಯಡಿಯೂರಪ್ಪ ಬೇಸರ ವ್ಯಕ್ತಪಡಿಸಿದ್ದಾರೆ. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಸನಗೌಡ ಪಾಟೀಲ್ ಯತ್ನಾಳ್ ಹಾಗೂ ಎಲ್ಲಾರೂ ಕೂಡ ತಮ್ಮ ಹೋರಾಟ ಬಿಟ್ಟು ನಮ್ಮ ಜೊತೆ ಕೈಜೋಡಿಸಿ ಎಂದು ವಿಜಯೇಂದ್ರ ವಿನಂತಿ ಮಾಡಿಕೊಂಡರು. ಆದರೆ, ಅವರ ಸ್ವಪ್ರತಿಷ್ಠೆಯಿಂದ ಪ್ರತ್ಯೇಕ ಹೋರಾಟ ಮಾಡುತ್ತಿರುವುದು ಅವರಿಗೆ ಶೋಭೆ ತರುವುದಿಲ್ಲ. ಈಗಲಾದರೂ ಜಾಗೃತರಾಗಿ, ಅವರೆಲ್ಲರೂ ಸೇರಿ ಪಕ್ಷವನ್ನು ಬಲಪಡಿಸಲು ಸಹಕಾರ ಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ. ನಾವು ಮನವಿ ಮಾಡುತ್ತೇವೆ. ಆದರೆ ಉಳಿದದ್ದು ಅವರಿಗೆ, ಕೇಂದ್ರ ನಾಯಕರಿಗೆ ಬಿಟ್ಟಿದ್ದು. ಇದೆಲ್ಲ ಹೈಕಮಾಂಡ್ ಗಮನಕ್ಕೂ ಬಂದಿದೆ. ಏನು ಮಾಡುತ್ತಾರೆ ನೋಡೋಣ ಎಂದು ಯತ್ನಾಳ್ ಪ್ರತ್ಯೇಕ ಹೋರಾಟವನ್ನು ಕೈಬಿಡುವಂತೆ ಮನವಿ ಮಾಡಿಕೊಂಡರು. ಉಪಚುನಾವಣಾ ವಿಚಾರವಾಗಿ ಮಾತನಾಡಿ, ಮೂರು ಉಪಚುನಾವಣೆಗಳಲ್ಲಿ ನಿರೀಕ್ಷೆ ಮೀರಿ ನಮಗೆ ಹಿನ್ನಡೆಯಾಗಿದೆ. ಏನು ಕೊರತೆ ಆಗಿದೆ ಎನ್ನುವ ಕುರಿತು ಎಲ್ಲಾರೂ ಕೂತು ಚರ್ಚೆ ಮಾಡುತ್ತೇವೆ. ಇನ್ನೂ ಮುಂದೆ ಹೀಗಾಗದಂತೆ ಎಚ್ಚರಿಕೆ ವಹಿಸುತ್ತೇವೆ. ಸೋಲಿಗೆ ಯಡಿಯೂರಪ್ಪ, ವಿಜಯೇಂದ್ರ ಕಾರಣ ಎನ್ನುವ ಪ್ರಶ್ನೆ ಬರಲ್ಲ. ಎಲ್ಲಾರೂ ಸೇರಿ ಜವಾಬ್ದಾರಿ ಹೊರಬೇಕಾಗುತ್ತದೆ. ಏನು ಲೋಪ ಆಗಿದೆ ಎಂದು ಚರ್ಚೆ ಮಾಡುತ್ತೇವೆ ಎಂದು ಪ್ರತಿಕ್ರಿಯೆ ನೀಡಿದರು. ಇನ್ನೂ ಸಂವಿಧಾನ ದಿನದ ಬಗ್ಗೆ ಮಾತನಾಡಿ, ಸಂವಿಧಾನ ದಿನ. ಇದು ಅಂಬೇಡ್ಕರ್ ಕೊಟ್ಟಂತಹ ಸಂವಿಧಾನ. ಇಡೀ ವಿಶ್ವವೇ ಅಚ್ಚರಿ ಪಡುವಂತಹ ಸಂವಿಧಾನವನ್ನು ಅಂಬೇಡ್ಕರ್ ನಮಗೆ ಕೊಟ್ಟಿದ್ದಾರೆ. ಆದ ಕಾರಣ ನಾವು ದೇಶದಲ್ಲಿ ಸಂವಿಧಾನ ದಿನ ಆಚರಣೆ ಮಾಡುತ್ತಿದ್ದೇವೆ ಎಂದು ಹೇಳಿದರು.

**ಸಂವಿಧಾನ ಅಂಗೀಕಾರಗೊಂಡ 75ನೇ ವರ್ಷಾಚರಣೆ ನಿಮಿತ್ತ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಂವಿಧಾನ ದಿನದ ನಿಮಿತ್ತ ಐತಿಹಾಸಿಕ ಸೆಂಟ್ರಲ್ ಹಾಲ್‌ನಲ್ಲಿ ಸಂಸತ್ತಿನ ಜಂಟಿ ಸದನ ಉದ್ದೇಶಿಸಿ ಮಾತನಾಡಿದರು. ಉಪ ರಾಷ್ಟ್ರಪತಿ ಜಗದೀಪ್ ಧನಕರ್, ಪ್ರಧಾನಿ ನರೇಂದ್ರ ಮೋದಿ, ಲೋಕಸಭ ಸ್ಪೀಕರ್ ಓಂ ಬಿರ್ಲಾ ಸೇರಿದಂತೆ ಇತರ ಪ್ರಮುಖ ನಾಯಕರು ಹಾಜರಿದ್ದು, ಭಾರತದ ಪ್ರಭಾಪ್ರಭುತ್ವ ಇತಿಹಾಸದ ಪ್ರಾಮುಖ್ಯತೆ ಕುರಿತು ಮಾತನಾಡಿದರು.**

# ಸಂವಿಧಾನದ ಆಶಯ ಅಭಿವೃದ್ಧಿಯ ಧ್ಯೇಯ




● ಭಾರತ ಸಂವಿಧಾನ ಜೀವಂತ, ಪ್ರಗತಿಪರ ದಾಖಲೆ: ಮುರ್ಮು ● ಅಮೃತ ಸಂಭ್ರಮ; ಭಾರತ ಸಂವಿಧಾನ ಸಂವಿಧಾನ ದಿನವನ್ನು ಸಂವಿಧಾನ್ ದಿವಸ್ ಎಂದೂ ಕರೆಯಲಾಗುತ್ತದೆ ● ಭಾರತದ ಸಂವಿಧಾನಕ್ಕೆ ವಿಶ್ವದಲ್ಲೇ ದೊಡ್ಡ ಸಂವಿಧಾನ ಎಂಬ ಹಿರಿಮೆ

• ಉದಯವಾಹಿನಿ, ನವದೆಹಲಿ

ರಾಷ್ಟ್ರಪತಿ ಮುರ್ಮು, ಭಾರತದ ಪ್ರಜಾಪ್ರಭುತ್ವ ತತ್ವ ನೀತಿ ರೂಪಿಸುವಲ್ಲಿ ಸಂವಿಧಾನ ಪ್ರಮುಖ ಪಾತ್ರವಹಿಸಿದೆ ಎಂದರು. ಇನ್ನು ಕಾರ್ಯಕ್ರಮದಲ್ಲಿ ಸಂಸ್ಕೃತ ಹಾಗೂ ಮೈಥಾಲಿ ಭಾಷೆಗೆ ಭಾಷಾಂತರಗೊಂಡ ಸಂವಿಧಾನದ ಪ್ರತಿ ಬಿಡುಗಡೆ ಮಾಡಿದರು. ಈ ವೇಳೆ, ಸಂವಿಧಾನದ ಪ್ರಸ್ತಾವನೆ ಓದಲಾಯಿತು. ಕಾರ್ಯಕ್ರಮದಲ್ಲಿ ರಾಷ್ಟ್ರಪತಿಗಳು ಸ್ಮರಣಾರ್ಥ ನಾಣ್ಯ ಮತ್ತು ಅಂಚೆ ಚೀಟಿಯನ್ನು ಅನಾವರಣಗೊಳಿಸಿದರು.

ನಮ್ಮ ಸಂವಿಧಾನವೂ ಜೀವಂತ ಮತ್ತು ಪ್ರಗತಿ ದಾಖಲೆಯಾಗಿದೆ. ನಮ್ಮ ಸಂವಿಧಾನದ ಮೂಲಕ ನಾವು ಸಾಮಾಜಿಕ ನ್ಯಾಯ ಮತ್ತು ಎಲ್ಲಾರ ಒಳಗೊಂಡ ಅಭಿವೃದ್ಧಿಯ ಗುರಿ ಸಾಧಿಸಿದ್ದೇವೆ ಎಂದರು. ಮಹಿಳಾ ಮೀಸಲಾತಿ ಕಾನೂನಿನ ಕುರಿತು ಮಾತನಾಡಿದ ಅವರು, ಇದು ನಮ್ಮ ಪ್ರಜಾಪ್ರಭುತ್ವದಲ್ಲಿ ಮಹಿಳಾ ಸಬಲೀಕರಣದ ಹೊಸ ಕಾಲವನ್ನು ಆರಂಭಿಸಿದೆ ಎಂದ ಅವರು, ಸಂವಿಧಾನ ರಚನೆಯಲ್ಲಿ ಭಾಗಿಯಾದ 15 ಮಹಿಳಾ ಸದಸ್ಯರಿಗೆ ಗೌರವ ನಮನ ಸಲ್ಲಿಸಿದರು.

**ಸಂವಿಧಾನ ದಿನದ ಇತಿಹಾಸ**

**ಬ್ರಿಟಿಷರ ಆಳ್ವಿಕೆಯಿಂದ ಸ್ವಾತಂತ್ರ್ಯ ಪಡೆದ ನಂತರ, ಸಂವಿಧಾನ ಸಭೆಯು ಭಾರತದ ಸಂವಿಧಾನವನ್ನು ರಚಿಸುವ ಜವಾಬ್ದಾರಿಯನ್ನು ಸಮಿತಿಗೆ ವಹಿಸಿತು. ಹೌದು, 1946 ರಲ್ಲಿ ಕ್ಯಾಬಿನೆಟ್ ಮಿಷನ್ ಭಾರತಕ್ಕೆ ಬಂದಾಗ ಸಂವಿಧಾನ ಸಭೆಯನ್ನು ರಚಿಸಲು ಒಪ್ಪಿಗೆ ದೊರೆಯಿತು. ಅದರಂತೆ ಪ್ರಾದೇಶಿಕ ವಿಧಾನಸಭೆಗಳಿಗೆ ಚುನಾವಣೆ ನಡೆದು 389 ಸದಸ್ಯರು ಚುನಾಯಿತರಾದರು. ಇದರಲ್ಲಿ ರಾಜ-ಮಹಾರಾಜರ ಆಳ್ವಿಕೆಯ 93 ಸದಸ್ಯರೂ ಸೇರಿದ್ದರು. ಇದರ ಮೊದಲ ಸಭೆ 1946 ರ ಡಿ. 9 ರಂದು ನವದೆಹಲಿಯಲ್ಲಿ ನಡೆಯಿತು. ಈ ಸಭೆಗೆ ಡಾ. ಬಾಬು ರಾಜೇಂದ್ರ ಪ್ರಸಾದರು ಸಂವಿಧಾನ ಸಭೆಯ ಅಧ್ಯಕ್ಷರಾಗಿದ್ದರು. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರಾದರು. ಆ ಬಳಿಕ 1949 ಜನವರಿ 26ರಂದು ಭಾರತದ ಸಂವಿಧಾನವನ್ನು ಅಂಗೀಕರಿಸಲಾಯಿತು.**



**ಪ್ರಜಾಪ್ರಭುತ್ವದ ಮೌಲ್ಯ ಪ್ರಾಮುಖ್ಯತೆ ತಿಳಿಸಿದ ಉಪ ರಾಷ್ಟ್ರಪತಿ:** ಕಾರ್ಯಕ್ರಮದಲ್ಲಿ ಮಾತನಾಡಿದ ಉಪ ರಾಷ್ಟ್ರಪತಿ ಜಗದೀಪ್ ಧನಕರ್, ಭಾರತದ ಪ್ರಜಾಪ್ರಭುತ್ವ ಬಲಗೊಳಿಸುವಲ್ಲಿ ಸಂವಿಧಾನದ ಪಾತ್ರವನ್ನು ಒತ್ತಿ ಹೇಳಿದರು. ನಮ್ಮ ಸಂವಿಧಾನವೂ ಭಾರತದ ಪ್ರಭಾಪ್ರಭುತ್ವವನ್ನು ಪರಿಣಾಮಕಾರಿಯಾಗಿ ನಿರೂಪಣೆ ಮಾಡಿದೆ. ನಮ್ಮ ಸಂವಿಧಾನದ ಪ್ರಮುಖ ಮೌಲ್ಯವನ್ನು ಈ ಕಾರ್ಯಕ್ರಮ ಪ್ರತಿನಿಧಿಸುತ್ತದೆ. ಸಂಸದರ ಪ್ರಜಾಪ್ರಭುತ್ವ ಮಾರ್ಗದರ್ಶಿಯಾಗಿ ಸಂವಿಧಾನ ಕಾರ್ಯ ನಿರ್ವಹಿಸಿದೆ ಎಂದರು. ಇದೇ ವೇಳೆ 1975-77 ತುರ್ತು ಪರಿಸ್ಥಿತಿ ಸಂದರ್ಭ ನೆನಪಿಸಿಕೊಂಡ ಅವರು, ಜನರ ಮೂಲ ಹಕ್ಕು ಹತ್ತಿಕ್ಕಿದ ಕತ್ತಲೆಯ ಅವಧಿ ಇದಾಗಿದೆ ಎಂದರು. ಅಲ್ಲದೇ ಜೂನ್ 25 ಅನ್ನು ತುರ್ತು ಪರಿಸ್ಥಿತಿಯ ಜ್ಞಾಪನೆಯಾಗಿ ವಾರ್ಷಿಕ ಆಚರಣೆಯಾಗಿ ಸ್ಮರಣೆ ದಿನವಾಗಿ ಅವರು ಪ್ರಸ್ತಾಪಿಸಿದರು.

**ಸಂವಿಧಾನ ಪರಂಪರೆ ಒತ್ತಿಹೇಳಿದ ಲೋಕಸಭಾ ಸ್ಪೀಕರ್:** ಸಂಸದರು ಸಂವಿಧಾನ ಸಭೆಯಿಂದ ಸ್ಥಾಪನೆಯಾದ ರಚನಾತ್ಮಕ ಮತ್ತು ಗೌರವಾನ್ವಿತ ಚರ್ಚೆಗಳನ್ನು ಎತ್ತಿ ಹಿಡಿಯಬೇಕು ಎಂದು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ತಿಳಿಸಿದರು. ಇದೇ ವೇಳೆ, ಸಂವಿಧಾನದಲ್ಲಿ ಭಾರತದ ಭೌಗೋಳಿಕ ಮತ್ತು ಸಾಮಾಜಿಕ ವೈವಿಧ್ಯತೆಯನ್ನು ಬಿಂಬಿಸಲು ಮೂರು ವರ್ಷದ ಪ್ರಯತ್ನವನ್ನು ಸ್ಮರಿಸಿದರು. 75 ವರ್ಷಗಳಲ್ಲಿ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯನ್ನು ಮುನ್ನಡೆಸುವಲ್ಲಿ ಸಂಸತ್ತಿನ ಪರಿವರ್ತಕ ಪಾತ್ರ ತಿಳಿಸಿದರು. 2024ರ ನವೆಂಬರ್ 26 ಭಾರತ ಸಂವಿಧಾನದ 75ನೇ ವರ್ಷಾಚರಣೆ. ಬಿ ಆರ್ ಅಂಬೇಡ್ಕರ್ ನಾಯಕತ್ವದಲ್ಲಿ ನವೆಂಬರ್ 26, 1949ರಂದು ಭಾರತದ ಸಂವಿಧಾನವನ್ನು ಅಂಗೀಕಾರ ಮಾಡಲಾಯಿತು. ಭಾರತದ ಪ್ರಜಾಸತ್ತಾತ್ಮಕ, ಜಾತ್ಯತೀತ ಮತ್ತು ಸಮಾನತೆಯ ಚೌಕಟ್ಟನ್ನು ವ್ಯಾಖ್ಯಾನಿಸುವ ಅಡಿಪಾಯದ ದಾಖಲೆಯಾಗಿ ಕಾರ್ಯನಿರ್ವಹಿಸುತ್ತದೆ. ಭಾರತದ ಸಂವಿಧಾನವು ಜನವರಿ 26, 1950 ರಂದು ಜಾರಿಗೆ ಬಂದಿತು. ಈ ದಿನವನ್ನು ಗಣ ರಾಜ್ಯೋತ್ಸವವಾಗಿ ಆಚರಿಸಲಾಗುತ್ತದೆ.

### ಶುಭಾಶಯ ತಿಳಿಸಿದ ಪ್ರಧಾನಿ ಮೋದಿ



ಸಂವಿಧಾನ ಅಂಗೀಕರಗೊಂಡ 75ನೇ ವರ್ಷಾಚರಣೆ ನಿಮಿತ್ತ ಪ್ರಧಾನಿ ನರೇಂದ್ರ ಮೋದಿ ಅವರು ಜನರಿಗೆ ಸಾಮಾಜಿಕ ಜಾಲತಾಣದಲ್ಲಿ ಶುಭಕೋರಿದರು. ರಾಜನಾಥ್ ಸಿಂಗ್ ಅವರು ಕೂಡ ಸಂವಿಧಾನ ರಚನೆಗೆ ಕೊಡುಗೆ ನೀಡಿದ ಬಿ.ಆರ್. ಅಂಬೇಡ್ಕರ್ ಸೇರಿದಂತೆ ಅನೇಕರಿಗೆ ಅವರಿಗೆ ಗೌರವ ಸಲ್ಲಿಸಿದ ಸಂವಿಧಾನದ ಶುಭಾಶಯ ತಿಳಿಸಿದರು. ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ ಖರ್ಗೆ ಕೂಡ ಸಂವಿಧಾನದ ತತ್ವ ರಕ್ಷಣೆಗೆ ಭಾರತದ ಜನರು ಒಗ್ಗೂಡಬೇಕು ಎಂದು ಕರೆ ನೀಡಿ, ಶುಭಾಶಯ ತಿಳಿಸಿದರು. ಭಾರತದ ಐತಿಹಾಸಿಕ ಘಟನೆ ಮಹತ್ವ ಗುರುತಿಸುವ ಉದ್ದೇಶದಿಂದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಅಡಿ ಸರ್ಕಾರ 2015ರ ನವೆಂಬರ್ 26ನ್ನು ಸಂವಿಧಾನ ದಿನವಾಗಿ ಘೋಷಿಸಿದೆ. ಅಂದಿನಿಂದ ಪ್ರತಿ ವರ್ಷ ಸರ್ಕಾರ ಈ ದಿನವನ್ನು ಆಚರಿಸುತ್ತಿದೆ.

**ದೇಶದ ಜನತೆಗೆ ಸಂವಿಧಾನದ ಬಗ್ಗೆ ಅರಿವು**

**1950ರ ಜನವರಿ 26ರಂದು ಅಸ್ತಿತ್ವಕ್ಕೆ ಬಂತು. ಭಾರತದ ಸಂವಿಧಾನವು 448 ವಿಧಿಗಳು, 25 ಭಾಗಗಳು, 12 ಶೆಡ್ಯೂಲ್, 5 ಅನುಬಂಧಗಳು, 98 ತಿದ್ದುಪಡಿಗಳನ್ನು ಹೊಂದಿದೆ. ಸಂವಿಧಾನ ರಚನಾ ಸಮಿತಿಯಲ್ಲಿ 284 ಮಂದಿ ಸದಸ್ಯರಿದ್ದರು. ಅವರಲ್ಲಿ 15 ಮಂದಿ ಮಹಿಳೆಯರಿದ್ದರು. 2015ರಿಂದ ಸಂವಿಧಾನ ದಿನ ಎಂದು ಆಚರಿಸಲು ಪ್ರಾರಂಭಿಸಲಾಯಿತು. ಈ ದಿನದ ಆಚರಣೆಗೂ ಮೊದಲು ಈ ದಿನವನ್ನು ಕಾನೂನು ದಿನವನ್ನಾಗಿ ಆಚರಿಸಲಾಗುತ್ತಿತ್ತು. ದೇಶದ ಜನತೆಗೆ ಸಂವಿಧಾನದ ಬಗ್ಗೆ ಅರಿವು ಮೂಡಿಸಲು ಸಲುವಾಗಿ ಈ ದಿನದ ಆಚರಣೆಯೂ ಅಸ್ತಿತ್ವಕ್ಕೆ ಬಂದಿತು. ಈ ಸಂವಿಧಾನ ದಿನವನ್ನು ಸಂವಿಧಾನ್ ದಿವಸ್ ಎಂದೂ ಕೂಡ ಕರೆಯಲಾಗುತ್ತದೆ.**

## ಗ್ಯಾರಂಟಿ ಯೋಜನೆಗಳ ಬಗ್ಗೆ ಆಡಳಿತ ಪಕ್ಷದ ಶಾಸಕರಿಂದಲೇ ಅಸಮಾಧಾನ

• ಉದಯವಾಹಿನಿ, ಬೆಂಗಳೂರು



ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಿಂದ ಆಡಳಿತ ಪಕ್ಷದ ಶಾಸಕರೇ ಅಸಮಾಧಾನ ವ್ಯಕ್ತಪಡಿಸುವ ಮೂಲಕ ಮುಜುಗರ ಉಂಟುಮಾಡಲಾರಂಭಿಸಿದ್ದಾರೆ. ಹೊಸಪೇಟೆ ಕ್ಷೇತ್ರದ ಶಾಸಕ ಗವಿಯಪ್ಪ ಗ್ಯಾರಂಟಿ ಯೋಜನೆಗಳಲ್ಲಿ ಅನಗತ್ಯವಾದ ಒಂದೆರಡನ್ನು ನಿಲ್ಲಿಸಿ ಮನೆ ನಿರ್ಮಾಣದ ಯೋಜನೆಗಳಿಗೆ ಅನುದಾನ ಒದಗಿಸುವಂತೆ ಮನವಿ ಮಾಡಿದ್ದಾರೆ. ಸಾರ್ವಜನಿಕ ಕಾರ್ಯಕ್ರಮದಲ್ಲಿ ಮಾತನಾಡಿರುವ ಅವರು, ಈ ಬಗ್ಗೆ ತಾವು ಮುಖ್ಯಮಂತ್ರಿಯವರಲ್ಲಿ ಮನವಿ ಮಾಡಿದ್ದು ಅವರು ಪರಿಶೀಲನೆ ನಡೆಸುವುದಾಗಿ ಹೇಳಿದ್ದಾರೆ ಎಂದರು. ಈ ಜಿಲ್ಲೆಗಳು ಗ್ಯಾರಂಟಿ ಯೋಜನೆಗಳಲ್ಲಿ ಒಂದೆರೆಡು ಅನಗತ್ಯವಾಗಿದೆ. ದ್ವಿಚಕ್ರ ವಾಹನ, ಕಾರುಗಳನ್ನು ಹೊಂದಿರುವವರು ಗ್ಯಾರಂಟಿ ಯೋಜನೆಯಡಿ ಓಡಾಡುವುದಿಲ್ಲ. ಅಂತವರಿಗೆ ಈ ಯೋಜನೆಯ ಅಗತ್ಯವಿಲ್ಲ ಅದನ್ನು ಪರಿಷ್ಕರಣೆ ಮಾಡಿದರೆ ಮನೆ ನಿರ್ಮಾಣ ಸೇರಿದಂತೆ ಇತರೆ ಕಾರ್ಯಕ್ರಮಗಳಿಗೆ ಹಣ ಹೊಂದಿಸಲು ಸಾಧ್ಯವಾಗುತ್ತದೆ ಎಂದಿದ್ದಾರೆ. ಅಭಿವೃದ್ಧಿ ಯೋಜನೆಗಳಿಗೆ 40 ಸಾವಿರ ಕೋಟಿ ರೂ.ಗಳನ್ನು ಹೊಂದಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಯತ್ನಿಸುತ್ತಿದ್ದಾರೆ. ಆದರೆ ಗ್ಯಾರಂಟಿ ಯೋಜನೆಯ ಪರಿಷ್ಕರಣೆಯಿಂದ ಇನ್ನಷ್ಟು ಸಹಾಯವಾಗಲಿದೆ ಎಂದು ಹೇಳಿದರು. ಇತ್ತೀಚೆಗೆ ಗವಿಯಪ್ಪ ಅವರು ರಾಜ್ಯ ಸರ್ಕಾರದಿಂದ ಅಭಿವೃದ್ಧಿ ಯೋಜನೆಯಲ್ಲಿ ಅನುದಾನ ಸಿಗುತ್ತಿಲ್ಲ ಎಂದು ಬಹಿರಂಗವಾಗಿಯೇ ಅಸಮಾಧಾನ ವ್ಯಕ್ತಪಡಿಸಿದ್ದರು.

ಅದರ ಬೆನ್ನಲ್ಲೇ ಕಾಂಗ್ರೆಸ್ ಪಕ್ಷದ ಬಹುನಿರೀಕ್ಷಿತ ಗ್ಯಾರಂಟಿ ಯೋಜನೆಗಳ ಬಗ್ಗೆ ಬಹಿರಂಗ ಅಸಮಾಧಾನ ವ್ಯಕ್ತಪಡಿಸುವ ಮೂಲಕ ಪಕ್ಷದ ಪ್ರಮುಖರ ಕೆಂಗಣ್ಣಿಗೆ ಗುರಿಯಾಗಿದ್ದಾರೆ.

ಇತ್ತೀಚೆಗೆ ಗವಿಯಪ್ಪ ಅವರ ವಿರುದ್ಧ ಸ್ಥಳೀಯ ಮಟ್ಟದಲ್ಲೇ ಮುಖಂಡರು ಅಸಮಾಧಾನ ಹೊರಹಾಕಿದ್ದರು. ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ವರಿಷ್ಠರಿಗೆ ಮನವಿ ಮಾಡಿದ್ದರು. ಅದರ ಹೊರತಾಗಿಯೂ ಗವಿಯಪ್ಪ ಮತ್ತೆ ಗ್ಯಾರಂಟಿ ಯೋಜನೆಗಳ ವಿರುದ್ಧ ಬಹಿರಂಗ ಹೇಳಿಕೆ ನೀಡುವ ಮೂಲಕ ಪಕ್ಷಕ್ಕೆ ಮುಜುಗರ ಉಂಟು ಮಾಡಲಾರಂಭಿಸಿದ್ದಾರೆ.

## ಡಿ.10ಕ್ಕೆ ಮುಂದೂಡಿದ ಹೈಕೋರ್ಟ್

• ಉದಯವಾಹಿನಿ, ಬೆಂಗಳೂರು

ಮುಡಾ ಬದಲಿ ನಿವೇಶನ ಹಂಚಿಕೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಕ್ಕೆ ಸಂಬಂಧಿಸಿದಂತೆ ಸಿಬಿಐ ತನಿಖೆಗೆ ಕೋರಿ ಸಲ್ಲಿಸಲಾಗಿದ್ದ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಡಿಸೆಂಬರ್ 10ಕ್ಕೆ ಮುಂದೂಡಿದೆ. ಸಿಬಿಐ ತನಿಖೆಗೆ ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠವು, ವಾದ-ಪ್ರತಿವಾದವನ್ನು ಆಲಿಸಿದ ಬಳಿಕ ಡಿಸೆಂಬರ್ 10ರಂದು ಮುಂದಿನ ವಿಚಾರಣೆಯಮನ್ನು ಡಿಸೆಂಬರ್ 10 ನಡೆಸುವುದಾಗಿ ಹೇಳಿದ್ದಾರೆ. ಮುಡಾ ಹಗರಣದ ತನಿಖಾ ಪ್ರಗತಿ ವರದಿಯನ್ನು ಸಲ್ಲಿಸುವಂತೆ ಹೈಕೋರ್ಟ್ ಲೋಕಾಯುಕ್ತರಿಗೆ ಸೂಚನೆ ನೀಡಿತ್ತು. ಈ ಆದೇಶವನ್ನೂ ಪ್ರಶ್ನಿಸಿ ಜಮೀನು ಮಾಲೀಕ ದೇವರಾಜು ಅರ್ಜಿ ಸಲ್ಲಿಸಿದ್ದಾರೆ.

# ಕಾಂಗ್ರೆಸ್ ಪಕ್ಷವನ್ನು ಬೇರು ಸಮೇತ ಕಿತ್ತೊಗೆಯಲು ಸಂಕಲ್ಪ ಮಾಡೋಣ


■ ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡಿದ್ದ ಕಾಂಗ್ರೆಸ್‌ನ ಸಂವಿಧಾನ ವಿರೋಧಿ ಧೋರಣೆ ಹೊಸದೇನೂ ಅಲ್ಲ ■ ದೊಡ್ಡ ಕರಾಳ ಇತಿಹಾಸವೇ ಇದೆ

• ಉದಯವಾಹಿನಿ, ಬೆಂಗಳೂರು

**ಸಂವಿಧಾನ ವಿರೋಧಿ ಧೋರಣೆ**

ಸಂವಿಧಾನದ ಮೌಲ್ಯಗಳು ಮತ್ತು ಅದರ ಆಶಯಗಳ ಬಗ್ಗೆ ಗೌರವ ಇಲ್ಲದ ಕಾಂಗ್ರೆಸ್ ಪಕ್ಷವನ್ನು ಬೇರು ಸಮೇತ ಕಿತ್ತೊಗೆಯುವ ಸಂಕಲ್ಪ ಮಾಡೋಣ ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಕರೆ ನೀಡಿದ್ದಾರೆ. ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡಿದ್ದ ಕಾಂಗ್ರೆಸ್‌ನ ಸಂವಿಧಾನ ವಿರೋಧಿ ಧೋರಣೆ ಹೊಸದೇನೂ ಅಲ್ಲ. ಅದಕ್ಕೆ ದೊಡ್ಡ ಕರಾಳ ಇತಿಹಾಸವೇ ಇದೆ ಎಂದು ಆರೋಪಿಸಿದರು. ಸಿಎಂ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಕಳೆದ 18 ತಿಂಗಳಲ್ಲಿ ಸಂವಿಧಾನಕ್ಕೆ ಚ್ಯುತಿ ತರುವ ಕೆಲಸವನ್ನು ಪದೇ ಪದೇ ಮಾಡುತ್ತಲೇ ಬಂದಿದೆ. ಈ ಸಂವಿಧಾನದ ದಿನದಂದು ಇಂತಹ ಸರ್ಕಾರವನ್ನು ಕಿತ್ತೊಗೆಯಬೇಕು ಎಂದು ಹೇಳಿದ್ದಾರೆ.

ಹೆಜ್ಜೆ ಹೆಜ್ಜೆಗೂ ಸಂವಿಧಾನಕ್ಕೆ ಅಪಚಾರ, ಅವಮಾನ, ಸಂವಿಧಾನದ ಆಶಯಗಳಿಗೆ ಧಕ್ಕೆ ತರುತ್ತಲೇ ಇರುವ ಕಾಂಗ್ರೆಸ್ ಪಕ್ಷಕ್ಕೆ ಸಂವಿಧಾನದ ಬಗ್ಗೆ ಮಾತನಾಡುವ ನೈತಿಕತೆಯೂ ಇಲ್ಲ, ಅರ್ಹತೆಯೂ ಇಲ್ಲ ಎಂದಿದ್ದಾರೆ. ಭಾರತದ ಸಂವಿಧಾನದ ಪೀಠಿಕೆ ಆರಂಭವಾಗುವುದೇ ಭಾರತದ ಜನತೆಯಾದ ನಾವು ಎಂದು. ಆದರೆ ಸಂವಿಧಾನವನ್ನು ರಕ್ಷಿಸಬೇಕಾದ ಪ್ರಜಾಪ್ರಭುತ್ವದ ದೇಗುಲವಾದ ವಿಧಾನಸೌಧದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪಾಕಿಸ್ತಾನ ಜಿಂದಾಬಾದ್ ಘೋಷಣೆ ಕೂಗುತ್ತಾರೆ. ಆ ದೇಶದ್ರೋಹಿಗಳ ಹೆಡೆಮುರಿ ಕಟ್ಟಬೇಕಾದ ಕಾಂಗ್ರೆಸ್ ಸರ್ಕಾರ ಅದನ್ನು ಸಮರ್ಥನೆ ಮಾಡಿಕೊಳ್ಳುತ್ತದೆ. ಸುದ್ದಿ ಬಿತ್ತರ ಮಾಡಿದ ಮಾಧ್ಯಮಗಳ ಮೇಲೇ ಗೂಬೆ ಕೂರಿಸುವ ಕೆಲಸ ಮಾಡುತ್ತದೆ. ದೇಶದ ಸಾರ್ವಭೌಮತೆ, ಅಖಂಡತೆಯನ್ನ ಕಾಪಾಡಬೇಕಾದ ಚುನಾಯಿತ ಸರ್ಕಾರ, ಬೆಂಗಳೂರಿನ ರಾಮೇಶ್ವರಂ ಕೆಫೆಯಲ್ಲಿ ಉಗ್ರರು ಬಾಂಬ್ ಸ್ಫೋಟಿಸಿದಾಗ ಅದನ್ನ ಸಿಲಿಂಡರ್ ಬ್ಲಾಸ್ಟ್, ಎಂದು ತಿಪ್ಪೆ ಸಾರಿಸುವ ಮೂಲಕ ದೇಶದ್ರೋಹಿಗಳನ್ನು ರಕ್ಷಿಸುವ ಪ್ರಯತ್ನ ಮಾಡಿದೆ.



### ರಾಜಕೀಯ ತೀರ್ಪು ಎಂದು ಹೀಗಳೆಯುವ ಮೂಲಕ ಸಂವಿಧಾನಕ್ಕೆ ಅಪಚಾರ

**ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕೆ ವಿನಿಯೋಗವಾಗಬೇಕಿದ್ದ ಸುಮಾರು 6,162 ಕೋಟಿ ರೂಪಾಯಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಹಣವನ್ನ ದುರುಪಯೋಗ ಮಾಡುತ್ತಿರುವ ಸಿಎಂ ಸಿದ್ದರಾಮಯ್ಯ ಸರ್ಕಾರ ದಲಿತರಿಗೆ ಅನ್ಯಾಯ ಮಾಡುವ ಮೂಲಕ ಸಂವಿಧಾನದ ಆಶಯಗಳಿಗೆ ಎಳ್ಳು ನೀರು ಬಿಟ್ಟಿದೆ. ಮೂಡಾ ಹಗರಣದಲ್ಲಿ ಹೈಕೋರ್ಟ್ ಕೊಟ್ಟಿರುವ ತೀರ್ಪನ್ನು ರಾಜಕೀಯ ತೀರ್ಪು ಎಂದು ಹೀಗಳೆಯುವ ಮೂಲಕ ಸಂವಿಧಾನಕ್ಕೆ ಅಪಚಾರ ಮಾಡಿದೆ ಈ ಕಾಂಗ್ರೆಸ್ ಸರ್ಕಾರ ಎಂದು ಕಿಡಿಕಾರಿದ್ದಾರೆ. ರಾಷ್ಟ್ರಧ್ವಜ, ರಾಷ್ಟ್ರಗೀತೆ, ರಾಷ್ಟ್ರೀಯ ಲಾಂಛನಗಳಿಗೆ ಗೌರವ ಕೊಡಬೇಕಾದ ಸರ್ಕಾರ, ಪ್ಯಾಲೆಸ್ತೀನ್ ಧ್ವಜ ಹಾರಿಸಿದರೆ ತಪ್ಪೇನು ಎಂದು ಕೇಳುತ್ತದೆ. ಸಂವಿಧಾನ ಸಮಾವೇಶದ ಹೆಸರಿನಲ್ಲಿ ನಗರ ನಕ್ಸಲ್ಗಳಿಗೆ, ಭಾರತದ ಸೈನಿಕರು ರೇಪಿಸ್ಟ್‌ಗಳು ಎನ್ನುವ ವಿಕೃತ ಮನಸ್ಕರಿಗೆ ಸರ್ಕಾರಿ ಖರ್ಚಿನಲ್ಲಿ ವೇದಿಕೆ ಕಲ್ಪಿಸಿಕೊಟ್ಟಿದೆ ಈ ದೇಶದ್ರೋಹಿ ಕಾಂಗ್ರೆಸ್ ಸರ್ಕಾರ ಎಂದು ಆರೋಪಿಸಿದ್ದಾರೆ. ಶಾಸಕರ ಬಂಡಾಯ ಶಮನ ಮಾಡಲು ಸಂವಿಧಾನದ ನಿಯಮ ಉಲ್ಲಂಘಿಸಿ 90 ಕ್ಯಾಬಿನೆಟ್ ದರ್ಜೆ ಸ್ಥಾನಮಾನ ಸೃಷ್ಟಿಸುವ ಮೂಲಕ ಸಾರ್ವಜನಿಕರ ಹಣವನ್ನ ಪೋಲು ಮಾಡುತ್ತಿದೆ ಈ ಲಜ್ಜೆಗೆಟ್ಟ ಕಾಂಗ್ರೆಸ್ ಸರ್ಕಾರ ಎಂದು ಆಕ್ರೋಶ ಹೊರಹಾಕಿದ್ದಾರೆ.**

ಪರಿಶಿಷ್ಟ ಸಮುದಾಯಗಳ ಅಭ್ಯುದಯಕ್ಕೆ ಕೆಲಸ ಮಾಡಬೇಕಾದ ಸರ್ಕಾರ, ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕೆ ವಿನಿಯೋಗವಾಗಬೇಕಾದ ವಾಲ್ಮೀಕಿ ಅಭಿವೃದ್ಧಿ ನಿಗಮದ 182 ಕೋಟಿ ಲೂಟಿ ಮಾಡಿ ಪರಿಶಿಷ್ಟ ಪಂಗಡಗಳಿಗೆ ಅನ್ಯಾಯ ಮಾಡಿದೆ.

ತಮ್ಮ ತುಷ್ಟಿಕರಣ ರಾಜಕಾರಣದ ತೃಷೆಗಾಗಿ ಸಾಂವಿಧಾನಿಕ ಹುದ್ದೆಗಳಿಗೆ ಪದೇ ಪದೇ ಅಪಮಾನ ಮಾಡುವ ಚಾಳಿ ಬೆಳೆಸಿಕೊಂಡಿರುವ ಶಾಸಕ ಜಮೀರ್ ಅಹದ್ ಖಾನ್ ಸಂವಿಧಾನಕ್ಕೆ ಅಪಚಾರ ಎಸಗುತ್ತಲೇ ಇದ್ದಾರೆ ಎಂದು ಅಶೋಕ್ ಆರೋಪಿಸಿದ್ದಾರೆ.

ಮುಸ್ಲಿಂ ಸ್ಪೀಕರ್ ಮುಂದೆ ಬಿಜೆಪಿ ಶಾಸಕರು ತಲೆಬಾಗಬೇಕು ಎಂದು ಸ್ಪೀಕರ್ ಹುದ್ದೆಗೆ ಅಪಚಾರ ಎಸಗಿದ್ದ ಜಮೀರ್ ಇಷ್ಟಕ್ಕೂ ಸುಮನಿರದೇ ಮುಸ್ಲಿಮರ ಕೆಲಸವನ್ನು ಸಚಿವರು ತಲೆಬಾಗಿ ಮಾಡಬೇಕು ಎಂದು ದುರಹಂಕಾರದ ಮಾತುಗಳನ್ನು ಆಡುವ ಮೂಲಕ ಸಂವಿಧಾನದ ಮೌಲ್ಯಗಳಿಗೆ ಅಪಮಾನ ಮಾಡಿದ್ದಾರೆ ಎಂದು ಗುಡುಗಿದ್ದಾರೆ.

ಈ ದಿನದ ದರ | ಪೆಟ್ರೋಲ್: 103.44 ₹/L | ಡೀಸೆಲ್ : 89.97 ₹/L | ಬಂಗಾರ: ₹7,724/Gram24ct ₹7,080/Gram22ct | ಬೆಳ್ಳಿ: ₹89.50/Gram



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
**ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ**
**ರಾಮೋಹಳ್ಳಿ**

### ಆಚಾರಾದ್ವಿಚ್ಯುತೋ ವಿಪ್ರಃ..

ಮನುಸ್ಮೃತಿಯ ಪ್ರಥಮಾಧ್ಯಾಯದ ಶ್ಲೋಕ. ಆಚಾರ ಸದಾಚಾರಭ್ರಷ್ಟ ವಿಪ್ರ ಬ್ರಾಹ್ಮಣ ವೇದಫಲವನ್ನು ಪಡೆಯಲಾರ. ಆಚಾರವಂತನಾದಾಗ ಮಾತ್ರ ವೇದಫಲವನ್ನು ಸಂಪೂರ್ಣಪಡೆಯುತ್ತಾನೆ. ವಿಪ್ರ ಭೂಸುರ ಭೂದೇವರು ಎಂದು ಹೇಳಲಾಗಿದೆ. ಜಾತಿ ಮಾತ್ರ ಬ್ರಾಹ್ಮಣನಾಗಿದ್ದು ವೇದಸಂಪನ್ನನಾಗದಿದ್ದಲ್ಲಿ ಪರಿಶುದ್ಧ ಆಚಾರ ವಿಚಾರ ಇಲ್ಲದಿದ್ದಲ್ಲಿ ಶ್ರೇಷ್ಠ ಎನಿಸಲಾರ. ಕಿಂ ಕುಲೇನ ವಿಶಾಲೇನ ವಿದ್ಯಾಹೀನಸ್ಯ ಜಂತುನಃ = ವಿದ್ಯೆ ಇಲ್ಲದ ಶ್ರೇಷ್ಠ ಜಾತಿಯಿಂದ ಪ್ರಯೋಜನವೇನು ಎನ್ನುತ್ತದೆ ಸುಭಾಷಿತ. ಹಾಗಾದರೆ ಉಳಿದವರು ಹೇಗಿದ್ದರೂ ನಡೆದೀತು ಎಂದಲ್ಲ. ಜನಸಾಮಾನ್ಯರು ದೊಡ್ಡವರ ನಡೆಯನ್ನು ಅನುಸರಿಸುವುದರಿಂದ ದೊಡ್ಡವರೆನಿಸಿಕೊಂಡ ವಿದ್ಯಾವಂತ - ಗುರು - ಶಿಕ್ಷಕ - ಮಂತ್ರಿ - ಅಧಿಕಾರಿ ನ್ಯಾಯಾಧೀಶ - ಸೈನ್ಯಾಧಿಪತಿ - ವೈದ್ಯ - ವಕೀಲರು ಸ್ಥಾನಮಾನಕ್ಕೆ ತಕ್ಕ ಘನ ತರ ಪರಿಶುದ್ಧ ಆಚಾರವಂತರಾಗಿರಬೇಕು.

ಕಟ್ಟಡದ ಮೇಲ್ಭಾಗ ಒಂದು ಕಳಚಿದರೆ ನಡೆದೀತು, ತಳಪಾಯ ಕುಸಿದರೆ ನಡೆಯದು ಅಪಾರ ನಷ್ಟ ಜವಾಬ್ದಾರಿಯ ಜನ ದಾರಿ ತಪ್ಪಿದರೆ ದಾರಿ ತೋರುವವರಾರು ಹಾಗಾದರೆ ಜನಸಾಮಾನ್ಯರು ಹೇಗಿದ್ದರೂ ನಡೆದೀತು ಎಂದಲ್ಲ. ಕೊಲೆಗೆ ಇಂಥ ಕ್ರೂರ ಶಿಕ್ಷೆ ಎಂದು ತಿಳಿಯದ ಅಮಾಯಕ ಮಾಡಿದ ಕೊಲೆ ಇದೆಂದು ಶಿಕ್ಷೆ ವಿಧಿಸದೇ ಬಿಡಲಾದೀತೇ ತಿಳಿಯದೇ ಮುಟ್ಟಿದೆನೆಂದು ಬೆಂಕಿ ಸುಡದೇ! ಆದ್ದರಿಂದ ಪ್ರತಿಯೊಬ್ಬರೂ ಸದಾಚಾರಸಂಪನ್ನರಾಗಿರಲೇಬೇಕು

# ಸಂವಿಧಾನದ ಬಗ್ಗೆ ಕಾಂಗ್ರೇಸ್‌ನದು ಕಪಟ ನಾಟಕ

## ರಾಜ್ಯ ಕಚೇರಿಯಲ್ಲಿ ಏರ್ಪಡಿಸಿದ್ದ ಸಂವಿಧಾನ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ

• **ಉದಯವಾಹಿನಿ, ಬೆಂಗಳೂರು**

ಸಂವಿಧಾನ ಪ್ರತಿಪಾದಕರು, ರಕ್ಷಕರು ತಾವೇ ಎಂದು ಬಿಂಬಿಸಿ ಕೊಳ್ಳುತ್ತಿರುವ ಕಾಂಗ್ರೆಸ್ ಪಕ್ಷದ್ದು ಕಪಟ ನಾಟಕವಾಗಿದೆ. ವಿದೇಶ ಅಧಿಕಾರದ ಅವಧಿಯುದ್ದಕ್ಕೂ ಸಂವಿಧಾನಕ್ಕೆ ವಿರುದ್ಧವಾಗಿ ನಡೆದುಕೊಂಡದ್ದು ವಾಸ್ತವಿಕ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಕಟುವಾಗಿ ಟೀಕಿಸಿದರು. ಅಪಪ್ರಚಾರದ ಬಗ್ಗೆ ಜಾಗೃತಿ ಕಾಂಗ್ರೆಸ್ ನೈಜ ವಿರೋಧಿಶೂನ್ಯ ಧೋರಣೆ ಪಕ್ಷದ ರಾಜ್ಯ ಕಚೇರಿಯಲ್ಲಿ ಮಂಗಳವಾರ ಏರ್ಪಡಿಸಿದ್ದ ಸಂವಿಧಾನ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು, ಸಂವಿಧಾನಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ಸಂವಿಧಾನಕ್ಕೆ ಸಂಪೂರ್ಣ ಗೌರವ ನೀಡಲು ಪ್ರಧಾನಿ ನರೇಂದ್ರ ಮೋದಿ ಪ್ರಾಮಾಣಿಕವಾಗಿ ಪ್ರಯತ್ನಿಸಿದವರು ಎಂದು ಹೇಳಿದರು.


ಉದಯವಾಹಿನಿ ಚಿತ್ರ

**ಮನಸ್ಥಿತಿ ಕಾಂಗ್ರೆಸ್ ಪಕ್ಷದ್ದಾಗಿದೆ ವಾಗ್ದಾಳಿ**

ಈ ವಿಡಿಯೋ-ಗ್ಯಾಲರಿ ಸಂವಿಧಾನ ನಮ್ಮ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯ ಧರ್ಮಗ್ರಂಥವಾಗಿದೆ. ವಿಶ್ವಕ್ಕೆ ಮಾದರಿಯಾದ ಸಂವಿಧಾನ ನಮ್ಮದು ಎಂಬ ಹೆಮ್ಮೆ ಸಂವಿಧಾನಕ್ಕೆ ಗೌರವ ಮತ್ತು ರಕ್ಷಣೆ ನೀಡುವುದು ಎಲ್ಲರ ಕರ್ತವ್ಯವಾಗಿದೆ ಎಂದು ಬಿ.ವೈ.ವಿಜಯೇಂದ್ರ ಅಭಿಪ್ರಾಯಪಟ್ಟರು. ಸಂವಿಧಾನದ ಮಹತ್ವ, ಆಶಯ, ಡಾ.ಅಂಬೇಡ್ಕರ್ ಪರಿಶ್ರಮದ ಬಗ್ಗೆ ಜನರಿಗೆ ತಿಳಿಸುವ ಉದ್ದೇಶದಿಂದ ಸಂವಿಧಾನ ಸನ್ಮಾನ ಅಭಿಯಾನ ಎರಡು ತಿಂಗಳ ಕಾಲ ನಡೆಯಲಿದೆ.

ನ.26 ರಿಂದ ಜ.26ರವರೆಗೆ ನಡೆಯುವ ಈ ಅಭಿಯಾನ ಜಿಲ್ಲಾ ಮತ್ತು ಮಹಾಶಕ್ತಿ ಕೇಂದ್ರಮಟ್ಟಕ್ಕೂ ತಲುಪಬೇಕು. 2. ಸಮಸ್ತ-ಕರ್ನಾಟಕ 6. ದೇಶ : ವಿದೇಶ ರಾಜಕೀಯ ಕ್ರೀಡೆ ಆ ಆರೋಗ್ಯ - ಅಂಕಣ ನ ವಿಡಿಯೋ-ಗ್ಯಾಲರಿ ಕಾಂಗ್ರೆಸ್‌ನಿಂದ ಸಂವಿಧಾನ ದುರ್ಬಳಕೆ ಬಗ್ಗೆ ಮಾಹಿತಿ ನೀಡಿ, ನಿಜವಾದ ಸಂವಿಧಾನ ವಿರೋಧಿಗಳು ಯಾರು ಎಂಬುದನ್ನು ಜನರಿಗೆ ತಿಳಿಸಿ, ಬಿಜೆಪಿ ಬಗೆಗಿನ ಅಪ ಪ್ರಚಾರ ತೊಡೆದು ಹಾಕಬೇಕು ಎಂದು ಸಲಹೆ ನೀಡಿದ ವಿಜಯೇಂದ್ರ, ಕರ್ನಾಟಕ ಕೈಗೆತ್ತಿಕೊಂಡ ಈ ಅಭಿಯಾನವನ್ನು ಪ್ರಧಾನಿ ಮೋದಿ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಡ್ಡಾ ಅವರು ಇಡೀ ದೇಶಕ್ಕೆ ವಿಸ್ತರಿಸಿರುವುದು ಸಂತಸ ತಂದಿದೆ ಎಂದರು.

> **ಡಾ.ಅಂಬೇಡ್ಕರ್ ಅವರು ಸಂವಿಧಾನದ 370ನೇ ವಿಧಿ ವಿರೋಧಿಸಿದರೂ ಕಾಂಗ್ರೆಸ್ ಹಿಂಪಡೆಯಲಿಲ್ಲ. ಅಷ್ಟೇ ಅಲ್ಲ, ಇಂದಿರಾಗಾಂಧಿಯವರು ತಮ್ಮ ಸ್ವಾರ್ಥ, ಅಧಿಕಾರದ ಲಾಲಸೆಗೆ ದೇಶದ ಮೇಲೆ ತುರ್ತುಪರಿಸ್ಥಿತಿ ಹೇರಿ, ಎರಡು ವರ್ಷಗಳ ಕಾಲ ಸಂವಿಧಾನವನ್ನೇ ತಟಸ್ಥಗೊಳಿಸಿದರು. ಸರ್ವರಿಗೂ ಸಮಾನ ಅವಕಾಶ, ಎಲ್ಲರನ್ನೂ ಒಗ್ಗೂಡಿಸುವ ಧರ್ಮಗ್ರಂಥವೇ ಸಂವಿಧಾನ ಎಂದು ಛಲವಾದಿ ಹೇಳಿದರು.**

ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ ಮಾತನಾಡಿ ಸಂವಿಧಾನ, ಸಾಮಾಜಿಕ ನ್ಯಾಯದ ನೈಜ ವಿರೋಧಿ ಕಾಂಗ್ರೆಸ್ ಪಕ್ಷವಾಗಿದೆ.

ಆದರೆ ಬಿಜೆಪಿ ಬಗ್ಗೆ ಅಪಪ್ರಚಾರ ಮಾಡುತ್ತಿದೆ. ಪ್ರಧಾನಿ ಮೋದಿಯವರು ಯಾವುದೇ ಕಾರಣಕ್ಕೂ ಸಂವಿಧಾನ ಬದಲಾವಣೆ ಅಸಾಧ್ಯವೆಂದು ಸ್ಪಷ್ಟಪಡಿಸಿ ಸಂದೇಹ ನಿವಾರಿಸುವ ಜತೆಗೆ ಅಪಪ್ರಚಾರ ನಡೆಸುತ್ತಿರುವವರಿಗೆ ತಕ್ಕ ಉತ್ತರ ನೀಡಿದ್ದಾರೆ

> **ಸಂಸದ ಬಸವರಾಜ ಬೊಮ್ಮಾಯಿ ಮಾತನಾಡಿ, ಸಂವಿಧಾನ ವಿಚಾರದಲ್ಲಿ ಕಾಂಗ್ರೆಸ್ ಪಕ್ಷದ್ದು ಶೂನ್ಯ ಧೋರಣೆಯಾಗಿದೆ. ರಾಹುಲ್ ಗಾಂಧಿಯವರು ಖಾಲಿ ಹಾಳೆಯಿರುವ ಸಂವಿಧಾನ ಪುಸ್ತಕ ಹಿಡಿದು ಓಡಾಡುತ್ತಾರಲ್ಲ, ಅದೇ ಮನಸ್ಥಿತಿ ಕಾಂಗ್ರೆಸ್ ಪಕ್ಷದ್ದಾಗಿದೆ ಎಂದು ವಾಗ್ದಾಳಿ ಮಾಡಿದರು. ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಸಂವಿಧಾನದ ಬಗ್ಗೆ ಕಾಂಗ್ರೆಸ್ ಪಕ್ಷದ್ದು ಸದಾ ತಿರಸ್ಕಾರ ಮನೋಭಾವ ತುರ್ತು ಪರಿಸ್ಥಿತಿ ಮೇಲ್ನೋಟದ ನಿದರ್ಶನ. ಸಂವಿಧಾನದ ಮೂಲ ಸಂರಚನೆಯನ್ನೇ ತಿರುಚಲು ಮುಂದಾದಾಗ, ಒಕ್ಕೂಟ ವ್ಯವಸ್ಥೆಯನ್ನು ಬುಡಮೇಲು ಹೊರಟಾಗ ಸುಪ್ರೀಂ ಕೋರ್ಟ್ ತಡೆಯೊಡ್ಡಿತು ಎಂದು ಬೊಮ್ಮಾಯಿ ನೆನಪಿಸಿದರು.**

ಎಂದರು. ಶಾಸಕರಾದ ಎನ್.ರವಿಕುಮಾರ್, ಬಿ.ಜಿ.ಪಾಟೀಲ್, ಬಸವ ರಾಜ ಮತ್ತಿಮೂಡ್, ಪಕ್ಷದ ರಾಜ್ಯ ಪ್ರಧಾನ ಕಾರ್ಯ ದರ್ಶಿ ಪಿ.ರಾಜೀವ್, ಕ್ಯಾ.ಗಣೇಶ್ ಕಾರ್ಣಿಕ್, ಉಮೇಶ ಕಾರಜೋಳ, ಪ್ರಕೋಷ್ಠಗಳ ರಾಜ್ಯ ಸಂಯೋಜಕ ಎಸ್.ದತ್ತಾತ್ರಿ ಸೇರು ಇತತರಿದ್ದರು.

## ಕಾರ್ಯಕ್ರಮಕ್ಕೆ ಬರಬೇಕಿದ್ದ ಸಿಎಂ ಬರಲೇ ಇಲ್ಲ ಬೇಸರಗೊಂಡ ಮಕ್ಕಳು

• **ಉದಯವಾಹಿನಿ, ಬೆಂಗಳೂರು**

ಸಿದ್ದರಾಮಯ್ಯ ಅವರು ಕಾರ್ಯಕ್ರಮಕ್ಕೆ ಬರಲಿದ್ದಾರೆಂದು, ತಮ್ಮ ವಿಚಾರಗಳನ್ನು ಸಿಎಂ ಎದುರು ಹಂಚಿಕೊಳ್ಳಬಹುದು ಎಂದು ಕಾದು ಕುಳಿತಿದ್ದ ರಾಜ್ಯದ 25 ಜಿಲ್ಲೆಗಳ ವಿದ್ಯಾರ್ಥಿಗಳು ಕೊನೆಗೆ ಸಿಎಂ ಬಾರದ ಕಾರಣಕ್ಕೆ ಬೇಸರಗೊಂಡ ಪ್ರಸಂಗ ನಡೆದಿದೆ. ಕರ್ನಾಟಕ ಮಕ್ಕಳ ಹಕ್ಕುಗಳ ವೀಕ್ಷಣಾಲಯ ಆಯೋಜಿಸಿದ್ದ ಮಕ್ಕಳ ಹಕ್ಕುಗಳ ಸಂಸತ್ ಸಮಾಲೋಚನೆಗೆ ಸಿಎಂ ಬರಬೇಕಿತ್ತು. ಆದರೆ ಅವರು ಗೈರು ಹಾಜರಾದ ಹಿನ್ನೆಲೆಯಲ್ಲಿ ಕಾರ್ಯಕ್ರಮಕ್ಕೆ ಬಂದಿದ್ದ ಸುಮಾರು 62 ವಿದ್ಯಾರ್ಥಿಗಳು ನಿರಾಸೆಗೊಳ್ಳಬೇಕಾಯಿತು. ಆದರೆ ಕಾರ್ಯಕ್ರಮದ ಬಗ್ಗೆ ಆಯೋಜಕರು ತಮಗೆ ಮಾಹಿತಿಯೇ ನೀಡಿಲ್ಲ ಎಂದು ಸಿಎಂ ಪ್ರತಿಕ್ರಿಯೆ ನೀಡಿದ್ದಾರೆ. ಕಾರ್ಯಕ್ರಮದಲ್ಲಿ ಶಿಕ್ಷಣ, ಆರೋಗ್ಯ, ಪರಿಸರ ಸಮಸ್ಯೆಗಳ ಬಗ್ಗೆ ವಿದ್ಯಾರ್ಥಿಗಳು ಕಳವಳ ವ್ಯಕ್ತಪಡಿಸಿದರು. ಇನ್ನು ಕಾರ್ಯಕ್ರಮದಲ್ಲಿ ಸಿಎಂ ಅವರ ಬದಲಾಗಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್ ಪಾಲ್ಗೊಂಡಿದ್ದರು.

## ಭೀಕರ ಘಟನೆ: ಪ್ರೇಯಸಿಯನ್ನು ಕೊಚ್ಚಿ ಕೊಂದ ಪಾಗಲ್ ಪ್ರೇಮಿ

• **ಉದಯವಾಹಿನಿ, ಬೆಂಗಳೂರು**

ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಯುವತಿಯೊಬ್ಬಳನ್ನು ಪ್ರಿಯಕರನೇ ಬರ್ಬರವಾಗಿ ಕೊಚ್ಚಿ ಕೊಲೆ ಮಾಡಿರುವ ಘಟನೆ ನಗರದ ಇಂದಿರಾನಗರ ಅಪಾರ್ಟ್‌ಮೆಂಟ್ ಒಂದರಲ್ಲಿ ನಡೆದಿದೆ. - ರಾಜಕೀಯ ಅಸ್ಸಾಂ ಮೂಲದ ಮಾಯಾ ಗೊಗಾಯ್ ಎಂಬುವವರು ನಗರದ ಖಾಸಗಿ ಕಂಪೆನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಬೆಂಗಳೂರು ಹೀಗೆ ಕೇರಳದ ಆರವ್ ಅನಾಯ್ ಎಂಬಾತ ಪರಿಚಯವಾಗಿದ್ದ, ಈ ವೇಳೆ ಪರಿಚಯ ಸ್ನೇಹಕ್ಕೆ ತಿರುಗಿತ್ತು. ಈ ದೇಶ ನ. ವಿದೇಶ . ಸಿನಿಮಾ ಕ್ರೀಡೆ ಇದೀಗ ಯುವತಿಯನ್ನು ಆರೋಪಿ ಆರವ್ ದಿ ರಾಯಲ್ ಲಿವಿನ್ಸ್ ನಲ್ಲಿ ಸರ್ವೀಸ್ ಅಪಾರ್ಟ್‌ಮೆಂಟ್ ನಲ್ಲಿ ಚಾಕುವಿನಿಂದ ಇರಿದು ಕೊಲೆ ಮಾಡಿ ಎಸ್ಕೆಪ್ ಆಗಿದ್ದಾನೆ. ಕೊಲೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಇನ್ನೂ ಈ ಘಟನೆ ಸಂಬಂಧ ಸ್ಥಳಕ್ಕೆ ಇಂದಿರಾ ನಗರ ಪೊಲೀಸರ ಭೇಟಿ ಪರಿಶೀಲನೆ ನಡೆಸಿದ್ದಾರೆ.

## ಗ್ಯಾರೆಂಟಿ ಯೋಜನೆ ನಿಲ್ಲಿಸಿ ಎಂದ ಶಾಸಕ ಗವಿಯಪ್ಪ ಮೇಲೆ ಡಿಕೆಶಿ ಗರಂ: ನೋಟಿಸ್!

• **ಉದಯವಾಹಿನಿ, ಬೆಂಗಳೂರು**

ಕಾಂಗ್ರೆಸ್ ಗ್ಯಾರೆಂಟಿ ಯೋಜನೆ ಅನುಷ್ಠಾನ ವಿಚಾರವಾಗಿ ಸ್ವಪಕ್ಷದಿಂದಲೇ ಅಪಸ್ವರ ಕೇಳಿ ಬಂದಿದೆ. ಕ್ಷೇತ್ರಗಳಿಗೆ ಅನುದಾನ ಕೊರತೆ ಹಿನ್ನೆಲೆ ಶಾಸಕ ಗವಿಯಪ್ಪ ಎರಡು ಗ್ಯಾರೆಂಟಿಗಳನ್ನ ಕೈ ಬಿಡುವಂತೆ ಒತ್ತಾಯ ಮಾಡೋದಾಗಿ ಹೇಳಿದ್ದರು ಇದಕ್ಕೆ ಈಗ ಡಿಕೆಶಿ ಪ್ರತಿಕ್ರಿಯೆ ಖಾರವಾಗಿ ನೀಡಿದ್ದಾರೆ. ಈ ದೇಶ ನ. ವಿದೇಶ ಬೆಂಗಳೂರಿನಲ್ಲಿ ಮಾತಾಡಿದ ಅವರು, ಶಾಸಕ ಗವಿಯಪ್ಪ ಅವರಿಗೆ ಪಕ್ಷದಿಂದ ನೋಟಿಸ್ ನೀಡಲಾಗುತ್ತದೆ. ಯಾವುದೇ ಕಾರಣಕ್ಕೂ ಗ್ಯಾರೆಂಟಿಗಳನ್ನ ನಿಲ್ಲಿಸಲ್ಲ. ಈ ರೀತಿಯ ಗೊಂದಲ ಹೇಳಿಕೆ ಸರಿಯಲ್ಲ ಎಂದು ಡಿಕೆಶಿ ಗರಂ ಆಗಿದ್ದಾರೆ. . ಸಿನಿಮಾ ಕ್ರೀಡೆ ರಾಜ್ಯದ ಜನರಿಗೆ ಭರವಸೆ ನೀಡಿ ದೇವೆ. ಆ ಪ್ರಕಾರ ನಡೆದುಕೊಳ್ಳುತ್ತೇವೆ. ಬಡವರ ಪರ ಸರ್ಕಾರ ಇದೆ. ಶೋಷಿತರ ಧ್ವನಿಯಾಗಿ ನಿಲ್ಲುತ್ತೇವೆ. ಗ್ಯಾರೆಂಟಿ ಗಳನ್ನ ಅರ್ಹ ಫಲಾನುಭವಿಗಳಿಗೆ ಸಮರ್ಪಕವಾಗಿ ನೀಡುತ್ತೇವೆ ಎಂದು ಡಿಕೆಶಿ ಹೇಳಿದ್ದಾರೆ.

## ಆರ್‌ಟಿಐ ಕಾರ್ಯಕರ್ತ ಗಂಗರಾಜುಗೆ ಇಡಿ ಅಧಿಕಾರಿಗಳಿಂದ ನೋಟಿಸ್!

• **ಉದಯವಾಹಿನಿ, ಬೆಂಗಳೂರು**

ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಆರ್ ಟಿ ಐ ಕಾರ್ಯಕರ್ತ ಗಂಗರಾಜುಗೆ ಇಡಿ ಅಧಿಕಾರಿಗಳು ನೋಟಿಸ್ ನೀಡಿದ್ದಾರೆ. ORACLE Red Bull RAC-ING ಬೆಂಗಳೂರಿನ ಕಚೇರಿಗೆ ಬಂದು ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಮಾಹಿತಿ ನೀಡುವಂತೆ ದೂರವಾಣಿ ಕರೆ ಮೂಲಕ ಇಡಿ ಅಧಿಕಾರಿಗಳು ಸೂಚನೆ ನೀಡಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

## ಸ್ವಚ್ಛ ಹಾಗೂ ಆರೋಗ್ಯವಂತ ಪರಿಸರ ವೃದ್ಧಿಗಾಗಿ ಗಿಡಗಳನ್ನು ನೆಟ್ಟು ಬೆಳೆಸಿ

• **ಉದಯವಾಹಿನಿ, ಕೆ.ಆರ್.ಪುರ**

ಅನಾರೋಗ್ಯ ಮತ್ತು ಮಾಲಿನ್ಯ ನಗರದಲ್ಲಿ ಹೆಚ್ಚುತ್ತಿದೆ ಇದಕ್ಕೆ ಪರಿಸರ ನಾಶವೇ ಮುಖ್ಯ ಕಾರಣವೆಂದು ಮಿಡಿತ ಫೌಂಡೇಶನ್, ವೃಕ್ಷ ಬಚಾವೋ ಆಂದೋಲನ ಸಮಿತಿ ಅಧ್ಯಕ್ಷ ಪರಿಸರ ಮಂಜು ಹೇಳಿದರು. ಮಹದೇವಪುರ ಕ್ಷೇತ್ರದ ಬೆಳ್ಳಂದೂರು ಕೆರೆ ರಸ್ತೆ ಬದಿಗಳಲ್ಲಿ ಬಿಬಿಎಂಪಿ ಅರಣ್ಯ ಇಲಾಖೆ, ಮಿಡಿತ ಫೌಂಡೇಶನ್ ಸಹಯೋಗದೊಂದಿಗೆ 201 ಪಾರಂಪರಿಕ ಅರಳಿ, ಬೇವು, ಅತ್ತಿ, ಆಲ,ಬಸರಿ, ಕದಂಬ ಗಿಡಗಳನ್ನು ನೆಟ್ಟು ಅವರು ಮಾತನಾಡಿದರು. ಸ್ವಚ್ಛ ಹಾಗೂ ಆರೋಗ್ಯವಂತ ಪರಿಸರ ವೃದ್ಧಿಗಾಗಿ ಹಾಗೂ ಮುಂದಿನ ಪೀಳಿಗೆಯ ಭವಿಷಕ್ಕಾಗಿ ಹೆಚ್ಚು ಗಿಡಗಳನ್ನು ನೆಟ್ಟು ಬೆಳಸುವ ಅವಶ್ಯಕವಿದೆ ಎಂದರು. ವಿದೇಶಿ ಮರಗಳ ಬದಲಿಗೆ ಸ್ವದೇಶಿ ಮರಗಳನ್ನು ನಮ್ಮ ಪಾರಂಪರಿಕ ಮರಗಳನ್ನು ಬೆಳೆಸಿ ಈ ಮರಗಳು ಗಾಳಿ, ಮಳೆಗೆ ಬೀಳುವುದಿಲ್ಲ, ಇದರ ಬೇರು ಶಕ್ತಿಶಾಲಿ ಎಂದು ತಿಳಿಸಿದರು. ಇದೇ ವೇಳೆ ಭಾರತೀಯ ಸ್ತ್ರೀ ಶಕ್ತಿ ಸಂಘಟನಾ ಟ್ರಸ್ಟ್ ರಾಜ್ಯಾಧ್ಯಕ್ಷೆ ಶ್ರೀಮತಿ ಭಾಗ್ಯ ಸರ್ವನ್, ಸಂಸ್ಥೆಯ ಉಪಾಧ್ಯಕ್ಷ ಶಿವಪ್ಪ, ಪ್ರ.ಕಾರ್ಯದರ್ಶಿ ಸೌಮ್ಯ ಪವಾರ್, ಕನಕಮ್ಮ, ಗಂಗಧಾರ್ ಸೇರಿದಂತೆ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.


ಉದಯವಾಹಿನಿ ಚಿತ್ರ

## ದೇವನಹಳ್ಳಿಗೆ ಆಗಮಿಸಿದ ಕನ್ನಡದ ಜ್ಯೋತಿ ರಥ

• **ಉದಯವಾಹಿನಿ, ದೇವನಹಳ್ಳಿ**

ಮಂಡ್ಯದಲ್ಲಿ ಡಿ.20ರಿಂದ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ರಾಜ್ಯದಾದ್ಯಂತ ಸಂಚರಿಸುತ್ತಿರುವ ಕನ್ನಡದ ಜ್ಯೋತಿ ಹೊತ್ತ ಕನ್ನಡದ ತೇರು ಸೋಮವಾರ ದೇವನಹಳ್ಳಿ ಪಟ್ಟಣಕ್ಕೆ ಆಗಮಿಸಿದಾಗ ಅದ್ದೂರಿಯಾಗಿ ಸ್ವಾಗತ ನೀಡಲಾಯಿತು. ಮೆರವಣಿಗೆಯಲ್ಲಿ ಗಾರುಡಿ ಗೊಂಬೆಗಳು ನೃತ್ಯ, ವೀರಗಾಸೆ ತಂಡಗಳ ಆಕರ್ಷಕ ನೃತ್ಯವು ಸ್ವಾಗತಕ್ಕೆ ಮೆರಗು ನೀಡಿತು.

ತಾಲ್ಲೂಕು ಆಡಳಿತ, ಕನ್ನಡ, ಸಂಸ್ಕೃತಿ ಇಲಾಖೆ, ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಭುವನೇಶ್ವರಿ ತಾಯಿಗೆ ಪುಷ್ಪಾರ್ಚನೆ ನೆರವೇರಿಸಿ ಕನ್ನಡದ ರಥವನ್ನು ವಿಜೃಂಭಣೆಯಿಂದ ಸ್ವಾಗತಿಸಲಾಯಿತು. ರಥ ಯಾತ್ರೆ ವಿಶೇಷತೆ. ಕನ್ನಡ ಜ್ಯೋತಿ ರಥ ಯಾತ್ರೆಯ ವಾಹನದ ಮುಂಭಾಗದಲ್ಲಿ ಪ್ರಮುಖವಾಗಿ ತಾಯಿ ಭುವನೇಶ್ವರಿ ಮಾತೆ ಪ್ರತಿಮೆ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಸರ್.ಎಂ.ವಿಶ್ವೇಶ್ವರಯ್ಯ ಅವರ ಪ್ರತಿಮೆ ಎದ್ದುಕಾಣುತ್ತಿತ್ತು. ಭುವನೇಶ್ವರಿ ಬಳಿ ಕಾವೇರಿ ಪ್ರತಿಮೆ ಒಳಗೊಂಡ ಕೃಷ್ಣರಾಜ ಸಾಗರ ಅಣೆಕಟ್ಟು, ಜ್ಯೋತಿ ಹೊತ್ತ ರಥದ ಎಡ ಮತ್ತು ಬಲ ಬದಿಯಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ರಾಷ್ಟ್ರಕವಿ ಕುವೆಂಪು, ದ.ರಾ.ಬೇಂದ್ರೆ, ಶಿವರಾಮ ಕಾರಂತ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ವಿ.ಕೃ.ಗೋಕಾಕ್, ಯು.ಆರ್.ಅನಂತಮೂರ್ತಿ, ಗಿರೀಶ್ ಕಾರ್ನಾಡ್, ಚಂದ್ರಶೇಖರ್ ಕಂಬಾರ ಅವರ ಭಾವಚಿತ್ರ ಗಮನ ಸೆಳೆಯುತ್ತಿದೆ.


ಉದಯವಾಹಿನಿ ಚಿತ್ರ

## ಪ್ರಾಸ್ಟೇಟ್ ಕ್ಯಾನ್ಸರ್ ಜಾಗೃತಿಗಾಗಿ ಸೈಕ್ಲೋಥಾನ್

• **ಉದಯವಾಹಿನಿ, ಬೆಂಗಳೂರು**

ಪ್ರಾಸ್ಟೇಟ್ ಕ್ಯಾನ್ಸರ್ ಜಾಗೃತಿ ಮಾಸದ ಅಂಗವಾಗಿ ಎಚ್‌ಸಿಜಿ ಕ್ಯಾನ್ಸರ್ ಸೆಂಟರ್ ಭಾನುವಾರ ಸೈಕ್ಲೋಥಾನ್ ಆಯೋಜಿಸಿತ್ತು. 6.5 ಕಿ.ಮೀ. ಸಾಗಿದ ಸೈಕ್ಲಿಂಗ್‌ನಲ್ಲಿ 400 ಕ್ಕೂ ಹೆಚ್ಚು ಜನ ಭಾಗವಹಿಸಿ, ಪ್ರಾಸ್ಟೇಟ್ ಕ್ಯಾನ್ಸನ್ನು ಆರಂಭಿಕ ಪತ್ತೆ ಮತ್ತು ನಿಯಮಿತ ಸ್ಟೀನಿಂಗ್ ನಡೆಸುವಂತೆ ಅರಿವು ಮೂಡಿಸಿದರು.


ಉದಯವಾಹಿನಿ ಚಿತ್ರ

**ಎಚ್‌ಸಿಜಿ ಕ್ಯಾನ್ಸರ್ ಸೆಂಟರ್ ಆಯೋಜನೆ**

ಎಚ್‌ಸಿಜಿ ಸಿಇಓ ಮನೀಶಾ ಕುಮಾರ್, ಅಧಿಕಾರಿಗಳಾದ ಡಾ. ರಘುನಾಥ್,ಅರ್ಚನಾ ರುದ್ರ, ಅರುಣ್ ಶಿವನೇಸನ್ ಸೈಕ್ಲೋಥಾನ್ ಚಾಲನೆ ನೀಡಿದರು. ಜಾಥಾವು ರೆಸಿಡೆನ್ಸಿ ರಸ್ತೆ, ಕ್ರೀನ್ಸ್ ರಸ್ತೆ, ವಿಧಾನ ಸೌಧ ಮತ್ತು ಕೆ.ಆರ್. ವೃತ್ತ ಮಾರ್ಗವಾಗಿ ಚಲಿಗೆ ಎಚ್‌ಸಿಜಿ ಆಸ್ಪತ್ರೆಗೆ ಹಿಂದಿರುಗಿತು. ಈ ವೇಳೆ ಮಾತನಾಡಿದ ಎಂ.ಎಸ್.ಮನೀಶಾ ಕುಮಾರ್, ಸೈಕ್ಲೋಥಾನ್ ಪ್ರಮುಖ ಉದ್ದೇಶಕ್ಕಾಗಿ ಸಮುದಾಯವನ್ನು ಒಗ್ಗೂಡಿಸಲು ಉತ್ತಮ ವೇದಿಕೆಯಾಗಿದ್ದು, ಪ್ರಾಸ್ಟೇಟ್ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಪುರುಷರಿಗೆ ತಮ್ಮ ಆರೋಗ್ಯದ ಬಗ್ಗೆ ಮುಂಜಾಗ್ರತೆ ವಹಿಸುವ ಕುರಿತು ಅರಿವು ಮೂಡಿಸಲು ಸಹಕಾರಿಯಾಗಿದೆ. ಏಇಎ ಕ್ಯಾನ್ಸರ್ ಸೆಂಟರ್‌ನಲ್ಲಿ, ಪ್ರಾಸ್ಟೇಟ್ ಕ್ಯಾನ್ಸರ್‌ಗೆ ವಿಶ್ವದರ್ಜೆಯ ಆರೈಕೆ ಒದಗಿಸಲು ನಾವು ಬದ್ಧರಾಗಿದ್ದೇವೆ. ಇಂತಹ ಉಪಕ್ರಮಗಳು ಇನ್ನಷ್ಟು ಸೇವೆ ಒದಗಿಸಲು ಅವಕಾಶ ಮಾಡಿಕೊಡುತ್ತವೆ ಎಂದರು. ಬೆಂಗಳೂರಿನ ಕೆಆರ್ ರಸ್ತೆಯ ಎಚ್‌ಸಿಜಿ ಕ್ಯಾನ್ಸರ್ ಕೇಂದ್ರದ ಯುರೋ ಆಂಕೊಲಾಜಿಯ ನಿರ್ದೇಶಕ ಡಾ. ರಘುನಾಥ್ ಮಾತನಾಡಿ, ಪ್ರಾಸ್ಟೇಟ್ ಕ್ಯಾನ್ಸರ್ ಪುರುಷರಲ್ಲಿ ಹೆಚ್ಚುತ್ತಿರುವ ಸಮಸ್ಯೆಯಾಗಿದ್ದರೂ, ಆರಂಭಿಕ ಹಂತದಲ್ಲಿ ಪತ್ತೆಯಾದರೆ ಅದನ್ನು ಸಂಪೂರ್ಣವಾಗಿ ಗುಣಪಡಿಸಲು ಸಾಧ್ಯ.


> **ಇಂದಿನ ಸೈಕ್ಲೋಥಾನ್ ಎಲ್ಲರೂ ಆರೋಗ್ಯದ ಜವಾಬ್ದಾರಿಯನ್ನು ಹೇಗೆ ತೆಗೆದುಕೊಳ್ಳಬಹುದು ಎಂಬುದನ್ನು ನೆನಪಿಸಿದೆ. ನಮ್ಮ ಆಸ್ಪತ್ರೆಯಲ್ಲಿ ರೋಗಿಗಳಿಗೆ ಅತ್ಯಾಧುನಿಕ ಆರೈಕೆಯನ್ನು ಒದಗಿಸುತ್ತಿದ್ದೇವೆ. ನಿಯಮಿತ ಸ್ರೀನಿಂಗ್ ಮತ್ತು ಆರಂಭಿಕ ಪತ್ತೆಯಿಂದ ಹೆಚ್ಚಿನ ಜೀವಗಳನ್ನು ಉಳಿಸಲಾಗಿದೆ ಎಂದರು.**

## ನ.30 ರೊಳಗೆ ಈ ಕೆಲಸ ಮಾಡದಿದ್ರೆ ನಿಮಗೆ ಸಿಗಲ್ಲ ಪಿಂಚಣಿ!

• **ಉದಯವಾಹಿನಿ, ಬೆಂಗಳೂರು**

ನೀವು ಪ್ರತಿ ತಿಂಗಳು ಪಿಂಚಣಿ ಪಡೆಯುತ್ತಿದ್ದರೆ, ನಿಮಗೆ ಒಂದು ಪ್ರಮುಖ ಸುದ್ದಿ ಇಲ್ಲಿದೆ. ನವೆಂಬರ್ 30 ರೊಳಗೆ ನೀವು ಲೈಫ್ ಸರ್ಟಿಫಿಕೇಟ್ ಸಲ್ಲಿಸದಿದ್ದರೆ, ಪಿಂಚಣಿ ಕೂಡ ನಿಲ್ಲಬಹುದು. ಪಿಂಚಣಿ ಪಡೆಯಲು ಪಿಂಚಣಿದಾರರು ಪ್ರತಿ ವರ್ಷ ಜೀವನ ಪ್ರಮಾಣಪತ್ರವನ್ನು ಸಲ್ಲಿಸಬೇಕಾಗುತ್ತದೆ.

ಲೈಫ್ ಸರ್ಟಿಫಿಕೇಟ್ ಏಕೆ ತುಂಬಾ ಮುಖ್ಯ ಮತ್ತು ಅದನ್ನು ಸಲ್ಲಿಸುವ ವಿಧಾನ ಯಾವುದು ಎಂದು ನಾವು ನಿಮಗೆ ಹೇಳುತ್ತೇವೆ. ಡಿಜಿಟಲ್ ಲೈಫ್ ಸರ್ಟಿಫಿಕೇಟ್ ಎಂದರೇನು


ಉದಯವಾಹಿನಿ ಚಿತ್ರ

ಡಿಜಿಟಲ್ ಲೈಫ್ ಸರ್ಟಿಫಿಕೇಟ್ ಬಯೋಮೆಟ್ರಿಕ್ ಸೇವೆಯಾಗಿದ್ದು, ಪಿಂಚಣಿದಾರರು ತಮ್ಮ ಗುರುತನ್ನು ಪರಿಶೀಲಿಸಲು ಮುಖ, ಬೆರಳಚ್ಚು ಅಥವಾ ಐರಿಶ್ ಬಯೋಮೆಟ್ರಿಕ್ ತಂತ್ರಜ್ಞಾನವನ್ನು ಬಳಸಬೇಕಾಗುತ್ತದೆ. ಇದನ್ನು ಮೊದಲು ಪಿಂಚಣಿ ವಿತರಣಾ ಕೇಂದ್ರದಲ್ಲಿ ವೈಯಕ್ತಿಕವಾಗಿ ಸಲ್ಲಿಸಬೇಕಾಗಿತ್ತು.

ಕೇಂದ್ರ ಸರ್ಕಾರವು ಡಿಜಿಟಲ್ ಲೈಫ್ ಸರ್ಟಿಫಿಕೇಟ್ ಸೌಲಭ್ಯವನ್ನು ಪರಿಚಯಿಸಿದೆ, ಇದು ಪಿಂಚಣಿದಾರರಿಗೆ ಈ ಕೆಲಸವನ್ನು ಆನ್ಲೈನ್ನಲ್ಲಿ ಮತ್ತು ತಮ್ಮ ಮನೆಗಳ ಆರಾಮದಿಂದ ಸುಲಭವಾಗಿ ಪೂರ್ಣಗೊಳಿಸಲು ಅನುವು ಮಾಡಿಕೊಡುತ್ತದೆ. ಪಿಂಚಣಿದಾರರು ಕೆಲವು ಪ್ರಮುಖ ಸ್ಥಳಗಳಿಗೆ ಭೇಟಿ ನೀಡುವ ಮೂಲಕ ಜೀವನ ಪ್ರಮಾಣಪತ್ರವನ್ನು ಸ್ವತಃ ಸಲ್ಲಿಸಬಹುದು.

> **ಭೌತಿಕ ಜೀವನ ಪ್ರಮಾಣಪತ್ರಗಳನ್ನು ಸಲ್ಲಿಸುವಲ್ಲಿ ಪಿಂಚಣಿದಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ನಿವಾರಿಸಲು ಸೇವೆಯನ್ನು ವಿಶೇಷವಾಗಿ ಪ್ರಾರಂಭಿ ಸಲಾಗಿದೆ. ಡಿಜಿಟಲ್ ಲೈಫ್ ಸರ್ಟಿಫಿಕೇಟ್ ಮಾಡುವುದು ಹೇಗೆ? ಮೊದಲನೆಯದಾಗಿ, ನಿಮ್ಮ ಮೊಬೈಲ್ ಫೋನ್ನಲ್ಲಿ ಗೂಗಲ್ ಪ್ಲೇ ಸ್ಟೋರ್ನಿಂದ ಆಧಾರ್ಫೇಸ್‌ಆರ್ಡಿ ಮತ್ತು ಜೀವನ್ ಪ್ರಮಾನ್ ಫೇಸ್ ಅಪ್ಲಿಕೇಶನ್ ಅನ್ನು ಡೌನ್ಲೋಡ್ ಮಾಡಬೇಕು. ಈಗ ಅಪ್ಲಿಕೇಶನ್ ಸಹಾಯದಿಂದ, ನೀವು ನಿಮ್ಮ ಗುರುತನ್ನು ಬಯೋಮೆಟ್ರಿಕ್ ಮೂಲಕ ಪರಿಶೀಲಿಸಬಹುದು.**

## 46 ಸಾವಿರ ಕೋಟಿ ರೂ. ಭ್ರಷ್ಟಾಚಾರ 9 ಐಎಎಸ್ ಅಧಿಕಾರಿಗಳ ವಿರುದ್ಧ ದೂರು!

• **ಉದಯವಾಹಿನಿ, ಬೆಂಗಳೂರು**

ಬಿಬಿಎಂಪಿ ವ್ಯಾಪ್ತಿಯಲ್ಲಿ ರಸ್ತೆ ನಿರ್ವಹಣೆ ವಿಚಾರವಾಗಿ ಬ್ರಹ್ಮಾಂಡ ಭ್ರಷ್ಟಾಚಾರ ನಡೆದಿರುವ ಬಗ್ಗೆ ದೊಡ್ಡ ಸಂಶಯ ವ್ಯಕ್ತವಾಗಿದೆ. ಈ ಬಗ್ಗೆ 18 ಮಂದಿ ಹಿರಿಯ ಐಎಎಸ್ ಅಧಿಕಾರಿಗಳ ವಿರುದ್ಧ ಇಡಿಯಲ್ಲಿ ದೂರು ದಾಖಲಾಗಿದೆ.

2013-14 ರಿಂದ 2023-24 ರ ವರೆಗಿನ 9 ಳ ವರ್ಷಗಳ ಅವಧಿಯಲ್ಲಿ ಬಿಬಿಎಂಪಿ ವ್ಯಾಪ್ತಿಯ ರಸ್ತೆಗಳ ಅಭಿವೃದ್ಧಿ ಕಾರ್ಯಗಳಿಗೆಂದು 46,300 ಕೋಟಿ ರೂಪಾಯಿಗಳ ಬೃಹತ್ ಮೊತ್ತದ ಅನುದಾನ ಬಿಡುಗಡೆಯಾಗಿದ್ದು ಇದರ ಪೈಕಿ ಶೇ. 75% ರಷ್ಟಕ್ಕೂ ಹೆಚ್ಚು ಹಣ ಸಂಪೂರ್ಣವಾಗಿ ದುರ್ಬಳಕೆಯಾಗಿರುವ ಆರೋಪ ಕೇಳಿಬಂದಿದೆ. ಈ ಹಿನ್ನೆಲೆಯಲ್ಲಿ 4,113 ಪುಟಗಳ ದಾಖಲೆಗಳ ಸಹಿತ ಪಾಲಿಕೆಯ ಮುಖ್ಯ ಆಯುಕ್ತರಾದ ತುಷಾರ್ ಗಿರಿನಾಥ್, ಆಡಳಿತಾಧಿಕಾರಿಗಳಾದ ಉಮಾಶಂಕರ್ ಸೇರಿದಂತೆ 18 ಐಎಎಸ್ ಅಧಿಕಾರಿಗಳು ಹಾಗೂ ಈ ಹಗರಣದಲ್ಲಿ ಭಾಗಿಯಾಗಿರುವ ಪಾಲಿಕೆಯ ಸಂಬಂಧಪಟ್ಟ ಎಲ್ಲಾ ಭ್ರಷ್ಟ ಅಧಿಕಾರಿಗಳ ವಿರುದ್ಧ ಜಾರಿ ನಿರ್ದೇಶನಾಲಯದಲ್ಲಿ ಬಿಜೆಪಿ ಮುಖಂಡ ಎನ್‌ಆರ್ ರಮೇಶ್ ರಿಂದ ದೂರನ್ನು ದಾಖಲಿಸಲಾಗಿದೆ. 46,300 ಕೋಟಿ ರೂಪಾಯಿಗಳಷ್ಟು ಸಾರ್ವಜನಿಕರ ಹಣವನ್ನು ದುರ್ಬಳಕೆ ಮಾಡಿಕೊಂಡಿರುವ ಬೃಹತ್ ಹಗರಣಕ್ಕೆ ಸಂಬಂಧಿಸಿದಂತೆ, ಎಲ್ಲಾ ಆರೋಪಿಗಳ ವಿರುದ್ಧ BNS -2023 ರನ್ವಯ ಸಾರ್ವಜನಿಕರ ಹಣ ದುರ್ಬಳಕೆ, ವಂಚನೆ, ಭ್ರಷ್ಟಾಚಾರ, ನಕಲಿ ದಾಖಲೆ ತಯಾರಿಕೆ ಮತ್ತು ಅಧಿಕಾರ ದುರುಪಯೋಗ ಪ್ರಕರಣ ಗಳನ್ನು ದಾಖಲಿಸಿಕೊಂಡು ಕಾನೂನು ರೀತಿ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಬಿಜೆಪಿ ಮುಖಂಡ ಎನ್ ಆರ್ ರಮೇಶ್ ವಿನಂತಿಸಿಕೊಂಡಿದ್ದಾರೆ.

## ಶ್ರೀ ಮಲ್ಲೇಶ್ವರ ಸ್ವಾಮಿ ದೇಗುಲದಲ್ಲಿ ಅದ್ದೂರಿ ದೀಪೋತ್ಸವ

• **ಉದಯವಾಹಿನಿ, ಪೀಣ್ಯದಾಸರಹಳ್ಳಿ**

ದಾಸನಪುರ ಹೋಬಳಿ, ತಮ್ಮೇನಹಳ್ಳಿ ಪಾಳ್ಯದ ಶಿವತೇನಗರ ಶ್ರೀ ಮಲ್ಲೇಶ್ವರ ಸ್ವಾಮಿ ದೇವಾಲಯದಲ್ಲಿ ಕಡೆ ಕಾರ್ತಿಕ ಸೋಮವಾರದ ಅಂಗವಾಗಿ ಹಮ್ಮಿಕೊಂಡಿದ್ದ ದೀಪೋತ್ಸವ ಕಾರ್ಯಕ್ರಮ ಅದ್ದೂರಿಯಾಗಿ ನೆರವೇರಿತು.


ಉದಯವಾಹಿನಿ ಚಿತ್ರ

ದೇವಾಲಯದ ಸುತ್ತಮುತ್ತಲಿನ ಬಿಜಿಎಸ್ ಲೇಔಟ್, ಆರ್ ಸಿ ಲೇಔಟ್ ,ಶಿವತೇಜನಗರ, ಓಂ ಸಾಯಿ ನಗರ ಹಾಗೂ ತಮ್ಮೇನಹಳ್ಳಿ ಪಾಳ್ಯ ಮತ್ತು ಕುದುರೆಗೆರೆ ಗ್ರಾಮಗಳ ಸಹಸ್ರಾರು ಭಕ್ತಾದಿಗಳು ದೀಪೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ದೀಪಗಳನ್ನು ಬೆಳಗುವ ಮೂಲಕ ಸ್ವಾಮಿಗೆ ತಮ್ಮ ಭಕ್ತಿಯನ್ನು ಸಮರ್ಪಿಸಿದರು. ಸದರಿ ದೇವಾಲಯದಲ್ಲಿ ಇದು ಪ್ರಥಮ ವರ್ಷದ ದೀಪೋತ್ಸವ ಕಾರ್ಯಕ್ರಮವಾಗಿದ್ದು ಮೊದಲನೇ ವರ್ಷವಾದ ಈ ಬಾರಿ 5,1 ದೀಪಗಳನ್ನು ಬೆಳಗಿಸಲಾಯಿತು ಜೊತೆಗೆ ಅನ್ನ ದಾಸೋಹ ಸಹ ಏರ್ಪಡಾಗಿತ್ತು


## ಎಟಿಎಂ ಹೊತ್ತೊಯ್ದರೂ ಸಿಗದ ರೂ.10 ಲಕ್ಷ ನೀಲಗಿರಿ ತೋಪಿನಲ್ಲಿ ಯಂತ್ರ ಬಿಟ್ಟು ಪರಾರಿ

• **ಉದಯವಾಹಿನಿ, ಆನೇಕಲ್**

ತಾಲ್ಲೂಕಿನ ಅತ್ತಿಬೆಲೆ ಕೈಗಾರಿಕಾ ಪ್ರದೇಶ ವಡ್ಡರಪಾಳ್ಯ ಬಳಿಯ ಎಟಿಎಂ ಯಂತ್ರವನ್ನು ಕದ್ದೊಯ್ದ ಕಳ್ಳರು ಅದರಲ್ಲಿದ್ದ ಹಣ ಪಡೆಯಲಾಗದೆ ಯಂತ್ರವನ್ನು ಮಂಚನಹಳ್ಳಿಯ ನೀಲಗಿರಿ ತೋಪಿನಲ್ಲಿ ಎಸೆದು ಹೋಗಿದ್ದಾರೆ. ಬೆಳಗಿನ ಜಾವ 3.30ರ ಸುಮಾರಿಗೆ ಸರಕು ಸಾಗಣೆ ವಾಹನದಲ್ಲಿ ಬಂದ ವ್ಯಕ್ತಿಗಳಿಬ್ಬರು ವಡ್ಡರಪಾಳ್ಯದ ಬಳಿ ಇರುವ ಎಟಿಎಂನಲ್ಲಿ ಹಣ ಕದಿಯಲು ಯತ್ನಿಸಿದ್ದರು.

ಅದು ಸಾಧ್ಯವಾಗದೇ ಎಟಿಎಂ ಯಂತ್ರವನ್ನೇ ಕಿತ್ತು ವಾಹನದಲ್ಲಿ ಹಾಕಿಕೊಂಡು ಹೋಗಿರುವ ದೃಶ್ಯ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಅಲ್ಲಿಂದ ಹೊರಟ ಕಳ್ಳರು ಮಂಚನಹಳ್ಳಿಯ ನೀಲಗಿರಿ ತೋಪಿನಲ್ಲಿ ಎಟಿಎಂ ಅನ್ನು ಹ್ಯಾಕ್ -ಸಾ ಬ್ಲಡ್‌ನಿಂದ ಕತ್ತರಿಸಿ ಹಣ ದೋಚುವ ಯತ್ನ ನಡೆಸಿದ್ದಾರೆ. ಆದರೆ, ಬೆಳಗಾದರೂ ಎಟಿಎಂನಿಂದ ಹಣ ತೆಗೆಯಲು ಸಾಧ್ಯವಾಗಲಿಲ್ಲ. ಬೆಳಗಾಗುತ್ತಿದ್ದಂತೆ ಜನಂಚಾರ ಆರಂಭವಾದೊಡನೆ ಕಳ್ಳರು ಯಂತ್ರವನ್ನು ಅಲ್ಲೇ ಬಿಟ್ಟು ಪರಾರಿಯಾಗಿದ್ದಾರೆ. ಸ್ಥಳೀಯ ಮಾಹಿತಿ ಮೇರೆಗೆ ಸ್ಥಳಕ್ಕೆ ಭೇಟಿ ನೀಡಿದ ಅತ್ತಿಬೆಲೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಕೆನರಾ ಬ್ಯಾಂಕ್‌ಗೆ ಸೇರಿದ ಎಟಿಎಂನಲ್ಲಿ ರೂ.10 ಲಕ್ಷ ಹಣವಿತ್ತು ಎನ್ನಲಾಗಿದೆ.


ಉದಯವಾಹಿನಿ ಚಿತ್ರ

# ಹೋರಾಟದ ರಿಸಲ್ಟ್ ಏನಾಯ್ತು 3 ಕಡೆ ನಾವೇ ಗೆದ್ದೆವು

## ಇನ್ನು ಬಿಜೆಪಿಯವರು ಯಾವ ಲೆಕ್ಕ ನಮಗೆ ಎಂದು ಸಚಿವ ಶಿವರಾಜ ತಂಗಡಗಿ ಹೇಳಿಕೆ

• **ಉದಯವಾಹಿನಿ, ಬೆಂಗಳೂರು**

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೇಲೆ ಮುಡಾಗೆ ಸಂಬಂಧಿಸಿದಂತೆ ಆರೋಪ ಮಾಡಲಾಯಿತು. ಅಲ್ಲದೇ ಬಿಜೆಪಿ - ಜೆಡಿಎಸ್‌ನವರು ಕಾಂಗ್ರೆಸ್ ನವರು ಹೋರಾಟ ಮಾಡಿದ್ದಾರೆ. ಆದರೆ, ಅದರಿಂದ ಏನಾಯ್ತು. ಜನ ಅವರಿಗೆ ಪಾಠ ಕಲಿಸಿದ್ದಾರೆ. ಕಾಂಗ್ರೆಸ್‌ನವರು ನಾವು ಬ್ರಿಟಿಷರನ್ನು ಒದೊಡಿಸಿದ್ದೇವೆ. ಇನ್ನು ಬಿಜೆಪಿಯವರು ಯಾವ ಲೆಕ್ಕ ನಮಗೆ ಎಂದು ಸಚಿವ ಶಿವರಾಜ ತಂಗಡಗಿ ಹೇಳಿದ್ದಾರೆ. ಸಿದ್ದರಾಮಯ್ಯ ಅವರ ವಿರುದ್ಧದ ಕೇಸ್ ರಾಜಕೀಯ ಪ್ರೇರಿತ ಕೇಸ್. ಬಹಳ ಸ್ಪಷ್ಟವಾಗಿ ಎಲ್ಲಾರೂ ಹೇಳಿದ್ದೀವಿ, ಜನರು ಸಹ ನೋಡುತ್ತಿರುತ್ತಾರೆ. ಸಿದ್ದರಾಮಯ್ಯ ಈ ರಾಜ್ಯಕ್ಕೆ ಸಾಕಷ್ಟು ಕೊಡುಗೆ ಕೊಟ್ಟಿದ್ದಾರೆ. ಅದನ್ನು ಸಹಿಸಿಕೊಳ್ಳಲಾಗದೇ ಸಿಬಿಐ ಕೇಸ್ ಹಾಕುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ.

ಇಂತಹದಕ್ಕೆಲ್ಲ ನಾವು ಹೆದರಲ್ಲ. ಮುಡಾ ವಿಚಾರದಲ್ಲಿ ರಾಜಕೀಯ ಪ್ರೇರಿತ ಕೇಸ್ ಹಾಕಿದ್ದಕ್ಕೆ ರಾಜಕೀಯವಾಗಿ ಈಗಾಗಲೇ ಉತ್ತರ ಕೊಟ್ಟಿದ್ದೀವಿ. ಈಚೆಗೆ ನಡೆದ ಮೂರು ಉಪ ಚುನಾವಣೆಗಳಲ್ಲಿ ನಾವು ಗೆದ್ದಿದ್ದೀವಿ, ರಾಜಕೀಯವಾಗಿ ಉತ್ತರ ಕೊಟ್ಟಿದ್ದೇವೆ. ಬಿಜೆಪಿ - ಜೆಡಿಎಸ್‌ಗೆ ಜನರು ಯಾರ ಪರ ಇದ್ದಾರೆ ಎಂಬ ಸ್ಪಷ್ಟ ಸಂದೇಶ ಸಿಕ್ಕಿದೆ. ಸಿದ್ದರಾಮಯ್ಯ ಅವರ ವಿರುದ್ಧ ಕೇಸ್ ಹಾಕಿದ್ದಕ್ಕೆ ಇವರ ವಿರುದ್ಧ ರಾಜ್ಯದ ಜನ ರೊಚ್ಚಿಗೆದ್ದಿದ್ದಾರೆ ಎಂದು ಸ್ಪಷ್ಟವಾಗಿದೆ. ನಮ್ಮ ಮೇಲೆ ಎಂತಹ ಕೇಸ್ ಹಾಕಿದ್ದರೂ, ರಾಜಕೀಯವಾಗಿ ಜನ ನಿರ್ಧಾರ ಮಾಡ್ತಾರೆ. ಅಲ್ಲದೇ ಮೈಸೂರು ಭಾಗ, ಕಿತ್ತೂರು ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಮೂರು ಭಾಗಗಳಲ್ಲಿ ನಾವು ಗೆದ್ದಿದ್ದೀವಿ.


ಉದಯವಾಹಿನಿ ಚಿತ್ರ

**ಅಂತಹ ಅಧಿಕಾರಿಗಳ ಮೇಲೆ ಕ್ರಮ**

ಜನರೇ ತೀರ್ಪು ಕೊಟ್ಟ ಮೇಲೆ ಇವರ ಪರಿಸ್ಥಿತಿ ಏನಾಗಿದೆ ಎಂದು ಅವರು ಪ್ರಶ್ನೆ ಮಾಡಿದ್ದಾರೆ. ಇನ್ಮುಂದೆಯಾದರೂ ಬಿಜೆಪಿ - ಜೆಡಿಎಸ್ ಎಚ್ಚರಿಕೆಯ ಹೆಜ್ಜೆ ಇರಿಸಲಿ. ರಾಜ್ಯದ ಅಭಿವೃದ್ಧಿ ಬಗ್ಗೆ ಚರ್ಚೆ ಮಾಡಲಿ. ಮುಡಾ ಬಗ್ಗೆ ಚರ್ಚೆ ಮಾಡಿ ಹೋರಾಟ ಮಾಡಿದ ರಿಸಲ್ಟ್ ಏನಾಯ್ತು, ಜನರು ತೀರ್ಪು ಕೊಟ್ಟಿದ್ದಾರೆ ಇವರ ಪರಿಸ್ಥಿತಿ ಏನಾಗಿದೆ. ಇನ್ಮುಂದೆಯಾದರೂ ಇದನ್ನೆಲ್ಲ ತಿಳಿದುಕೊಂಡು ವಿರೋಧ ಪಕ್ಷದವರು ಕೆಲಸ ಮಾಡಲಿ. ಮುಂದಿನ ದಿನಗಳಲ್ಲಾದರೂ ಸರಿಯಾದ ದಾರಿಯಲ್ಲಿ ನಡೆಯಲಿ.

> **ಈಗ ರೈತರ ವಿಚಾರದಲ್ಲಿ ಕೇಸರಿ ಟವಲ್ ಹಾಕಿ ಊರುರು ಓಡಾಡಿದರೆ ಜನಕ್ಕೆ ಗೊತ್ತಾಗುವುದಿಲ್ಲವೇ. ದಯಮಾಡಿ ವಿಪಕ್ಷದವರು ಉತ್ತರ ಕರ್ನಾಟಕ ಬಗ್ಗೆ ಚರ್ಚೆ ಮಾಡಲಿ. ಈ ಬಗ್ಗೆ ಸರ್ಕಾರ ಉತ್ತರ ಕೊಡುತ್ತೆ. ಈ ಬಾರಿ ಬೆಳಗಾವಿ ಅಧಿವೇಶನದಲ್ಲಿ ಉತ್ತರ ಕರ್ನಾಟಕ ಬಗ್ಗೆ ಅತಿ ಹೆಚ್ಚು ಚರ್ಚೆ ಆಗಲಿ, ವಿಪಕ್ಷದವರು ಸರ್ಕಾರ ಎಚ್ಚರಿಸುವ ಕೆಲಸ ಮಾಡಬೇಕು ಎಂದಿದ್ದಾರೆ.**

ಬಿಜೆಪಿ ಒಡೆದ ಮನೆಯಾಗಿದೆ. ಮನೆಯೊಂದು ಮೂರು ಬಾಗಿಲಾಗಿದೆ.

ಬಿಜೆಪಿಯ ನಾಯಕರಾದ ಬಸನಗೌಡ ಪಾಟೀಲ್ ಯತ್ನಾಳ್, ಬಿ.ವೈ. ವಿಜಯೇಂದ್ರ, ಹಾಗೂ ಬಸವರಾಜ ಬೊಮ್ಮಾಯಿ ಮೇಲೆ ಇಡಿ ತನಿಖೆ ಆಗಬೇಕು. ಈ ಹಿಂದೆಯೇ ಬಸನಗೌಡ ಪಾಟೀಲ್ ಯತ್ನಾಳ್ ಅವರು ಸ್ಪಷ್ಟವಾಗಿ ಹೇಳಿದ್ದರು. ಮುಖ್ಯಮಂತ್ರಿ ಆಗುವುದಕ್ಕೆ ಬಿಜೆಪಿಯಲ್ಲಿ 2 ಸಾವಿರ ಕೋಟಿ ಕೊಡಬೇಕು ಎಂದಿದ್ದರು. ಬೊಮ್ಮಾಯಿ ಸಿಎಂ ಆಗಲು ಎಷ್ಟು ದುಡ್ಡು ಕೊಟ್ಟಿದ್ದಾರೆ. ಎಲ್ಲರಕ್ಕಿಂತ ಜ್ಯೂನಿಯರ್ ವಿಜಯೇಂದ್ರ, ರಾಜ್ಯಾಧ್ಯಕ್ಷರಾಗಿದ್ದಾರೆ ಅವರು ಎಷ್ಟು ದುಡ್ಡು ಕೊಟ್ಟಿದ್ದಾರೆ.

ಬಿಜೆಪಿಯಲ್ಲಿ ಪ್ರತಿಯೊಂದು ಹುದ್ದೆಯೂ ಮಾರಾಟಕ್ಕಿದೆ. ಇದನ್ನು ಕಾಂಗ್ರೆಸ್ ನವರು ಹೇಳಿಲ್ಲ ಬಿಜೆಪಿಯವರೇ ಹೇಳಿದ್ದಾರೆ. ವಿಜಯೇಂದ್ರ ದುಡ್ಡು ಕೊಟ್ಟು ಅಧ್ಯಕ್ಷರಾಗಿದ್ದಾರೆ ಅಂತಾ ಯತ್ನಾಳ ಹೇಳಿದ್ದಾರೆ. ಮೊದಲು ಬಿಜೆಪಿ ಅವರ ವಿರುದ್ಧ ತನಿಖೆ ಆಗಲಿ ಎಂದು ಅವರು ಒತ್ತಾಯಿಸಿದ್ದಾರೆ.

> **ನನಗೆ ಇಂತಹದ್ದು ಎರಡು ಕಡೆ ಗಮನಕ್ಕೆ ಬಂದಿದೆ. ಅಂತಹ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಆ ಅಧಿಕಾರಿಗಳಿಗೆ ವಾರ್ನಿಂಗ್ ಕೊಟ್ಟಿದ್ದೀನಿ, ನಾನು ಇಲಾಖೆ ಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಮೇಲೆ ಅಂತಹದಕ್ಕೆಲ್ಲ ಅವಕಾಶ ಕೊಟ್ಟಿಲ್ಲ ಎಂದಿದ್ದಾರೆ ಸಚಿವ ಶಿವರಾಜ ತಂಗಡಗಿ,**

# ಕೋಚಿಮುಲ್ ವಿಭಜನೆ: ಎಷ್ಟು ನಿರ್ದೇಶಕ ಸ್ಥಾನಗಳನ್ನು ಕಾಯ್ದಿರಿಸಲಾಗುತ್ತದೆ?

## ಕೋಲಾರ ಮತ್ತು ಚಿಕ್ಕಬಳ್ಳಾಪುರ ಹಾಲು ಒಕ್ಕೂಟಗಳ ನಡುವೆ ಆಸ್ತಿ, ಮಾರುಕಟ್ಟೆಯ ವಿಭಜನೆಯ ಕುರಿತು ಮಾತುಕತೆ

• **ಉದಯವಾಹಿನಿ, ಚಿಕ್ಕಬಳ್ಳಾಪುರ**

ಕೋಲಾರ ಚಿಕ್ಕಬಳ್ಳಾಪುರ ಹಾಲು ಒಕ್ಕೂಟ (ಕೋಚಿಮುಲ್) ವಿಭಜನೆ ಆಗಿದೆ. ಕೋಲಾರ ಮತ್ತು ಚಿಕ್ಕಬಳ್ಳಾಪುರ ಹಾಲು ಒಕ್ಕೂಟಗಳ ನಡುವೆ ಆಸ್ತಿ, ಮಾರುಕಟ್ಟೆಯ ವಿಭಜನೆಯ ಕುರಿತು ಮಾತುಕತೆಗಳು ನಡೆದಿವೆ. ಈ ನಡುವೆ ಚಿಕ್ಕಬಳ್ಳಾಪುರ ಹಾಲು ಒಕ್ಕೂಟ (ಚಿಮುಲ್) ಅಸ್ತಿತ್ವದ ನಂತರ ಚಿಮುಲ್‌ಗೆ ಎಷ್ಟು ಮಂದಿ ನಿರ್ದೇಶಕ ಸ್ಥಾನಗಳನ್ನು ಕಾಯ್ದಿರಿಸಲಾಗುತ್ತದೆ? ಹೊಸ ತಾಲ್ಲೂಕುಗಳಾದ ಮಂಚೇನಹಳ್ಳಿ, ಚೇಳೂರಿಗೆ ಪ್ರಾತಿನಿಧ್ಯ ದೊರೆಯಲಿದೆಯೇ? ಹೆಚ್ಚಿನ ಸಂಖ್ಯೆಯ ಡೇರಿಗಳನ್ನು ಹೊಂದಿರುವ ಚಿಕ್ಕಬಳ್ಳಾಪುರ, ಚಿಂತಾಮಣಿ ಮತ್ತು ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಎರಡು ನಿರ್ದೇಶಕ ಸ್ಥಾನಗಳು ರೂಪುಗೊಳ್ಳುತ್ತವೆಯೇ ಎನ್ನುವ ಚರ್ಚೆಗಳು ಜಿಲ್ಲೆಯ ಸಹಕಾರ ವಲಯದಲ್ಲಿ ಬಿರುಸಿನಿಂದ ನಡೆದಿವೆ. ಈಗಾಗಲೇ ಚಿಮುಲ್‌ಗೆ ಉಪವಿಭಾಗಾಧಿಕಾರಿಯನ್ನು ಆಡಳಿತಾಧಿಕಾರಿಯಾಗಿ ನೇಮಿಸಲಾಗಿದೆ.

ಹೊಸ ಒಕ್ಕೂಟಕ್ಕೆ ವ್ಯವಸ್ಥಾಪಕ ನಿರ್ದೇಶಕರನ್ನೂ ನೇಮಿಸಲಾಗಿದೆ. ಹೀಗೆ ಒಂದೊಂದೇ ಪ್ರಕ್ರಿಯೆಗಳು ನಡೆಯುತ್ತಿವೆ. ಈ ನಡುವೆ ಆಡಳಿತ ಮಂಡಳಿಯ ನಿರ್ದೇಶಕ ಸ್ಥಾನಗಳ ಬಗ್ಗೆಯೂ ಅಧಿಕಾರಿಗಳು ಮತ್ತು ಸಹಕಾರ ವಲಯದಲ್ಲಿ ಚರ್ಚೆಗಳು ಗರಿಗೆದರಿವೆ.

**ಸಹಕಾರ ವಲಯದಲ್ಲಿ ಚರ್ಚೆ**

ಕೋಚಿಮುಲ್ ಅಸ್ತಿತ್ವದಲ್ಲಿದ್ದ ವೇಳೆ ಎರಡೂ ಜಿಲ್ಲೆಯ 11 ತಾಲ್ಲೂಕುಗಳಿಂದ ತಲಾ ಒಬ್ಬರು, ಎರಡೂ ಜಿಲ್ಲೆಗಳಿಂದ ತಲಾ ಒಬ್ಬ ಮಹಿಳಾ ಪ್ರತಿನಿಧಿ ಚುನಾವಣೆಯ ಮೂಲಕ ಆಯ್ಕೆ ಆಗುತ್ತಿದ್ದರು.

ಈ ಪೈಕಿ ಚಿಕ್ಕಬಳ್ಳಾಪುರ ಜಿಲ್ಲೆಯ ಆರು ತಾಲ್ಲೂಕುಗಳಿಂದ ತಲಾ ಒಬ್ಬರು ಮತ್ತು ಮಹಿಳಾ ಮೀಸಲು ಕ್ಷೇತ್ರದಿಂದ ಒಬ್ಬರು ನಿರ್ದೇಶಕರಾಗಿ ಆಯ್ಕೆ ಆಗಿದ್ದರು. ಕೋಚಿಮುಲ್‌ನಲ್ಲಿ ಜಿಲ್ಲೆಯಿಂದ 7 ಮಂದಿ ನಿರ್ದೇಶಕರು ಇದ್ದರು. ಆದರೆ ಈಗ ಚಿಮುಲ್ ಅಸ್ತಿತ್ವಕ್ಕೆ ಬಂದಿದೆ.

ಸಹಜವಾಗಿ ಸರ್ಕಾರದ ಒಬ್ಬ ನಾಮ ನಿರ್ದೇಶಕರು, ಎನ್‌ಡಿಡಿಬಿ ಪ್ರತಿನಿಧಿ, ಕೆಎಂಎಫ್ ಪ್ರತಿನಿಧಿ, ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರು, ಪಶುಸಂಗೋಪನಾ ಇಲಾಖೆಯ ಪ್ರತಿನಿಧಿ ಮತ್ತು ಸಹಕಾರ ಇಲಾಖೆಯ ಪ್ರತಿನಿಧಿ ನಿರ್ದೇಶಕರಾಗಿರುತ್ತಾರೆ.



ಉದಯವಾಹಿನಿ ಚಿತ್ರ

> ಹೊಸ ತಾಲ್ಲೂಕಿಗೂ ಕಾಯ್ದಿರಿಸಬೇಕು ಜಿಲ್ಲೆಗೆ ಸೀಮಿತಗೊಂಡಂತೆ ಸಹಕಾರಿ ಕಾಯ್ದೆ ಅನ್ವಯ ಹಾಲು ಒಕ್ಕೂಟಕ್ಕೆ 17 ಮಂದಿ ನಿರ್ದೇಶಕರು ಇರಬೇಕು. ಹೆಚ್ಚುವರಿಯಾಗಿ ನಿರ್ದೇಶಕರ ಸ್ಥಾನ ಸೃಷ್ಟಿಸಿದರೆ ಹೆಚ್ಚುವರಿ ಹೊರೆ ಆಗುತ್ತದೆ. ಇಲ್ಲಿ ಅಧಿಕಾರ ಮುಖ್ಯವಲ್ಲ, ವೆಚ್ಚವು ಹೆಚ್ಚಿದರೆ ಅದರ ಪರಿಣಾಮ ರೈತರ ಮೇಲೆ ಬೀಳುತ್ತದೆ
>
> **-ಅಶ್ವತ್ಥನಾರಾಯಣ ಬಾಬು**
> ಚಿಂತಾಮಣಿ ತಾಲ್ಲೂಕಿನ ಕೋಚಿಮುಲ್ ನಿರ್ದೇಶಕ

**890 ಮಂದಿ ಮತದಾರರು**

**ಕೋಚಿಮುಲ್‌ಗೆ ಚುನಾವಣೆ ನಡೆಸುವ ಹಿನ್ನೆಲೆಯಲ್ಲಿ ಕಳೆದ ಫೆಬ್ರುವರಿಯಲ್ಲಿ ಚುನಾವಣಾ ಅಧಿಕಾರಿ ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಿದ್ದರು. ಕರಡು ಮತದಾರರ ಪಟ್ಟಿಯ ಅಂಕಿ ಸಂಖ್ಯೆಗಳ ಪ್ರಕಾರ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 890 ಮಂದಿ ಮತದಾರರು ನಿರ್ದೇಶಕ ಚುನಾವಣೆಯಲ್ಲಿ ಮತ ಚಲಾಯಿಸಲು ಹಕ್ಕು ಹೊಂದಿದ್ದಾರೆ. ಜಿಲ್ಲೆಯಲ್ಲಿ 86 ಡೇರಿಗಳು ಅನರ್ಹ ಮತದಾರರ ಪಟ್ಟಿಯಲ್ಲಿವೆ.**

ಜಿಲ್ಲೆಯ ಹೈನುಗಾರಿಕೆಯಲ್ಲಿ ಮಹಿಳೆಯರು ಸಹ ದೊಡ್ಡ ಪ್ರಮಾಣದಲ್ಲಿ ತೂಗಿಸಿಕೊಂಡಿದ್ದಾರೆ. ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳೂ ಕೆಲಸ ಮಾಡುತ್ತಿವೆ. ಬಹಳಷ್ಟು ಸಂಘಗಳಲ್ಲಿ ಮಹಿಳೆಯರೇ ಅಧ್ಯಕ್ಷರಾಗಿದ್ದಾರೆ. ಹೀಗಿದ್ದರೂ ಇಲ್ಲಿಯವರೆಗೆ ಮಹಿಳೆಗೆ ಒಂದು ಸ್ಥಾನ ಮೀಸಲಿಡಲಾಗುತ್ತಿತ್ತು. ಆದರೆ ಈಗ ಚಿಮುಲ್‌ನಲ್ಲಿ ಎರಡು ಸ್ಥಾನಗಳನ್ನು ಕಾಯ್ದಿರಿಸಬೇಕು ಎನ್ನುವ ಆಗ್ರಹ ಹೈನುಗಾರಿಕೆಯಲ್ಲಿ ತೊಡಗಿರುವ ಮಹಿಳಾ ಪ್ರತಿನಿಧಿಗಳಿಂದ ಕೇಳಿ ಬರುತ್ತಿದೆ.

ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಿಂದ (ಡಿಸಿಸಿ ಬ್ಯಾಂಕ್) ಚೇಳೂರು ಮತ್ತು ಮಂಚೇನಹಳ್ಳಿ ತಾಲ್ಲೂಕಿಗೆ ನಿರ್ದೇಶಕ ಸಾನಗಳನ್ನು ಕಾಯಿರಿಸಲಾಗಿದೆ ಈ ಬಗೆ ಹೈಕೋರ್ಟ್ ತೀರ್ಪು ನೀಡಿದೆ.

ಈ ದೃಷ್ಟಿಯಿಂದ ನೋಡಿದರೆ ಈ ತಾಲ್ಲೂಕುಗಳಿಗೆ ನಿರ್ದೇಶಕ ಸ್ಥಾನ ಕಾಯ್ದಿರಿಸಬೇಕಾಗುತ್ತದೆ ಎಂದರು. ಸ್ಥಾನ ಹೆಚ್ಚಿದರೆ ವೆಚ್ಚವೂ ಅಧಿಕ ಚಿಮುಲ್ ಹೊಸದಾಗಿ ಅಸ್ತಿತ್ವಕ್ಕೆ ಬಂದಿದೆ. ಹೆಚ್ಚು ನಿರ್ದೇಶಕರ ಸ್ಥಾನಗಳು ರೂಪಿತವಾದರೆ ಖರ್ಚು ವೆಚ್ಚಗಳು ಸಹ ಹೆಚ್ಚುತ್ತವೆ.

ಶಿಬಿರ ಕಚೇರಿ ಅಧಿಕಾರಿಗಳು ಪಶುವೈದ್ಯರು ಹೀಗೆ ವಿವಿಧ ಸೌಲಭ್ಯಕ್ಕೆ ವೆಚ್ಚ ಮಾಡಬೇಕಾಗುತ್ತದೆ. ನಿರ್ದೇಶಕ ಸ್ಥಾನ ಪುನರ್‌ರ‍್ರಚಿಸುವ ವೇಳೆ ಈ ಎಲ್ಲವನ್ನೂ ಆಲೋಚಿಸಬೇಕು ಎಂದು ಸಹಕಾರ ವಲಯದ ಮುಖಂಡರು ತಿಳಿಸುವರು.

---

## ಜೆಡಿಎಸ್ ಖರೀದಿಸುವ ಭ್ರಮೆಯಲ್ಲಿರಬೇಡಿ, ಅದು ಸಾಧ್ಯವಿಲ್ಲ : ಸಾ.ರಾ.ಮಹೇಶ್

• **ಉದಯವಾಹಿನಿ, ಮೈಸೂರು**

ಯಾರಿಂದಲೂ ಜೆಡಿಎಸ್ ಖರೀದಿ ಮಾಡಲು ಆಗಲ್ಲ. ಕಾಂಗ್ರೆಸ್ ನಾಯಕರು ಭ್ರಮೆಯಲ್ಲಿ ಇರ ಬೇಡಿ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ತಿರುಗೇಟು ನೀಡಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಾದೇಶಿಕ ಪಕ್ಷ ಮುಳುಗಿತು ಎಂದು ಬಹಳಷ್ಟು ಜನ ಹೇಳುತ್ತಿದ್ದಾರೆ. ಹಿಂದೆಯೂ ಪಕ್ಷ ನಿರ್ನಾಮ ಮಾಡುತ್ತೇವೆ ಎಂದು ಕೆಲವರು ಹೇಳಿದ್ದರು. ಗ್ಯಾರಂಟಿ ಯೋಜನೆ ಹೆಸರಲ್ಲಿ ಕಾಂಗ್ರೆಸ್ ಸರ್ಕಾರದ ಅವ್ಯವಹಾರ ಮುಚ್ಚಿ ಹೋಗಿವೆ ಎಂದು ಆರೋಪಿಸಿದರು.

ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಹಾಗೂ ಶಾಸಕ ಜಿ.ಟಿ.ದೇವೇಗೌಡರು ರಾಜಕೀಯ ಬಿಟ್ಟು ಬಿಡಬೇಕೆಂದು ಹೇಳಿದರೆ, ನಾನು ನಾಳೆಯೇ ಸಾರ್ವಜನಿಕ ಜೀವನದಿಂದ ದೂರ ಇರುತ್ತೇನೆ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ಹೇಳಿದರು.

ನಾವು ಏನಾದರೂ ತಪ್ಪು ಮಾಡಿದ್ದರೆ, ಪಕ್ಷದ ವೇದಿಕೆಯಲ್ಲಿ ಕರೆದು ಕಪಾಳಕ್ಕೆ ಹೊಡೆಯಿರಿ.

ಆದರೆ, ಸಾರ್ವಜನಿಕವಾಗಿ ಅವಮಾನ ಮಾಡಬೇಡಿ ಎಂದರು. ನನಗೆ ಪಕ್ಷ ಎಲ್ಲವನ್ನು ಕೊಟ್ಟಿದೆ. ನನಗೆ ಇನ್ನು ಯಾವ ಆಸೆಯೂ ಇಲ್ಲ. ನಾನು ಸುಳ್ಳು ಹೇಳುತ್ತಿಲ್ಲ. ಚನ್ನಪಟ್ಟಣ ಕ್ಷೇತ್ರದ ಉಪ ಚುನಾವಣಾ ಪ್ರಚಾರಕ್ಕೆ ಕರೆಯಲು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರೇ ಜಿ.ಟಿ.ದೇವೇಗೌಡರ ಆಪ್ತ ಸಹಾಯಕರಿಗೆ ಕರೆ ಮಾಡಿದ್ದರು. ಇದನ್ನು ಎಚ್.ಡಿ. ದೇವೇಗೌಡರೇ ಹೇಳುತ್ತಾರೆ ಎಂದು ಅವರು ಹೇಳಿದರು. ಕರೆಯ ವಿವರ ಬೇಕಾದರೆ ಕೊಡುತ್ತೇವೆ. ಮಾಜಿ ಪ್ರಧಾನಿಗಳ ಮೊಬೈಲ್ ನಿಂದ ಹೋಗಿರುವ ಕರೆ ಅದು. ನನಗೆ ಸುಳ್ಳು ಹೇಳುವ ಅಗತ್ಯವಿಲ್ಲ ಎಂದು ಅವರು ತಿಳಿಸಿದರು. ನನ್ನ ಮೇಲೆ ಜಿಟಿಡಿ ಗೂಬೆ ಕೂರಿಸುವುದನ್ನು ನಿಲ್ಲಿಸಲಿ.

> ನಾನು ಜೆಡಿಎಸ್‌ನಲ್ಲಿ ಇರುವುದು ಜಿ.ಟಿ.ದೇವೇಗೌಡರಿಗೆ ಇಷ್ಟ ಇಲ್ಲವೆಂದರೆ ನಾನೇ ಪಕ್ಷದಿಂದ ದೂರ ಇರುತ್ತೇನೆ. ಸಾಯುವ ತನಕ ಪಕ್ಷಕ್ಕೆ ಮತ ಹಾಕುತ್ತೇನೆ. ಬಹಳಷ್ಟು ನಾಯಕರು ಜೆಡಿಎಸ್ ಬಗ್ಗೆ ಮಾತಾಡುತ್ತಿದ್ದಾರೆ. ಚುನಾವಣೆ ತಯಾರಿ ಸರಿ ಇಲ್ಲದ ಕಾರಣ ಚನ್ನಪಟ್ಟಣದಲ್ಲಿ ಸೋಲಾಗಿದೆ. ಅಲ್ಲದೆ ಅನಿವಾರ್ಯ ಪರಿಸ್ಥಿತಿಯಲ್ಲಿ ನಿಖಿಲ್ ಕುಮಾರಸ್ವಾಮಿ ಈ ಉಪ ಚುನಾವಣೆ ಅಭ್ಯರ್ಥಿಯಾದರು
>
> **-ಸಾ.ರಾ.ಮಹೇಶ್**



ಮುಂದೆ ಇದೇ ರೀತಿ ಅವರು ಮಾತು ಮುಂದುವರಿಸಿದರೆ ನನ್ನ ಮಾತಿನ ವರಸೆ ಬದಲಾಗುತ್ತದೆ ಎಂದು ಸಾರಾ ಮಹೇಶ್ ಮಾರ್ಮಿಕವಾಗಿ ನುಡಿದರು.

ನಾನು ಯಾವತ್ತೂ ನಾನೇ ಮೈಸೂರಿನ ಸ್ಥಳೀಯ ಸಂಸ್ಥೆಗಳಿಗೆ ಬಿ ಫಾರಂ ಕೊಡುತ್ತೇನೆ ಎಂದು ಹೇಳಿಲ್ಲ. ನನ್ನ ಸೋಲಿನ ಬಗ್ಗೆ ಜಿಟಿಡಿ ಮಾತಾಡುತ್ತಾರೆ. ಜಿ.ಟಿ.ದೇವೇಗೌಡರು ಚುನಾವಣೆಯಲ್ಲಿ ಸೋತಿಲ್ವಾ? ಎಂದು ಪ್ರಶ್ನಿಸಿದ ಅವರು, 2008ರಲ್ಲಿ ಜಿಟಿಡಿ ಏಕೆ ಬಿಜೆಪಿ ಹೋಗಿದ್ದರು? ನಾನು ಶಾಸಕ ಅಲ್ಲ. ನನ್ನನ್ನು ಕೇಳಿ ಕೇಂದ್ರ ಸಚಿವ ಕುಮಾರಸ್ವಾಮಿ ಯಾರನ್ನಾದರೂ ಶಾಸಕಾಂಗ ಪಕ್ಷದ ನಾಯಕರನ್ನು ನೇಮಕ ಮಾಡುತ್ತಾರಾ? ನಾನು ಹೇಗೆ ನಿಮಗೆ ಆ ಸ್ಥಾನ ತಪ್ಪಿಸಲಿ? ಎಂದು ಅವರು ಪ್ರಶ್ನಿಸಿದರು.

---

## ರೈತರ ಜಮೀನು ಕಬಳಿಕೆ ಶಾಶ್ವತ ಕ್ರಮಕ್ಕೆ ಆಗ್ರಹ

• **ಉದಯವಾಹಿನಿ, ಮುಳಬಾಗಿಲು**

ಮಠ ಮಂದಿರಗಳು ಸೇರಿದಂತೆ ರೈತರ ಜಮೀನನ್ನು ವಕ್ಫ್ ಕಾನೂನಿನ ಮೂಲಕ ಕಬಳಿಸಲು ಹೊರಟಿರುವದನ್ನು ಶಾಶ್ವತವಾಗಿ ತಡೆಯಬೇಕು, ಈ ಬಗ್ಗೆ ರಾಜ್ಯ ಸರ್ಕಾರ ವಿಧಾನಸಭಾ ಅಧಿವೇಶನದಲ್ಲಿ ಒಂದು ಸಾಲಿನ ನಿರ್ಣಯ ಕೈಗೊಂಡು ಕೇಂದ್ರ ಸರ್ಕಾರ ವಕ್ಫ್ ಕಾಯ್ದೆ ರದ್ದುಪಡಿಸುವಂತೆ ಒತ್ತಡ ಏರಬೇಕು ಎಂದು ಭಾರತೀಯ ಕಿಸಾನ್ ಸಂಘದ ಜಿಲ್ಲಾಧ್ಯಕ್ಷ ಮನ್ನೇನಹಳ್ಳಿ ಕೆ.ರಘುನಾಥರೆಡ್ಡಿ ರಾಜ್ಯ ಮತ್ತು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು.

ಮುಳಬಾಗಿಲು ಭಾರತೀಯ ಕಿಸಾನ್ ಸಂಘದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಮಂಗಳವಾರ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಭಾರತೀಯ ಕಿಸಾನ್ ಸಂಘದಿಂದ ರೈತ ಘರ್ಜನಾ ರ‍್ಯಾಲಿ ಕರಪತ್ರ ಬಿಡುಗಡೆಗೊಳಿಸಿ ಭಾರತೀಯ ಕಿಸಾನ್ ಸಂಘ ಈ ಬಗ್ಗೆ ಜಿಲ್ಲೆಯಲ್ಲಿ ರೈತರಲ್ಲಿ ಜಾಗೃತಿ ಮೂಡಿಸಿ ಪ್ರತಿಭಟನಾ ಕಾರ್ಯಕ್ರಮದಲ್ಲಿ ಸ್ವಪ್ರೇರಣೆಯಿಂದ ಪಾಲ್ಗೊಳ್ಳುವಂತೆ ತಿಳಿಸಿದ್ದು ಅದಕ್ಕೆ ಪೂರಕವಾಗಿ ಪಾಲ್ಗೊಳ್ಳುತ್ತಿರುವುದು ಸಂತೋಷದ ವಿಷಯ ಎಂದರು.



ಉದಯವಾಹಿನಿ ಚಿತ್ರ

**ರೈತ ಘರ್ಜನಾ ರ‍್ಯಾಲಿ ಕರಪತ್ರ ಬಿಡುಗಡೆ**

ಜಿಲ್ಲಾ ಖಜಾಂಚಿ ವಕೀಲ ವಿ. ಜಯಪ್ಪ ಮಾತನಾಡಿ, ದಲಿತ, ಶೋಷಿತ, ರೈತರ, ಸಾರ್ವಜನಿಕರ ಭೂಮಿ ಉಳಿಸಲು ಆಳುವ ಸರ್ಕಾರಗಳು ಮುಂದಾಗಬೇಕು , ಹಿಂದಿನ ಸರ್ಕಾರಗಳ ಆಳ್ವಿಕೆಯಲ್ಲಿ ಜಾರಿಗೆ ತಂದಿರುವ ವಕ್ಫ್ ಕಾಯ್ದೆಗಳಿಂದ ಈಗ ಸಮಸ್ಯೆ ಆರಂಭವಾಗಿದೆ, ಇದು ಹೀಗೆ ಬಿಟ್ಟರೆ ದೇಶದ ಮೂಲ ನಿವಾಸಿಗಳಿಗೆ ದಕ್ಕೆ ಉಂಟಾಗುತ್ತದೆ, ಆದ್ದರಿಂದ ಚಳಿಗಾಲದ ಸಂಸತ್ ಅಧಿವೇಶನದಲ್ಲಿ ವಕ್ಫ್ ಕಾಯ್ದೆ ಸಂಪೂರ್ಣವಾಗಿ ರದ್ದುಪಡಿಸಬೇಕೆಂದು ಜಿಲ್ಲಾ ಖಜಾಂಚಿ ವಕೀಲ ವಿ.ಜಯಪ್ಪ ಆಗ್ರಹಿಸಿದ್ದರು.

ತಾಲ್ಲೂಕು ಅಧ್ಯಕ್ಷ ಉಗಣಿ ಆರ್. ನಾರಾಯಣಗೌಡ, ಉಪಾಧ್ಯಕ್ಷ ಕೆ. ಸಿ. ಹಳ್ಳಿ ಕೃಷ್ಣಪ್ಪ, ನಗರ ಘಟಕದ ಸಂಚಾಲಕ ವೀರಭದ್ರ, ನಗರ ಶ್ರೀನಿವಾಸಬಾಬು ಇದ್ದರು.

---

## ಜೇನು ಕೃಷಿಗೆ ಕಂಟಕವಾದ ರಾಸಾಯನಿಕ

• **ಉದಯವಾಹಿನಿ, ತುಮಕೂರು**

ಕೃಷಿಯಲ್ಲಿ ಅತಿಯಾಗಿ ರಾಸಾಯನಿಕ ಬಳಕೆ ಮಾಡುತ್ತಿರುವುದು ಜೇನು ಹುಳುಗಳಿಗೆ ಕಂಟಕವಾಗಿದ್ದು, ಜಿಲ್ಲೆಯಲ್ಲಿ ಜೇನು ಕೃಷಿಗೆ ಹಿನ್ನಡೆಯಾಗಿದೆ. ಮನೋರಂಜನೆ ಹಾಸನ ಕೃಷಿ ವಿಜ್ಞಾನ ಕೇಂದ್ರ, ತೋಟಗಾರಿಕಾ ಇಲಾಖೆಯಿಂದ ಜೇನು ಸಾಕಾಣಿಕೆದಾರರಿಗೆ ಅಗತ್ಯ ತರಬೇತಿ ನೀಡಿ, ಜೇನು ಪೆಟ್ಟಿಗೆ ವಿತರಿಸಲಾಗುತ್ತಿದೆ.



ಉದಯವಾಹಿನಿ ಚಿತ್ರ

ಬೆಂಗಳೂರು ಗ್ರಾಮಾಂತರ ಬೀದರ್ ಆದರೆ, ಜೇನು ಹುಳುಗಳಿಗೆ ಪೂರಕವಾದ ವಾತಾವರಣ ಇಲ್ಲದೆ ಹುಳುಗಳು ಗೂಡು ಕಟ್ಟುತ್ತಿಲ್ಲ. ಹುಳುವಿನ ಸ್ನೇಹಿಯಾದ ಪ್ರಕೃತಿ ದಿನೇ ದಿನೇ ಕಾಣೆಯಾಗುತ್ತಿದೆ. ಜಮೀನಿನಲ್ಲಿ ಅಳವಡಿಸಿದ ಪೆಟ್ಟಿಗೆಯಲ್ಲಿ ಹುಳು ಬಂದು ಕೂರದಿರುವುದು ರೈತರನ್ನು ಆತಂಕಕ್ಕೆ ತಳ್ಳಿದೆ. ಚಾಮರಾಜ ನಗರ ಚಿಕ್ಕಮಗಳೂರು ಇತ್ತೀಚಿನ ವರ್ಷಗಳಲ್ಲಿ ಕೃಷಿಯಲ್ಲಿ ಅಪಾರ ಪ್ರಮಾಣದಲ್ಲಿ ರಾಸಾಯನಿಕ ಬಳಸುತ್ತಿದ್ದು, ಜೇನು ಹುಳುವಿನ ಮೇಲೆ ಪರಿಣಾಮ ಬೀರುತ್ತಿದೆ. ಹೂವಿನ ಮಕರಂದಕ್ಕಾಗಿ ಪೆಟ್ಟಿಗೆಯಿಂದ ಆಚೆ ಹೋಗುವ ಹುಳುಗಳು ಔಷಧಿ ಸಿಂಪಡಿಸಿದ ಹೂವಿನ ಮೇಲೆ ಕೂತು ಸಾಯುತ್ತಿವೆ. ಚಿತ್ರದುರ್ಗ ದಾವಣಗೆರೆ ಧಾರಾವಾಡ ಗದಗ ಉಡುಪಿ ಸಾವಯವ ಪದ್ಧತಿ ಮೂಲಕ ಕೃಷಿ ಮಾಡುತ್ತಿರುವ ಜಮೀನಿನಲ್ಲೂ ರೈತರ ನಿರೀಕ್ಷೆಗೆ ತಕ್ಕಂತೆ ಜೇನು ಉತ್ಪಾದನೆಯಾಗುತ್ತಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಇಟ್ಟಿಗೆ ಕಾರ್ಖಾನೆಗಳು ಜಾಸ್ತಿಯಾಗಿದ್ದು, ಇವು ಹೊರ ಸೂಸುವ ಹೊಗೆ, ಶಾಖ, ಬೂದಿಯಿಂದಲೂ ಹುಳುಗಳ ಜೀವಕ್ಕೆ ಹಾನಿಯಾಗುತ್ತಿದೆ. ಜಿಲ್ಲೆಯಲ್ಲಿ ಹೆಜ್ಜೇನು, ಕಡ್ಡಿ ಜೇನು ತುಡುವೆ ಜೇನು ನಸರು ಜೇನು ಪ್ರಭೇದಗಳು ಪ್ರಮುಖವಾಗಿ ಕಾಣಿಸುತ್ತವೆ. ಹೆಜ್ಜೇನು ಹುಳುಗಳು ಬೃಹತ್ ಮರಗಳಲ್ಲಿ ಆಶ್ರಯ ಪಡೆಯುತ್ತವೆ. ಈಚೆಗೆ ದೊಡ್ಡ ದೊಡ್ಡ ಮರಗಳಿಗೆ ಕೊಡಲಿ ಏಟು ಬೀಳುತ್ತಿದೆ.

ಹೆಜ್ಜೇನು ಕಟ್ಟಲು ಸೂಕ್ತ ಜಾಗವೇ ಇಲ್ಲದಂತಾಗಿದ್ದು, ಕಟ್ಟಡ ಗೋಡೆಗಳನ್ನು ಆಶ್ರಯಿಸುವಂತಾಗಿದೆ. ತುಡುವೆ ಜೇನು ಹುತ್ತಗಳಲ್ಲಿ ಜಾಸ್ತಿ ಕೂರುತ್ತದೆ. ಇತ್ತೀಚೆಗೆ ಹುತ್ತಗಳು ಕಾಣೆಯಾಗುತ್ತಿವೆ. ಗ್ರಾಮೀಣ ಭಾಗದಲ್ಲೂ ಹುತ್ತಗಳನ್ನು ಹುಡುಕಬೇಕಾದ ಸ್ಥಿತಿ ನಿರ್ಮಾಣವಾಗಿದೆ.

---

## ಡಿ.1ರಿಂದ ಭತ್ತ, ರಾಗಿ ಖರೀದಿ ನೋಂದಣಿ

• **ಉದಯವಾಹಿನಿ, ರಾಮನಗರ**

ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ (ಎಂಎಸ್‌ಪಿ) ರೈತರಿಂದ ಭತ್ತ ಹಾಗೂ ರಾಗಿ ಖರೀದಿಸಲು ಡಿ. 1ರಿಂದ 31ರವರೆಗೆ ನೋಂದಣಿಗೆ ಅವಕಾಶ ಕಲ್ಪಿಸಲಾಗಿದೆ. ಈ ಸಲ ಹಾರೋಹಳ್ಳಿ ತಾಲ್ಲೂಕಿನಲ್ಲೂ ನೂತನವಾಗಿ ಭತ್ತ ಮತ್ತು ರಾಗಿ ಖರೀದಿ ನೋಂದಣಿ ಮತ್ತು ಖರೀದಿ ಕೇಂದ್ರ ತೆರೆಯಲಾಗುವುದು' ಎಂದು ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್ ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತವರು ಬೆಂಬಲ ಬೆಲೆಯಡಿ ರೈತರಿಂದ ರಾಗಿ ಮತ್ತು ಭತ್ತ ಖರೀದಿಸುವ ಅಧಿಕೃತ ಏಜೆನ್ಸಿಯಾಗಿದೆ.

ನೋಂದಾಯಿತ ರೈತರಿಂದ 2025ರ ಜ. 1ರಿಂದ ಮಾರ್ಚ್ 31ರವರೆಗೆ ಆಹಾರ ಧಾನ್ಯ ಖರೀದಿಸಲಾಗುವುದು' ಎಂದರು. ರೈತರಿಂದ ರಾಗಿ ಮತ್ತು ಭತ್ತ ಖರೀದಿಸಲು ತೆರೆಯಲಾಗಿರುವ ಪ್ರತಿ ಖರೀದಿ ಕೇಂದ್ರಕ್ಕೆ ಕೃಷಿ ಇಲಾಖೆ ವತಿಯಿಂದ ಗ್ರೇಡರ್‌ಗಳನ್ನು ನೇಮಿಸಬೇಕು. ರೈತರು ನೋಂದಣಿ ಮಾಡಿಸುವ ಮುನ್ನ ಅಧಿಕಾರಿಗಳು ರೈತರ ದಾಖಲಾತಿಗಳನ್ನು ಖಾತರಿಪಡಿಸಿಕೊಂಡು ನೋಂದಣಿ ಮಾಡಿಸಿಕೊಳ್ಳಬೇಕು.



ಉದಯವಾಹಿನಿ ಚಿತ್ರ

ರೈತರಿಂದ ರಾಗಿ, ಭತ್ತ ಖರೀದಿಸುವ ಸಂದರ್ಭದಲ್ಲಿ ಯಾವುದೇ ತೊಂದರೆ ಯಾಗದಂತೆ ಎಚ್ಚರ ವಹಿಸಬೇಕು' ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಕೃಷಿ ಇಲಾಖೆಯ ಜಂಟಿ ನಿರ್ದೇಶಕಿ ಅಂಬಿಕಾ, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕಿ ಸಿ.ಆರ್. ರಮ್ಯ, ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ ರಾಜು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿಗಳು ಸೇರಿದಂತೆ ಸಂಬಂಧಪಟ್ಟ ಇಲಾಖೆಗಳು ಅಧಿಕಾರಿಗಳು ಇದ್ದರು.

> ರೈತರು ತಮ್ಮ ಬೆಳೆ ಮಾರಾಟ ಮಾಡಲು ಯಾವುದೇ ಮಧ್ಯವರ್ತಿಗಳ ಸಹಾಯ ಪಡೆದು ವಂಚನೆಗೊಳಗಾಗಬಾರದು. ರೈತರ ಬೆಳೆಗೆ ಸೂಕ್ತ ಬೆಲೆ ನೀಡುವ ಉದ್ದೇಶದಿಂದ ಸರ್ಕಾರ ಎಂಎಸ್‌ಪಿ ಯೋಜನೆಯನ್ನು ಜಾರಿಗೆ ತಂದಿದೆ. ಹಾಗಾಗಿ, ಮಧ್ಯವರ್ತಿಗಳನ್ನು ಸಂಪರ್ಕಿಸದೆ ನೇರವಾಗಿ ಖರೀದಿ ಕೇಂದ್ರಗಳಲ್ಲಿ ನೋಂದಣಿ ಮಾಡಿಕೊಂಡು, ರಾಗಿ ಹಾಗೂ ಭತ್ತವನ್ನು ಮಾರಾಟ ಮಾಡಬೇಕು
>
> **– ಯಶವಂತ್ ವಿ. ಗುರುಕರ್,** ಡಿಸಿ

---

## ಪಹಣಿಯಲ್ಲಿ ವಕ್ಫ್ ಹೆಸರು ಕೈಬಿಡಿ: ರೈತ ಸಂಘ ಆಗ್ರಹ

• **ಉದಯವಾಹಿನಿ, ಮಂಡ್ಯ**

ರೈತರ ಜಮೀನಿನ ಪಹಣಿಯಲ್ಲಿ ನಮೂದಿಸಿರುವ ವಕ್ಫ್ ಹೆಸರು ಕೈಬಿಟ್ಟು, ವಕ್ಫ್ ಬೋರ್ಡ್ ನಿಷಿದ್ಧಗೊಳಿಸಿ ಜನರನ್ನು ಉಳಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘದ (ಮೂಲ ಸಂಘಟನೆ) ಕಾರ್ಯಕರ್ತರು ಜಿಲ್ಲಾಧಿಕಾರಿ ಕಚೇರಿ ಎದುರು ಮಂಗಳವಾರ ಪ್ರತಿಭಟನೆ ನಡೆಸಿದರು. ಜಿಲ್ಲಾಧಿಕಾರಿ ಕಚೇರಿ ಎದುರು ಜಮಾವಣೆಗೊಂಡ ಕಾರ್ಯಕರ್ತರು ವಕ್ಫ್ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ರೈತರ ಜಮೀನುಗಳ ಪಹಣಿಯಲ್ಲಿ ವಕ್ಫ್ ಹೆಸರು ನಮೂದಿಸಿರುವುದರಿಂದ ರೈತರಲ್ಲಿ ಆತಂಕ ಸೃಷ್ಟಿಯಾಗಿದೆ. ಕೂಡಲೇ ಹೆಸರು ತೆಗೆಸಬೇಕು. ಭತ್ತ ಖರೀದಿ ಕೇಂದ್ರಗಳನ್ನು ತೆರೆದು, ರೈತರಿಂದ ಖರೀದಿ ಮಾಡುವ ಪ್ರತಿ ಕ್ವಿಂಟಲ್ ಭತ್ತಕ್ಕೆ ಕೇಂದ್ರದ ದರದ ಜೊತೆಗೆ ರಾಜ್ಯ ಸರ್ಕಾರ 700 ಪ್ರೋತ್ಸಾಹ ಧನ ನೀಡಬೇಕು ಎಂದು ಒತ್ತಾಯಿಸಿದರು.

ಭತ್ತ ಕಟಾವು ಯಂತ್ರದ ಬಾಡಿಗೆ ದರ ದುಬಾರಿಯಾಗಿರುವುದರಿಂದ ಕೃಷಿ ಇಲಾಖೆ ಏಕದರ ನಿಗದಿ ಮಾಡಬೇಕು. ಬೇಸಿಗೆ ಬೆಳೆ ಒಣಗದಂತೆ ಕೆಆರ್‌ಎಸ್ ಅಣೆಕಟ್ಟೆಯಿಂದ ನೀರು ಹರಿಸಲು ಮುಂದಾಗಬೇಕು. ಅರ್ಧಕ್ಕೆ ಸ್ಥಗಿತಗೊಂಡಿರುವ ವಿ.ಸಿ. ನಾಲೆ ಕಾಮಗಾರಿ ಪೂರ್ಣಗೊಳಿಸಬೇಕು. ಜೊತೆಗೆ ಉಪಕಾಲುವೆಗಳನ್ನು ದುರಸ್ತಿಗೊಳಿಸಿ ಕೊನೆ ಭಾಗದ ಜಮೀನುಗಳಿಗೆ ನೀರು ಹರಿಸಲು ಕ್ರಮ ವಹಿಸಬೇಕು ಎಂದು ಆಗ್ರಹಿಸಿದರು. ಕಬ್ಬು ಬೆಳೆ ಉತ್ಪಾದನಾ ವೆಚ್ಚ ಹೆಚ್ಚಾಗಿರುವುದರಿಂದ ಮುಕ್ತ ಮತ್ತು ಮೈಕ್ರೋ ಫೈನಾನ್ಸ್ ಸಂಸ್ಥೆಗಳು ರೈತರು, ಸ್ತ್ರೀ ಶಕ್ತಿ ಮತ್ತು ಮಹಿಳಾ ಸಂಘಗಳ ಸದಸ್ಯರ ಆಧಾರ್ ಕಾರ್ಡ್ ಆಧಾರವಾಗಿಟ್ಟುಕೊಂಡು ಸಾಲ ನೀಡುತ್ತಿದ್ದಾರೆ. ಇದರಿಂದ ಸಾಲದ ಕಂತು ಪಾವತಿ ಮಾಡಲು ಸಾಧ್ಯವಾಗದ ಹಲವರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ.



ಉದಯವಾಹಿನಿ ಚಿತ್ರ

> **ಕಬ್ಬು ಬೆಳೆ ಉತ್ಪಾದನಾ ವೆಚ್ಚ ಹೆಚ್ಚಾಗಿರುವುದರಿಂದ ಮುಕ್ತ ಮತ್ತು ನ್ಯಾಯಸಮ್ಮತ ದರವನ್ನು (ಎಫ್‌ಆರ್‌ಪಿ) ಕಬ್ಬು ಆಧಾರಿತ ಉಪ ಉತ್ಪನ್ನಗಳ ಬೆಲೆಗಳ ಆಧಾರದ ಮೇಲೆ ಪ್ರತಿ ಟನ್ ಗೆ 4,500 ನೀಡಬೇಕು. ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಸಾಲ ಪಡೆಯಲು ದಾಖಲಾತಿ ಒದಗಿಸಲು ರೈತರಿಗೆ ಕಷ್ಟವಾಗುತ್ತಿರುವುದರಿಂದ ದಾಖಲಾತಿ ಸರಳೀಕರಣ ಮಾಡಿ, ಕಡಿಮೆ ಬಡ್ಡಿ ದರದಲ್ಲಿ 10 ಲಕ್ಷದವರೆಗೆ ಬೆಳೆ ಸಾಲ ನೀಡಲು ಮುಂದಾಗಬೇಕು ಎಂದು ಒತ್ತಾಯಿಸಿದರು.**

ಮೈಕ್ರೋ ಫೈನಾನ್ಸ್ ಸಾಲ ವಸೂಲಿದಾರರು ಹಾಗೂ ಮುಖ್ಯಸ್ಥರ ವಿರುದ್ಧ ಸೂಕ್ತ ತನಿಖೆ ನಡೆಸಿ ಕ್ರಮ ವಹಿಸಬೇಕು ಎಂದು ಆಗ್ರಹಪಡಿಸಿದರು. ಕ್ರೀಡೆ ಮನೋರಂಜನೆ 23 ಬೆಂಗಳೂರು ಗ್ರಾಮಾಂತರ ಬೀದರ್ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಇಂಡುವಾಳು ಚಂದ್ರಶೇಖರ್ ಮಾತನಾಡಿ, 'ಯಾವುದೇ ಸರ್ಕಾರಗಳು ರೈತರ ಪರವಾಗಿ ನಿಲ್ಲುವುದಿಲ್ಲ ಎಂಬುದಕ್ಕೆ ರಾಜ್ಯದಲ್ಲಿ ವಕ್ಫ್ ತನ್ನಿಷ್ಟದಂತೆ ಮೆರೆಯುತ್ತಿರುವುದೇ ಸಾಕ್ಷಿಯಾಗಿದೆ. ದೇವಾಲಯದ ಆಸ್ತಿಗಳು ಮತ್ತು ರೈತರ ಪಹಣಿಯನ್ನೂ ಬಿಡುತ್ತಿಲ್ಲ.

ಜೊತೆಗೆ ಶಾಲಾ ಸ್ಥಳಗಳನ್ನು ನುಂಗಿ ಹಾಕುತ್ತಿರುವುದನ್ನು ನಾವು ಕಾಣುತ್ತೇವೆ. ಇದನ್ನು ನಿಲ್ಲಿಸದಿದ್ದರೆ ಪ್ರತಿಭಟನೆ ತೀವ್ರಗೊಳಿಸಲಾಗವುದು' ಎಂದು ಎಚ್ಚರಿಕೆ ನೀಡಿದರು.

---

# ಭತ್ತದ ಕೊಯ್ಲು ಆರಂಭವಾದರೂ ಖರೀದಿ ಕೇಂದ್ರಗಳ ಸುಳಿವಿಲ್ಲ

## • ಯಳಂದೂರು ತಾಲ್ಲೂಕಿನಲ್ಲಿ 3150 ಹೆಕ್ಟೇರ್ ಹಾಗೂ ಚಾಮರಾಜನಗರ ತಾಲ್ಲೂಕಿನಲ್ಲಿ 950 ಹೆಕ್ಟೇರ್ ನಾಟಿ

• **ಉದಯವಾಹಿನಿ, ಯಳಂದೂರು**

ಜಿಲ್ಲೆಯಾದ್ಯಂತ ಮುಂಗಾರು ಹಂಗಾಮಿಗೆ ನಾಟಿ ಮಾಡಿದ್ದ ಭತ್ತ ಕೊಯ್ಲಿಗೆ ಬಂದಿದ್ದು ರೈತರು ಕಟಾವಿಗೆ ಸಿದ್ಧತೆ ಮಾಡಿಕೊಂಡಿದ್ದಾರೆ. ಆದರೆ, ಇದುವರೆಗೂ ಬೆಂಬಲ ಬೆಲೆ ಯೋಜನೆಯಡಿ ಖರೀದಿ ಕೇಂದ್ರಗಳು ತೆರೆಯದಿರುವುದು ಮಾರುಕಟ್ಟೆಯಲ್ಲಿ ಭತ್ತಕ್ಕೆ ಬೆಲೆ ಹಾಗೂ ಬೇಡಿಕೆ ಕುಸಿಯುವಂತೆ ಮಾಡಿದೆ. ಜಿಲ್ಲೆಯಲ್ಲಿ ಮುಂಗಾರು ಹಂಗಾಮಿಗೆ 12,552 ಹೆಕ್ಟೇರ್‌ನಲ್ಲಿ ಭತ್ತ ನಾಟಿಯಾಗಿದೆ. ಕೊಳ್ಳೇಗಾಲ ತಾಲ್ಲೂಕಿನಲ್ಲಿ ಅತಿ ಹೆಚ್ಚು 8452 ಹೆಕ್ಟೇರ್‌ನಲ್ಲಿ ಭತ್ತ ನಾಟಿ ನಡೆದಿದೆ. ಉಳಿದಂತೆ ಯಳಂದೂರು ತಾಲ್ಲೂಕಿನಲ್ಲಿ 3150 ಹೆಕ್ಟೇರ್ ಹಾಗೂ ಚಾಮರಾಜನಗರ ತಾಲ್ಲೂಕಿನಲ್ಲಿ 950 ಹೆಕ್ಟೇರ್ ನಾಟಿ ನಡೆದಿದೆ.

9,194 ಹೆಕ್ಟೇರ್‌ನಲ್ಲಿ ರಾಗಿ ಬಿತ್ತನೆ ನಡೆದಿದ್ದು ಹನೂರು ತಾಲ್ಲೂಕಿನಲ್ಲಿ ಗರಿಷ್ಠ 7,070, ಚಾಮರಾಜನಗರ ತಾಲ್ಲೂಕಿನಲ್ಲಿ 693, ಕೊಳ್ಳೇಗಾಳ ತಾಲ್ಲೂಕಿನಲ್ಲಿ 638, ಯಳಂದೂರು 400 ಹಾಗೂ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ 393 ಹೆಕ್ಟೇರ್‌ನಲ್ಲಿ ರಾಗಿ ಬಿತ್ತನೆ ಮಾಡಲಾಗಿದೆ. ಬಹುತೇಕ ಜಿಲ್ಲೆಯಾದ್ಯಂತ ಡಿಸೆಂಬರ್‌ನಲ್ಲಿ ಭತ್ತದ ಕೊಯ್ಲಿನ ಸುಗ್ಗಿ ವೇಗ ಪಡೆದುಕೊಳ್ಳಲಿದ್ದು, ಪ್ರಸ್ತುತ ಕಟಾವಿಗೆ ಸಿದ್ಧತೆಗಳು ಭರದಿಂದ ಸಾಗಿವೆ. ಯಳಂದೂರು ತಾಲ್ಲೂಕಿನಲ್ಲಿ ಭತ್ತ ಮತ್ತು ರಾಗಿ ಕೊಯ್ಲಿಗೆ ಬಂದಿದೆ. ಮಳೆ ಹಾಗೂ ನೀರಾವರಿ ಲಭ್ಯತೆಯಿಂದ ಈ ಬಾರಿ ಹೆಚ್ಚಿನ ಪ್ರದೇಶದಲ್ಲಿ ಭತ್ತ ಬೆಳೆಯಲಾಗಿದ್ದು ರೈತರು ಉತ್ತಮ ಇಳುವರಿ ನಿರೀಕ್ಷೆಯಲ್ಲಿದ್ದಾರೆ. ಆದರೆ, ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿ ಕೇಂದ್ರಗಳ ಸ್ಥಾಪನೆ ಆರಂಭವಾಗದ ಪರಿಣಾಮ ರೈತರು ಕಟಾವು ಮಾಡಲಾದ ಭತ್ತವನ್ನು ದಲ್ಲಾಳಿಗಳಿಗೆ ಮಾರಾಟ ಮಾಡುವ ಅನಿವಾರ್ಯತೆ ಎದುರಾಗಿದೆ.

**ಖರೀದಿ ಕೇಂದ್ರ ತೆರೆಯಲು ಸಿದ್ಧತೆ**

**ಭತ್ತ ರಾಗಿ ಖರೀದಿಗೆ ಚಾಮರಾಜನಗರ ತಾಲ್ಲೂಕಿನಲ್ಲಿ ಎಪಿಎಂಸಿ ಯಾರ್ಡ್ ಆವರಣ ಸಂತೇಮರಹಳ್ಳಿ ಎಪಿಎಂಸಿ ಯಾರ್ಡ್ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಎಪಿಎಂಸಿ ಯಾರ್ಡ್ ಯಳಂದೂರು ತಾಲ್ಲೂಕಿನಲ್ಲಿ ಟಿ.ಎ.ಪಿ.ಸಿ.ಎಂ.ಎಸ್ ಆವರಣ ಹಾಗೂ ಹನೂರು ತಾಲ್ಲೂಕಿನಲ್ಲಿ ರಾಗಿ ಖರೀದಿಗೆ ಎಪಿಎಂಸಿ ಯಾರ್ಡ್ ಆವರಣದಲ್ಲಿ ಖರೀದಿ ಕೇಂದ್ರಗಳನ್ನು ತೆರೆಯಲು ಸಿದ್ಧತೆ ಜಿಲ್ಲಾಡಳಿತ ಮಾಡಿಕೊಂಡಿದೆ.**



ಉದಯವಾಹಿನಿ ಚಿತ್ರ

ತಾಲ್ಲೂಕಿನಲ್ಲಿ 3150 ಹೆಕ್ಟೇರ್ ಭತ್ತ ಮತ್ತು 500 ಹೆಕ್ಟೇರ್ ಪ್ರದೇಶದಲ್ಲಿ ರಾಗಿ ಬಿತ್ತನೆ ನಡೆದಿದೆ. ಈ ಬಾರಿ ಕೆರೆಕಟ್ಟೆ ಮತ್ತು ಕಾಲುವೆಗಳಲ್ಲಿ ಸಮೃದ್ಧವಾಗಿ ನೀರು ಹರಿದಿರುವುದರಿಂದ ಉತ್ತಮ ಬೆಳೆ ರೈತರ ಕೈಸೇರುವ ನಿರೀಕ್ಷೆ ಇದೆ.

ಕೊಯ್ಲಿನ ಯಂತ್ರಗಳು ಈಗಾಗಲೇ ತಾಲ್ಲೂಕಿನಾದ್ಯಂತ ಬಿಡಾರ ಹೂಡಿದ್ದು ಮಂಗಳವಾರದಿಂದ ಕೊಯ್ಲು ಕಾರ್ಯ ಆರಂಭವಾಗಲಿದೆ.

**ಸಾಗಟ ಮಾಡುವ ವೆಚ್ಚ ಹೊರೆ**

**ಭತ್ತ ಖರೀದಿ ಕೇಂದ್ರ ಸ್ಥಾಪನೆಯಾಗುವವರೆಗೂ ಕಾಯುವ ವ್ಯವಧಾನ ರೈತರಿಗಿಲ್ಲ. ಪ್ರಸ್ತುತ ಭತ್ತ ಕಟಾವು ಮಾಡಿದರೆ ಗೋದಾಮಿಗೆ ಭತ್ತ ಸಾಗಟ ಮಾಡುವ ವೆಚ್ಚ ಹೊರೆಯಾಗುತ್ತದೆ. ಒಣಗಿಸಿ, ಶೇಖರಿಸಿಡುವ ವ್ಯವಸ್ಥೆ ಎಲ್ಲ ರೈತರ ಬಳಿಯೂ ಇರುವುದಿಲ್ಲ. ಹೆಚ್ಚು ಮಾನವ ಶ್ರಮ ಹಾಗೂ ಕೂಲಿಯಾಳುಗಳ ಬಳಕೆ ಕಾರಣಕ್ಕೆ ಹೆಚ್ಚಿನ ರೈತರು ಜಮೀನಿನಲ್ಲಿಯೇ ದಲ್ಲಾಳಿಗಳಿಗೆ ಭತ್ತ ಮಾರಾಟ ಮಾಡುತ್ತಾರೆ ಎನ್ನುತ್ತಾರೆ ರೈತರು. ಈ ಬಾರಿ ಫಸಲನ್ನು ಖರೀದಿಸಲು ಹಾಗೂ ಮಾನದಂಡಗಳ ಕುರಿತು ಇನ್ನೂ ಸಮರ್ಪಕ ಪ್ರಚಾರ ಆರಂಭವಾಗಿಲ್ಲ. ದಾಸ್ತಾನು ಮಾಡಲು ಖರೀದಿ ಕೇಂದ್ರಗಳಲ್ಲಿ ವ್ಯವಸ್ಥೆ ಮಾಡಿಲ್ಲ.**

**ದಲ್ಲಾಳಿಗಳ ದರ ನಿಗದಿ:** ಇನ್ನೂ ಭತ್ತ ಖರೀದಿ ಕೇಂದ್ರ ಆರಂಭವಾಗದಿರುವುದರಿಂದ ದಲ್ಲಾಗಳಿಗಳೇ ದರ ನಿಗದಿ ಮಾಡಿದ್ದು ಖರೀದಿಗೆ ಸಿದ್ಧತೆ ನಡೆಸಿದ್ದಾರೆ.

**ಶೇಖರಿಸಿಡುವ ವ್ಯವಸ್ಥೆ ಇಲ್ಲ**

ಆರ್‌ಎನ್‌ಆರ್ ಭತ್ತ 2,400 2,150 . 2,600 ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಭತ್ತ ರಾಗಿ ಖರೀದಿಸಲು ಸರ್ಕಾರ ಇಷ್ಟೊತ್ತಿಗೆ ನೋಂದಣಿ ಪ್ರಕ್ರಿಯೆ ಆರಂಭಿಸುತ್ತಿತ್ತು. ಆದರೆ, ಈ ಬಾರಿ ಇನ್ನೂ ನೋಂದಣಿ ಪ್ರಕ್ರಿಯೆಗೆ ಚಾಲನೆ ಸಿಕ್ಕಿಲ್ಲ. ಹಾಗಾಗಿ ಮಾರುಕಟ್ಟೆಯಲ್ಲಿ ದರವೂ ಕಡಿಮೆ ಇದೆ ಎನ್ನುತ್ತಾರೆ ಕೃಷಿಕ ವೈ.ಕೆ.ಮೋಳೆ ಬಸವಶೆಟ್ಟಿ. ಯೋಗಾನಂದ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪ ನಿರ್ದೇಶಕನ 15ರಿಂದ ಭತ್ತ ರಾಗಿ ನೋಂದಣಿ ಪ್ರಕ್ರಿಯೆ ಆರಂಭವಾಗಬೇಕಿತ್ತು. ದತ್ತಾಂಶದಲ್ಲಿ ತಾಂತ್ರಿಕ ಸಮಸ್ಯೆಯಿಂದಾಗಿಡಿ.1ರಿಂದ ನೋಂದಣಿ ಪ್ರಕ್ರಿಯೆ ಆರಂಭವಾಗಲಿದೆ.

---

## ಮಿನಿ ನ್ಯೂಸ್

### ವಿದ್ಯುತ್ ಸ್ಪರ್ಶ: ಗಂಡಾನೆ ಸಾವು

• **ಉದಯವಾಹಿನಿ ಗುಂಡ್ಲುಪೇಟೆ**

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕುಂದುಕೆರೆ ವಲಯ ವ್ಯಾಪ್ತಿಯ ಮಂಗಲ ಗ್ರಾಮದ ಕಾಡಂಚಿನಲ್ಲಿ ಮೂರು ವರ್ಷದ ಗಂಡಾನೆ ವಿದ್ಯುತ್ ಸ್ಪರ್ಶಿಸಿ ಸಾವನ್ನಪ್ಪಿದೆ. ಹುಲಿಯಮ್ಮನ ಗುಡಿಗೆ ಹೋಗುವ ದಾರಿಯಲ್ಲಿ ಷರೀಫ್‌ಖಾನ್ ಎಂಬುವರ ಜಮೀನಿನಲ್ಲಿ ಬೆಳೆಯಲಾಗಿದ್ದ ರಾಗಿ ರಕ್ಷಣೆಗೆ ಅನುಮತಿ ಪಡೆಯದೆ ವಿದ್ಯುತ್ ತಂತಿ ಬೇಲಿ ಅಳವಡಿಸಲಾಗಿತ್ತು. ಸೋಮವಾರ ತಡರಾತ್ರಿ ಮೇವು ಅರಸಿ ಬಂದಾಗ ಆನೆಗೆ ವಿದ್ಯುತ್ ತಗುಲಿ ಮೃತಪಟ್ಟಿದೆ. ಭೂಮಾಲೀಕ ಷರೀಫ್‌ಖಾನ್ ಜಮೀನನ್ನು ಬೇರೊಬ್ಬರಿಗೆ ಗುತ್ತಿಗೆ ನೀಡಿದ್ದರು ಎನ್ನಲಾಗಿದೆ. ಭೂಮಿಯ ಮಾಲೀಕ, ಗುತ್ತಿಗೆದಾರನ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಬಂಡಿಪುರ ಹುಲಿ ಯೋಜನೆಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಎಸ್.ಪ್ರಭಾಕರನ್ ಮಾಹಿತಿ ನೀಡಿದರು.

**ರೈತರ ಆಕ್ರೋಶ:** ರೈತರ ಬೆಳೆಗಳಿಗೆ ಕಾಡಾನೆಗಳು ಸೇರಿ ಕಾಡು ಪ್ರಾಣಿಗಳು ನಿರಂತರವಾಗಿ ದಾಳಿ ಮಾಡಿ ಬೆಳೆ ಹಾಳು ಮಾಡುತ್ತಿದ್ದರೂ ಅರಣ್ಯ ಇಲಾಖೆ ಸಿಬ್ಬಂದಿ ಪರಿಣಾಮಕಾರಿಯಾಗಿ ರಾತ್ರಿ ಗಸ್ತು ತಿರುಗುತ್ತಿಲ್ಲ. ಬೆಳಗಿನ ಜಾವ ಕಾಡುಪ್ರಾಣಿಗಳು ರೈತರ ಜಮೀನಿಗೆ ನುಗ್ಗಿ ಬೆಳೆ ನಾಶ ಮಾಡುತ್ತಿವೆ. ಬೆಳೆ ಉಳಿಸಿಕೊಳ್ಳಲು ಅನಿವಾರ್ಯವಾಗಿ ರೈತರೇ ವಿದ್ಯುತ್ ತಂತಿಬೇಲಿ ಹಾಕಿಸಿಕೊಂಡಿದ್ದಾರೆ ಎಂದು ರೈತ ಉಮೇಶ್ ಆಕ್ರೋಶ ವ್ಯಕಪಡಿಸಿದರು.

### ಡಿ.1ಕ್ಕೆ ದೇಗುಲಮಠದಲ್ಲಿ ಲಕ್ಷ ದೀಪೋತ್ಸವ

• **ಉದಯವಾಹಿನಿ ಕನಕಪುರ**

ಪ್ರತಿವರ್ಷದಂತೆ ಕಾರ್ತೀಕ ಮಾಸದ ಅಮಾವಾಸ್ಯೆಯಂದು (ಡಿ.1ಕ್ಕೆ) ಕನಕಪುರದ ಪ್ರಾಚೀನ ದೇಗುಲಮಠದಲ್ಲಿ ಲಕ್ಷದೀಪೋತ್ಸವ ಮತ್ತು ಶ್ರೀ ಆದಿ ನಿರ್ವಾಣ ಸ್ವಾಮಿಗಳ ಮಹಾರಥೋತ್ಸವ ಹಮ್ಮಿಕೊಳ್ಳಲಾಗಿದೆ.

700 ವರ್ಷಗಳ ಸುದೀರ್ಘ ಇತಿಹಾಸ ಹೊಂದಿರುವ ದೇಗುಲಮಠದ ಆದಿನಿರ್ವಾಣ ಸ್ವಾಮಿಗಳು ಅಲ್ಲಮಪ್ರಭುಗಳ ಶೂನ್ಯ ಸಿಂಹಾಸನ ಪರಂಪರೆಯಲ್ಲಿ ಶ್ರೀಮಠವನ್ನು ಸಂಸ್ಥಾಪಿಸಿ ಹೊತ್ತಿಸಿದ ಜ್ಯೋತಿ ಪರಂಪರೆಯು 14 ಮಠಾಧಿಪತಿಗಳ ರೂಪದಲ್ಲಿ ಇಂದಿಗೂ ಬೆಳಗುತ್ತಿದೆ. ಬಡಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ಶ್ರೀಮಠದ ಕೊಡುಗೆ ಅಪಾರವಾಗಿದ್ದು, ಜ್ಞಾನದ ಸಂಕೇತವಾಗಿರುವ ದೀಪೋತ್ಸವವನ್ನು ಪ್ರತಿವರ್ಷ ಅದ್ದೂರಿಯಾಗಿ ಆಚರಿಸಲಾಗುತ್ತದೆ. ಶ್ರೀಮಠದ ಡಾ.ಮುಮ್ಮಡಿ ನಿರ್ವಾಣ ಸ್ವಾಮಿಗಳ ಸಾನ್ನಿಧ್ಯದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಹಲವು ರಾಜಕೀಯ ನಾಯಕರು, ವಿವಿಧ ಕ್ಷೇತ್ರದ ಗಣ್ಯರು, ಸಹಸ್ರಾರು ಭಕ್ತರು ಪಾಲ್ಗೊಳ್ಳಲಿದ್ದಾರೆ.

### ಮೂಲೆ ಸೇರಿದ ಆಂಬುಲೆನ್ಸ್ ವಾಹನ

• **ಉದಯವಾಹಿನಿ ಹುಳಿಯಾರು**

ಹಂದನಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆಂಬುಲೆನ್ಸ್ ಇಲ್ಲದೆ ರೋಗಿಗಳು ಪರದಾಡುವಂತಾಗಿದೆ ಎಂದು ಸಾರ್ವಜನಿಕರು ದೂರಿದ್ದಾರೆ. ಮನೋರಂಜನೆ ಹಾಸನ ಕಳೆದ ಒಂದೂವರೆ ತಿಂಗಳಿಂದ ವಾಹನದ ಟೈರ್ ಇಲ್ಲದೆ ಮೂಲೆ ಸೇರಿದೆ. ಬೆಂಗಳೂರು ಗ್ರಾಮಾಂತರ ಬೀದರ್ ಇದರ ಜತೆ ರಿಪೇರಿ ಇದ್ದು ಚಾಲನೆಗೆ ಸಿದ್ಧವಾಗಿಲ್ಲ. ಹಂದನಕೆರೆ ಹೋಬಳಿ ಕೇಂದ್ರವಾಗಿದ್ದು ಅನಾಹುತ ಸಂಭವಿಸಿದ ಸಂದರ್ಭದಲ್ಲಿ ಆಸ್ಪತ್ರೆಗೆ ಕರೆದೊಯ್ಯಲು ವಾಹನವಿಲ್ಲದೆ ಪರದಾಡಬೇಕಾಗಿದೆ.

ಈಗಾಗಲೇ ವಾಹನ ಕೆಟ್ಟು ನಿಂತಿರುವ ಬಗ್ಗೆ ಚಾಮರಾಜ ನಗರ ತಾಲ್ಲೂಕು ಆರೋಗ್ಯ ಅಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ ಎಂದು ಡಿಎಸ್‌ಎಸ್ ಸಂಚಾಲಕ ಸಬ್ಬೇನಹಳ್ಳಿ ವಸಂತ್ ಆಗ್ರಹಿಸಿದ್ದಾರೆ. ಸಂಬಂಧಪಟ್ಟ ಮೇಲಧಿಕಾರಿಗಳು ಇತ್ತ ಗಮನ ಹರಿಸುವಂತೆ ಸಾರ್ವಜನಿಕರು ಒತ್ತಾಯಿಸಿದರು.

ಚಿಕ್ಕಮಗಳೂರು ಚಿತ್ರದುರ್ಗ ದಾವಣಗೆರೆ ಆಂಬುಲೆನ್ಸ್ ರಿಪೇರಿ ಜವಾಬ್ದಾರಿ ಹೊತ್ತಿರುವ ಕಂಪನಿ ನಿರ್ವಹಿಸಬೇಕಿದೆ. ಈಗಾಗಲೇ ಸಂಬಂಧಪಟ್ಟ ಕಂಪನಿ ಗಮನಕ್ಕೆ ತರಲಾಗಿದೆ.

### ರಸ್ತೆಗೆ ಹಾಲು ಸುರಿದು ಪ್ರತಿಭಟನೆ

• **ಉದಯವಾಹಿನಿ ನಾಗಮಂಗಲ**

ತಾಲ್ಲೂಕಿನ ಕಾಡ ಅಂಕನಹಳ್ಳಿ ಗ್ರಾಮದಲ್ಲಿ ಸಚಿವ ಚಲುವರಾಯಸ್ವಾಮಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಹಾಲು ಉತ್ಪಾದಕರು ಹತ್ತಾರು ಲೀಟರ್ ಹಾಲನ್ನು ರಸ್ತೆಗೆ ಸುರಿದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಹೊಟ್ಟೆ ಸೇರಬೇಕಿದ್ದ ನೂರಾರು ಲೀಟರ್ ಹಾಲು ಮಣ್ಣುಪಾಲಾಗಿದೆ. ಗ್ರಾಮದ ಹಾಲು ಉತ್ಪಾದಕರ ಸಂಘವನ್ನು ಅಧಿಕಾರಿಗಳಿಗೆ ಸಚಿವ ಚಲುವರಾಯಸ್ವಾಮಿ ಕೊಟ್ಟಿರುವ ಸೂಚನೆಯಂತೆ ಸೂಪರ್ ಸೀಡ್ ಮಾಡಲಾಗಿದೆ ಎಂದು ಹಾಲು ಉತ್ಪಾದಕರು ಆರೋಪಿಸಿದ್ದಾರೆ. ಸಚಿವರು ದ್ವೇಷದಿಂದ ಹಾಲು ಖರೀದಿಸದಂತೆ ಮನ್ಮುಲ್‌ಗೆ ಸೂಚನೆ ನೀಡಿದ್ದಾರೆ. ಹೀಗಾಗಿ ಡೈರಿಯಲ್ಲಿ ಹಾಲು ಖರೀದಿಸಿಲ್ಲ ಎಂದು ಆರೋಪಿಸಿದ ಹಾಲು ಉತ್ಪಾದಕರು ಹಾಲನ್ನು ರಸ್ತೆಗೆ ಚೆಲ್ಲಿ ಪ್ರತಿಭಟನೆ ಮಾಡಿದ್ದಾರೆ.

### ಒತ್ತುವರಿ ತೆರವಿಗೆ ಕ್ರಮ ಬೇಡ: ಮನವಿ

• **ಉದಯವಾಹಿನಿ ಸೋಮವಾರಪೇಟೆ**

ತಾಲ್ಲೂಕಿನಲ್ಲಿ ಸಿ ಮತ್ತು ಡಿ ಭೂಮಿ ಒತ್ತುವರಿ ತೆರವು ಹಾಗು ಸೆಕ್ಷನ್-4 ಸರ್ವೆಗಾಗಿ, ರಾಜ್ಯ ಸರ್ಕಾರ ಅರಣ್ಯ ವ್ಯವಸ್ಥಾಪನಾ ಅಧಿಕಾರಿಗಳು ಮುಂದಾಗಿರುವ ಹಿನ್ನೆಲೆಯಲ್ಲಿ ತಾಲ್ಲೂಕು ಅಭಿವೃದ್ಧಿ ಹೋರಾಟ ಸಮಿತಿ ಪದಾಧಿಕಾರಿಗಳ ನಿಯೋಗ ಭಾನುವಾರ ಮೈಸೂರಿನ ಕಚೇರಿಯಲ್ಲಿ ವ್ಯವಸ್ಥಾಪನಾ ಅಧಿಕಾರಿಗಳನ್ನು ಭೇಟಿಯಾಗಿ ಮಾತುಕತೆ ನಡೆಸಿದರು. ಹಲವಾರು ದಶಕಗಳಿಂದ ಸಿ ಮತ್ತು ಡಿ ಭೂಮಿ ಒತ್ತುವರಿ ಮಾಡಿಕೊಂಡು ವ್ಯವಸಾಯ ಮಾಡುತ್ತಿದ್ದಾರೆ. ಹಕ್ಕುಪತ್ರಕ್ಕಾಗಿ ಅನೇಕ ವರ್ಷಗಳಿಂದ ಕೃಷಿಕರು ಕಂದಾಯ ಇಲಾಖೆ ಅರ್ಜಿ ಸಲ್ಲಿಸಿದ್ದಾರೆ. ಆದರೆ, ಸಿ ಮತ್ತು ಡಿ ಸರ್ಕಾರದ ಭೂಮಿ, ಅರಣ್ಯ ಇಲಾಖೆಗೆ ಸೇರಿದ್ದು ಎಂಬ ನೆಪವೊಡ್ಡಿ ಹಕ್ಕುಪತ್ರ ನೀಡುತ್ತಿಲ್ಲ ಎಂದು ಸಮಿತಿಯ ಅಧ್ಯಕ್ಷ ಅರುಣ್ ಕೊತ್ನಳ್ಳಿ ಅವರು ಅಧಿಕಾರಿ ರೇಣುಕಾಂಬ ಅವರಿಗೆ ಮನವರಿಕೆ ಮಾಡಿಕೊಟ್ಟರು. ತಾಲ್ಲೂಕಿನ ನೂರಾರು ಕುಟುಂಬಗಳಿಗೆ ಸಿ ಮತ್ತು ಡಿ ಭೂಮಿ ಬಿಟ್ಟರೆ ಬೇರೆ ಯಾವುದೇ ಆಸ್ತಿ ಇಲ್ಲ. ಈ ಸಂದರ್ಭದಲ್ಲಿ ಒತ್ತುವರಿ ತೆರವಿಗೆ ಕ್ರಮ ಜರುಗಿಸಿದರೆ ಕೃಷಿಕರು ಬೀದಿಪಾಲಾಗುತ್ತಾರೆ. ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆ ಬೇಜವಾಬ್ದಾರಿತನದಿಂದ ಕೃಷಿಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆಯಿಂದ ಜಂಟಿ ಸರ್ವೆ ಮಾಡಿಸಿ, ಭೂಮಿ ಗುರುತಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕೆಂದು ಮನವಿ ಮಾಡಿದರು.ಮನವಿಗೆ ಸ್ಪಂದಿಸಿದ ವ್ಯವಸ್ಥಾಪನಾ ಅಧಿಕಾರಿ, ಕೆಲವೇ ದಿನಗಳಲ್ಲಿ ಸೋಮವಾರಪೇಟೆಗೆ ಆಗಮಿಸಿ ಪ್ರತ್ಯಕ್ಷ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ಭರವಸೆ ನೀಡಿದರು. ಜಂಟಿ ಸರ್ವೆ ನಡೆಯುವ ತನಕ ಅರಣ್ಯ ಇಲಾಖೆ ಒತ್ತುವರಿ ತೆರವಿಗೆ ಪ್ರಯತ್ನ ಮಾಡದಂತೆ ಸೂಚಿಸಬೇಕು ಎಂಬ ಸಮಿತಿಯ ಮನವಿಗೆ ಸ್ಪಂದಿಸಿದ ಅಧಿಕಾರಿ, ಕೊಡಗು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯುವುದಾಗಿ ತಿಳಿಸಿದರು.

ಅಂತರಾಳದಿಂದ... EDITORIAL


# ಕಪ್ಪತ ಗುಡ್ಡವನ್ನು ಕಾಪಾಡಿ

ಅಭಿವೃದ್ಧಿಯ ಹೆಸರಿನಲ್ಲಿ ನಮ್ಮ ನಾಡಿನ ಅಮೂಲ್ಯ ಸಂಪತ್ತನ್ನು ಕೊಳ್ಳೆ ಹೊಡೆಯುವುದು ಈಗ ಸಾಮಾನ್ಯವಾಗಿದೆ. ಮುಂದಿನ ನೂರಾರು ತಲೆಮಾರುಗಳಿಗೆ ಅಗತ್ಯವಿರುವ ನೈಸರ್ಗಿಕ ಸಂಪನ್ಮೂಲಗಳನ್ನು ಈಗಲೇ ದೋಚಿ ತಮ್ಮ ತಿಜೋರಿಯನ್ನು ತುಂಬಿಕೊಳ್ಳುವುದಕ್ಕೆ ಇನ್ನೊಂದು ಹೆಸರು ಗಣಿಗಾರಿಕೆ. ರಾಜ್ಯದಲ್ಲಿ ಹಿಂದೆ ಯಡಿಯೂರಪ್ಪ ನೇತೃತ್ವದಲ್ಲಿ ಬಿಜೆಪಿ ಸರಕಾರವಿದ್ದಾಗ ಬಳ್ಳಾರಿ, ಸಂಡೂರುಗಳ ಅದಿರುಗಳನ್ನು ಲೂಟಿ ಮಾಡಿದವರು ಯಾರೆಂಬುದು ಎಲ್ಲರಿಗೂ ಗೊತ್ತಿದೆ. ಆ ಹಣದಿಂದಲೇ ಕೆಲವರು ರಾಜಕೀಯ ಸೇರಿ ತಮ್ಮ ಅಕ್ರಮ ವ್ಯವಹಾರಗಳನ್ನು ಕಾಪಾಡಿಕೊಂಡರು.

ಬಿಜೆಪಿಯವರೆಗೆ ನೃತಕತ ಇದ್ರ ಸಿದ್ದರಾಮಯ್ಯ ಅವರ ರಾಜಿನಾಮೆ ಕೇಳಬೇಡಿ

ಸದಾ ರಾಷ್ಟ್ರೀಯತೆಯ ಬಗ್ಗೆ ಮಾತಾಡುವ ಹಾಗೂ ಭಾರತ ಮಾತೆಯೆಂದು ನಾಟಕ ಮಾಡುವ ಬಿಜೆಪಿ ಈ ಗಣಿ ಲೂಟಿಕೋರರನ್ನು ರಕ್ಷಿಸುತ್ತಾ ಬಂತು ಕೇಂದ್ರ ಮಂತ್ರಿಯೂ ಆಗಿದ್ದ ಬಿಜೆಪಿ ನಾಯಕಿ ಸುಷ್ಮಾ ಸ್ವರಾಜ್ ಇಂತಹವರನ್ನು ತನ್ನ ಮಕ್ಕಳೆಂದು ಕರೆದು ಆಶೀರ್ವಾದ ಮಾಡಿದರು. ಇದರ ಪರಿಣಾಮವಾಗಿ ಬಳ್ಳಾರಿ ಮಾತ್ರವಲ್ಲ ಅಕ್ಕಪಕ್ಕದ ಊರುಗಳು ಗಣಿ ಧೂಳಿನಿಂದ ತತ್ತರಿಸಿ ಹೋದವು.

ದುಡ್ಡಿನ ಚೀಲ ಹಿಡಿದು ಎಲ್ಲರನ್ನೂ ಖರೀದಿ ಮಾಡುತ್ತಿದ್ದ ಇವರನ್ನು ಬಗ್ಗು ಬಡಿಯಲು ಕಾಂಗ್ರೆಸ್ ನಾಯಕ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಬೆಂಗಳೂರಿನಿಂದ ಬಳ್ಳಾರಿಗೆ ಪಾದಯಾತ್ರೆ ನಡೆಸಿದ್ದು ಹಾಗೂ ಪರಿಸರವಾದಿ ಎಸ್.ಆರ್. ಹಿರೇಮಠರು ಸುಪ್ರೀಂ ಕೋರ್ಟ್‌ವರೆಗೆ ಹೋಗಿ ನ್ಯಾಯಾಂಗ ಸಮರ ನಡೆಸಿದ ಪರಿಣಾಮ ಗಣಿಗಾರಿಕೆಗೆ ಕಾರಣರಾದವರು ಜೈಲು ಸೇರಬೇಕಾಯಿತು. ಈಗ ಮತ್ತೆ ಗಣಿಗಾರಿಕೆಗೆ ಚಾಲನೆ ನೀಡಲು ಮಸಲತ್ತು ನಡೆಯುತ್ತಿದೆ. ಅದು ಮಾತ್ರವಲ್ಲ ಗದಗ ಸಮೀಪದ ಅತ್ಯಂತ ಅಮೂಲ ತಾಣವಾದ ಕಪ್ಪತ ಗುಡ್ಡದಲ್ಲಿ ಗಣಿಗಾರಿಕೆ ನಡೆಸುವ ಹುನ್ನಾರಗಳು ನಡೆದಿವೆ. ಈ ಕಪ್ಪತ ಗುಡ್ಡದಲ್ಲಿ ಅಮೂಲ್ಯವಾದ ಔಷಧೀಯ ಸಸ್ಯಗಳಿವೆ. ಈ ಗುಡ್ಡದ ಒಡಲಲ್ಲಿ ಅಪಾರ ಖನಿಜ ಸಂಪತ್ತಿದೆ. ಗದಗ ಜಿಲ್ಲೆಯ ಈ ಕಪ್ಪತ ಗುಡ್ಡವನ್ನು ಹಿಂದೆ ಸಂರಕ್ಷಿತ ಪ್ರದೇಶ ಎಂದು ರಾಜ್ಯದ ಅರಣ್ಯ ಮತ್ತು ಜೀವ ವಿಜ್ಞಾನ ಇಲಾಖೆ ಗುರುತಿಸಿತ್ತು. ಆದರೆ ಗಣಿ ಲಾಬಿಗಳ ಒತ್ತಡದಿಂದಾಗಿ ಹಿಂದೆ ಪಡೆದಿತ್ತು. ಈಗ ಮತ್ತೆ ಗಣಿ ಲೂಟಿಕೋರರು ಅಲ್ಲಿ ಕಣ್ಣು ಹಾಕಿದ್ದಾರೆ. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಯಾವುದೇ ಒತ್ತಡಕ್ಕೆ ಮಣಿಯದಿದ್ದುದು ಹಾಗೂ ಗದಗ ಜಿಲ್ಲೆಯ ಜನತೆ ಗಣಿಗಾರಿಕೆಯನ್ನು ವಿರೋಧಿಸುತ್ತಿರುವುದರಿಂದ ಕಪ್ಪತ ಗುಡ್ಡ ಸದ್ಯಕ್ಕಂತೂ ಸುರಕ್ಷಿತವಾಗಿದೆ.



**ಸುಮಾರು 17,872 ಹೆಕ್ಟೇರ್ ಪ್ರದೇಶದಲ್ಲಿ ಹರಡಿಕೊಂಡಿರುವ ಕಪ್ಪತ ಗುಡ್ಡದಿಂದಾಗಿ ಗದಗ, ರೋಣ ಮುಂತಾದ ಪ್ರಮುಖ ಪ್ರದೇಶದಲ್ಲಿ ಚೂರು ಪಾರು ಹಸಿರು ಕಾಣುತ್ತಿದೆ. ಈಗಲಾದರೂ ಸರಕಾರ ಈ ಬಗ್ಗೆ ವಿಳಂಬ ಮಾಡದೇ ಸೂಕ್ತವಾದ ನಿಲುವನ್ನು ತಾಳಬೇಕು. ಈ ಕಪ್ಪತ ಗುಡ್ಡ ಗಿರಿಶ್ರೇಣಿಯು 54 ಕಿ.ಮೀ. ಗಳಷ್ಟು ಉದ್ದವಾಗಿದೆ. ಕಪ್ಪತಗುಡ್ಡ ಪರಿಸರದಿಂದಾಗಿ ಗದಗ ಜಿಲ್ಲೆ ಮಾತ್ರವಲ್ಲ ಇಡೀ ಉತ್ತರ ಕರ್ನಾಟಕದಲ್ಲಿ ಒಂದಿಷ್ಟು ಮಳೆಯಾಗುತ್ತಿದೆ. ಮಳೆ ಬೀಳುವ ಸಮಯದಲ್ಲಿ ಇದು ಹಸಿರನ್ನು ಹೊತ್ತು ಬಹಳ ಸುಂದರವಾಗಿ ಕಾಣುತ್ತದೆ. ಉತ್ತರ ಕರ್ನಾಟಕದ ಸಹ್ಯಾದ್ರಿ ಎಂದು ಕರೆಯಲಾಗುವ ಈ ಕಪ್ಪತ ಗುಡ್ಡ ನಿಸರ್ಗದ ಈ ರಮ್ಯ ತಾಣವು ನಾನಾ ವಿಧದ ಪಶು, ಪಕ್ಷಿಗಳಿಗೆ ಆಸರೆ ನೀಡಿದ್ದು, ಇಂತಹ ಅಮೂಲ್ಯ ತಾಣ ಗಣಿಗಾರಿಕೆಗೆ ಸಿಕ್ಕರೆ ಆ ಪರಿಸರ ಮಾತ್ರವಲ್ಲದೆ ಸುತ್ತಮುತ್ತಲಿನ ಪರಿಸರವೂ ಸರ್ವನಾಶವಾಗುತ್ತದೆ.**

ಜೀವ ವೈವಿಧ್ಯದ ಸಂರಕ್ಷಣೆ ಮಾಡಬೇಕಾದ ಸರಕಾರಿ ಇಲಾಖೆ ಆಗಾಗ ನಿಲುವು ಬದಲಿಸುತ್ತಾ ಬಂದಿದೆ. ಕಪ್ಪತ ಗುಡ್ಡದ ಭೂಗರ್ಭದಲ್ಲಿ ಇರುವ ಉತ್ತಮ ದರ್ಜೆಯ ಕಬ್ಬಿಣದ ಅದಿರು, ಬಂಗಾರದ ನಿಕ್ಷೇಪದ ಮೇಲೆ ಕಣ್ಣು ಹಾಕಿರುವ ಗಣಿ ಉದ್ಯಮಿಗಳು ಸರಕಾರಕ್ಕೆ ಒತ್ತಡ ತರುತ್ತಲೇ ಇದ್ದಾರೆ. ಕಪ್ಪತ ಗುಡ್ಡವನ್ನು ಉಳಿಸಿಕೊಳ್ಳಲು ನಿರಂತರವಾಗಿ ಹೋರಾಟ ಮಾಡಿದ ಪರಿಣಾಮವಾಗಿ ರಾಜ್ಯ ಸರಕಾರ ಅದನ್ನು ಸಂರಕ್ಷಿತ ಪ್ರದೇಶ ಎಂದು ಗುರುತಿಸಿ ಘೋಷಣೆ ಮಾಡಿದೆ. ಈ ಕಪ್ಪತ ಗುಡ್ಡದಲ್ಲಿ 300ಕ್ಕೂ ಹೆಚ್ಚು ಔಷಧೀಯ ಸಸ್ಯಗಳಿವೆ ಎಂದು ತಿಳಿಸಿದ ರಾಜ್ಯದ ಅರಣ್ಯ ಕೈಗಾರಿಕಾ ನಿಗಮ ಇದರ ರಕ್ಷಣೆಗೆ ಕ್ರಮ ಕೈಗೊಳ್ಳಲು ಮುಂದಾಗಿತ್ತು ಆದರೆ ಗಣಿ ಲಾಬಿಯ ನಿರಂತರ ಒತ್ತಡದಿಂದಾಗಿ ಈ ಕಪ್ಪತ ಗುಡ್ಡ ಪರಿಸರಕ್ಕೆ ಅಪಾಯ ತಪ್ಪಿದ್ದಲ್ಲ.

ರಾಜ್ಯದಲ್ಲಿ ಅರಣ್ಯ ಪ್ರದೇಶದ ವ್ಯಾಪ್ತಿ ಈಗಾಗಲೇ ಕುಸಿದಿದೆ. ಅಭಿವೃದ್ಧಿ ಕಾರ್ಯಗಳ ಹೆಸರಿನಲ್ಲಿ ಮರಗಳ ಮಾರಣ ಹೋಮ ನಡೆದಿದೆ. ಇದರ ಪರಿಣಾಮವಾಗಿ ವಿಶ್ವದ ಇತರ ತಾಣಗಳಂತೆ ಕಪ್ಪತ ಗುಡ್ಡ ಕೂಡ ಅಪಾಯದ ಅಂಚಿನಲ್ಲಿದೆ. ಅದು ಅಳಿದರೆ ಮೊದಲೇ ಮಳೆಯ ಅಭಾವವನ್ನು ಎದುರಿಸುತ್ತಿರುವ ಗದಗ, ಗಜೇಂದ್ರಗಡ ಮುಂತಾದ ಪ್ರದೇಶಗಳು ಮಳೆಯಿಲ್ಲದೆ ಸಂಪೂರ್ಣ ಬರಗಾಲದ ದವಡೆಗೆ ಸಿಲುಕಲಿವೆ. ಇದರಿಂದ ನೇರವಾಗಿ ತೊಂದರೆಗೀಡಾಗುವವರು ಸ್ಥಳೀಯ ರೈತಾಪಿ ಜನ ಆದ್ದರಿಂದ ಸರಕಾರ ಗಣಿ ಲಾಬಿಯ ಒತ್ತಡಕ್ಕೆ ಮಣಿದು ಯಾವುದೇ ಅವಸರದ ದುಡುಕಿನ ತೀರ್ಮಾನವನ್ನು ತೆಗೆದುಕೊಳ್ಳಬಾರದು. ಐದಾರು ವರ್ಷಗಳ ಹಿಂದೆ ಅಧಿಕಾರಿಗಳ ಜೊತೆ ಶಾಮೀಲಾಗಿ ಗಣಿ ಉದ್ಯಮಿಗಳು ಮುಸಲತ್ತು ನಡೆಸಿದಾಗ ಗದುಗಿನ ತೋಂಟದಾರ್ಯ ಮಠದ ಸಿದ್ದಲಿಂಗ ಸ್ವಾಮಿಗಳ ನೇತೃತ್ವದಲ್ಲಿ ಎಲ್ಲಾ ಜನಪರ ಹಾಗೂ ಪರಿಸರ ಪರ ಹೋರಾಟಗಾರರು ಮುಖ್ಯಮಂತ್ರಿಗಳನ್ನು ಬೆಳಗಾವಿಯಲ್ಲಿ ಭೇಟಿ ಮಾಡಿ ಕಪ್ಪತ ಗುಡ್ಡದ ಮಹತ್ವದ ಬಗ್ಗೆ ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದರು. ಆದರೆ ಸರಕಾರ ನಿರ್ಣಾಯಕ ಕ್ರಮ ಕೈಗೊಳ್ಳಲಿಲ್ಲ. ಇಂತಹ ಅತ್ಯಮೂಲ್ಯವಾದ ಕಪ್ಪತ ಗುಡ್ಡ ಪ್ರದೇಶಕ್ಕೆ ಯಾವುದೇ ಧಕ್ಕೆ ಯಾಗಬಾರದು, ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರಕಾರ ಯಾವುದೇ ಒತ್ತಡಕ್ಕೆ ಮಣಿಯದೇ ಇದನ್ನು ಕಾಪಾಡಲು ಕ್ರಮ ಕೈಗೊಳ್ಳಬೇಕು.

# ರಾಮಾಯಣ



## ಭಗೀರಥನು ಬ್ರಹ್ಮದೇವನಿಂದವರವನ್ನು ಪಡೆದದ್ದು

• ಹಿಂದಿನ ಸಂಚಿಕೆಯಿಂದ 26 ನೆಯ ಅಧ್ಯಾಯ

ಗಂಗೆಯು ಜಡ್ನುಮುನೀಶ್ವರನ ಕಿವಿಯಲ್ಲಿ ಹುಟ್ಟಿದ ಕಾರಣ ಜಾಹ್ನವೀ ಎಂದು ಲೋಕದಲ್ಲಿ ಪ್ರಸಿದ್ಧಳಾದಳು. ಗಂಗೆಯು ಅಲ್ಲಿಂದ ಮುಂದೆ ಭಗೀರಥನ ರಥದ ದಾರಿಗೊಂಡು ಹೋಗಿ ಸಮುದ್ರಮಾರ್ಗದಿಂದ ಪಾತಾಳವನ್ನು ಪ್ರವೇಶಿಸಿದಳು.

ಭಗೀರಥನು ರಥಾರೂಢನಾಗಿ ಈಶಾನ್ಯ ದಿಕ್ಕಿನಲ್ಲಿ ತನ್ನ ಪಿತಾಮಹರ ಭಸ್ಮರಾಶಿಯ ಸಮೀಪಕ್ಕೆ ಅತಿಪ್ರಯಾಸದಿಂದ ಕರೆದುಕೊಂಡು ಹೋಗಲು, ಗಂಗೆಯು ಆ ಭಸ್ಮರಾಶಿಗಳನ್ನು ಕದಡಿ ಸಗರಚಕ್ರವರ್ತಿಯ ಅರುವತ್ತು ಸಾವಿರ ಮಂದಿ ಮಕ್ಕಳನ್ನೂ ಪರಿಶುದ್ಧ ಮಾಡಿ ಸ್ವರ್ಗಲೋಕವನ್ನೇದಿಸಿದಳು.'

### ಗಂಗಾಮಹತ್ವ

ರಾಮಚಂದ್ರ, ಈ ಪ್ರಕಾರದಲ್ಲಿ ಭಗೀರಥನು ಗಂಗೆಯನ್ನು ಕರೆದುಕೊಂಡು ಪಾತಾಳವನ್ನು ಪ್ರವೇಶಿಸಿ ತನ್ನ ಪಿತೃಗಳ ಭಸ್ಮರಾಶಿಯನ್ನು ಗಂಗಾಪ್ರವಾಹದಿಂದ ತೊಳೆದು ಅವರನ್ನು ಸ್ವರ್ಗ ಲೋಕಕ್ಕೆ ಕಳುಹಿಸಿದನು. ಆ ಸಮಯದಲ್ಲಿ ಬ್ರಹ್ಮದೇವನು ಆ ರಾಜನ ಸಮೀಪಕ್ಕೆ ಬಂದು ಆತನನ್ನು ಕುರಿತು ' ಭಗೀರಥ, ನಿನ್ನಂಥ ಪುಣ್ಯವಂತನು ಹುಟ್ಟಿದ್ದರಿಂದ ಮಹಾತ್ಮನಾದ ಸಗರಚಕ್ರವರ್ತಿಯ ಅರುವತ್ತು ಸಾವಿರ ಕುಮಾರರು ಪಾಪಗಳಿಂದ ಬಿಡುಗಡೆಯನ್ನೈದಿ ಸ್ವರ್ಗಲೋಕ ವನ್ನೈದಿದರು. ಆ ಪುಣ್ಯದಿಂದ, ನಿನ್ನ ವಂಶದವರಾಗಿ ಹುಟ್ಟಿದ ಸಗರಚಕ್ರವರ್ತಿಯ ಮಕ್ಕಳು, ಈ ಸಮುದ್ರ ಜಲವು ಎಷ್ಟು ಪರ್ಯಂತ ಲೋಕದಲ್ಲಿರುವುದೋ ಅಷ್ಟು ಪರ್ಯಂತ ದೇವತೆಗಳ ಹಾಗೆ ಸ್ವರ್ಗಲೋಕದಲ್ಲಿರುವರು. ಗಂಗೆಯು ನಿನ್ನ ಹಿರಿಯ ಮಗಳಾಗಿ ಭಾಗೀರಥೀ ಎಂಬ ಹೆಸರಿನಿಂದ ಪ್ರಸಿದ್ಧಳಾಗುವಳು. ಈ ಗಂಗಾಜಲದಿಂದ ನಿನ್ನ ಪಿತಾಮಹರಿಗೆ ತಿಲತರ್ಪಣವನ್ನು ಕೊಡು, ನಿನ್ನ ಪ್ರಸಿದ್ದ ಪ್ರತಿಜ್ಞೆಯನ್ನು ಮೀರಬೇಡ. ಸಗರ ಚಕ್ರವರ್ತಿಯೂ ನಿನ್ನ ಹಾಗೆ ಕೀರ್ತಿಯನ್ನು ಪಡೆಯಲಿಲ್ಲ. ನಿನ್ನ ಅಜ್ಜನಾದ ಅಂಶುಮಂತನು ಗಂಗೆಯನ್ನು ತರುವುದಾಗಿ ಪ್ರತಿಜ್ಞೆಯನ್ನು ಮಾಡಿ ಆ ಪ್ರತಿಜ್ಞೆ ಯನ್ನು ನೆರವೇರಿಸಲು ಶಕ್ತನಾಗಲಿಲ್ಲ. ನಿನ್ನ ತಂದೆಯಾದ ದಿಲೀಪಮಹಾರಾಯನೂ ಆ ರೀತಿಯಲ್ಲಿಯೇ ಗಂಗೆಯನ್ನು ತರುವುದಾಗಿ ಪ್ರತಿಜ್ಞೆಯನ್ನು ಮಾಡಿ ತರುವುದಕ್ಕೆ ಶಕ್ತನಾಗದೆ ಸ್ವರ್ಗಸ್ಥನಾದನು. ನೀನು ಆ ಪ್ರತಿಜ್ಞೆಯನ್ನು ವಹಿಸಿ ಪರಿಪಾಲಿಸಿ ಲೋಕದಲ್ಲಿ ಮಹಾಪ್ರಖ್ಯಾತಿಯನ್ನು ಪಡೆದೆ ನೀನು ಗಂಗೆಯನ್ನು ತಂದು ಮಹತ್ತಾದ ಧನ್ಯವನ್ನು ಸಾಧಿಸಿದೆ.


ಮುಂದುವರಿಯುವುದು...

# ಧ್ಯಾನದ ಮ್ಯಾಜಿಕ್



ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ

ಇತ್ತೀಚಿಗೆ ಯಾರು ಬೇಕಾದರೂ ಎದ್ದು ಧ್ಯಾನ ಮಾಡಲು ಸಲಹೆ ನೀಡುತ್ತಾರೆ. ಮನಸ್ಸು ಶಾಂತವಾಗಿರಲಿ, ಎಂದು ನಾವು ಆ ಪ್ರಯತ್ನವನ್ನು ಮಾಡುತ್ತೇವೆ, ಆದರೆ, ಮನಸ್ಸು ಒಂದೆಡೆ ಎಲ್ಲಿ ನಿಲ್ಲುತ್ತದೆ ಅಸಂಖ್ಯಾತ ವಿಷಯಗಳಿದ್ದಾಗ ಕಣ್ಣು ಮುಚ್ಚಿಕೊಂಡು ಧ್ಯಾನ ಮಾಡಲು ಪ್ರಯತ್ನಿಸಿದ್ದರೆ ಮನಸ್ಸು ಪ್ರಶಾಂತವಾಗಿರುವ ಬದಲು ಚಂಚಲ ಮನಸ್ಸು ಹೆಚ್ಚು ಚಂಚಲವಾಗುತ್ತದೆ. ಧ್ಯಾನ ಮಾಡುವ ಪ್ರತಿಯೊಬ್ಬರ ಪ್ರಾಥಮಿಕ ಅನುಭವ ಇದು. ಏಕೆಂದರೆ, ಧ್ಯಾನವು ಒಂದು ದಿನದಲ್ಲಿ ಕಲಿಯುವಂತಹದ್ದಲ್ಲ. ಇದಕ್ಕಾಗಿ ಶ್ರದ್ಧೆಯಿಂದ ಅಭ್ಯಾಸ ಮಾಡಬೇಕು. ಹಾಗಾದರೆ, ಅದನ್ನು ಹೇಗೆ ಮಾಡುವುದು, ಎಂಬುದನ್ನು ತಿಳಿಯೋಣ.



**ಮನಸ್ಸಿಗೆ ತಂತ್ರಗಳು ಪ್ರಯೋಜನಗಳು**

ಮನಸ್ಸನ್ನು ಶಾಂತಗೊಳಿಸುವುದು ಅತ್ಯಂತ ಕಷ್ಟದ ವಿಷಯ. ಏಕೆಂದರೆ ,ಇಂದಿನ ಬಹುಕಾರ್ಯಕ ಯುಗದಲ್ಲಿ, ನಮ್ಮ ಮನಸ್ಸು ಅನೇಕ ಕಾರ್ಯಗಳಲ್ಲಿ ನಿರತವಾಗಿದೆ, ಅನೇಕ ವಿಷಯಗಳಲ್ಲಿ ಸಿಲುಕಿಕೊಂಡಿದೆ, ಅಲ್ಲಿಂದ ಅದನ್ನು ಬಿಡಿಸಿ ಧ್ಯಾನಿಸಬೇಕೆಂದರೆ ಶಿವಧನುಷ್ಯ ಎತ್ತಿದ ಹಾಗೆ! ಕೇವಲ ಅಭ್ಯಾಸ ಮತ್ತು ಸಕಾರಾತ್ಮಕತೆಯಿಂದ, ಏನನ್ನಾದರೂ ಸಾಧಿಸಬಹುದು. ಪ್ರಯತ್ನ ಪಟ್ಟರೆ ಎಲ್ಲವೂ ಸಾಧ್ಯ ....

**ಬೆಳಗಿನ ಸಮಯವನ್ನು ಆಯ್ಕೆ ಮಾಡಿ:** ಮೇಲಿನ ವಿಷಯಗಳು ಕರಗತವಾದರೆ ಧ್ಯಾನವನ್ನು ಆರಂಭಿಸಬಹುದು. ಅದಕ್ಕಾಗಿ ಬೆಳಗಿನ ಸಮಯವನ್ನು ಆಯ್ಕೆ ಮಾಡಿ. ಎಚ್ಚರವಾದಾಗ ಮೊಬೈಲ್ ನೋಡದೆ ಮನಸ್ಸನ್ನು ಶಾಂತವಾಗಿಟ್ಟುಕೊಂಡು ಕಣ್ಣು ಮುಚ್ಚಿ ನಿಮ್ಮನ್ನು ನೀವೆ ಗಮನಿಸಿ. ಮುಂಜಾನೆ ಯೋಚನೆಗಳ ಸಂಚಾರ ತೀರ ವಿರಳವಾಗಿರುತ್ತದೆ. ಆದ್ದರಿಂದಲೇ, ಮನಸ್ಸನ್ನು ಏಕಾಗ್ರಗೊಳಿಸುವುದು ಸುಗಮವಾಗುತ್ತದೆ. ಆಗಲೂ ಯೋಚನೆಗಳು ಬಂದರೂ ಬರಲಿ. ಕೆಲ ಕಾಲದ ನಂತರ ಅವು ದೂರವಾಗುತ್ತವೆ. ನಿಧಾನವಾಗಿ ನದಿಯ ಪ್ರಶಾಂತ ಹರಿವಿನಂತೆ ಮನದಲ್ಲಿ ಅಲೆ ನಿಂತು ಧ್ಯಾನಕ್ಕೆ ಮನಸ್ಸು ಸಿದ್ಧವಾಗುತ್ತದೆ.

**ಯೋಗ್ಯ ಸ್ಥಳದ ಆಯ್ಕೆ ಮಾಡಿ**

**ಧ್ಯಾನ ಮಾಡುವಾಗ ಸ್ಥಳದ ಮಹತ್ವವು ಇದೆ ಸರಿಯಾದ ಸ್ಥಳದಲ್ಲಿ ಸರಿಯಾದ ಧ್ಯಾನ ಸಾಧ್ಯವಾಗುತ್ತದೆ ಆದ್ದರಿಂದ ನೀವು ಕುಳಿತುಕೊಳ್ಳುವ ಸ್ಥಳ ನಿರ್ಮಲ ಹಾಗೂ ಶಾಂತವಾಗಿರಬೇಕು. ಸ್ವಚ್ಛವಾದ ಗಾಳಿಯ ಚಲನೆ ಇರಬೇಕು. ಸ್ಥಳ ಯಾವುದೇ ಪ್ರಕಾರದ ವಾಸನೆರಹಿತವಾಗಿರಬೇಕು. ಸುಗಂಧವಾಗಲಿ ದುರ್ಗಂಧವಾಗಲಿ ಎರಡೂ ಇರಬಾರದು. ನೀವು ಕುಳಿತುಕೊಳ್ಳುವ ಜಾಗದಲ್ಲಿ ಗಲಾಟೆ ಸದ್ದು ಗದ್ದಲ ಇರದಂತೆ ನೋಡಿಕೊಳ್ಳಿ. ಆದರೆ, ಒಂದು ಮಾತು ನಿಜ, ನೀವು ಮೇಲಿನ ಎಲ್ಲಾ ಪ್ರತಿಕೂಲ ಪರಿಸ್ಥಿತಿಗಳು ಇರುವ ಜಾಗದಲ್ಲಿ ಧ್ಯಾನವನ್ನು ಸರಿಯಾಗಿ ಮಾಡಲು ಸಾಧ್ಯವಾದರೆ ಆಗ ನೀವೊಬ್ಬ ನಿಜವಾದ ಸಾಧಕರಾಗುತ್ತೀರಿ!**


**ಧ್ಯಾನ ಮಾಡುವಾಗ ಸಂಗೀತವನ್ನು ಬಳಸಬೇಡಿ:** ಮೂಲಭೂತವಾಗಿ ಧ್ಯಾನವನ್ನು ಎಲ್ಲದರಿಂದ ಮನಸ್ಸನ್ನು ಬೇರ್ಪಡಿಸಲು ಮಾಡಲಾಗುತ್ತದೆ. ಯಾವುದೇ ಪ್ರಕಾರದ ಸಂಗೀತ, ಸಂಗೀತ ಅಥವಾ ಹಾಡನ್ನು ಕೇಳುತ್ತಾ ಧ್ಯಾನದ ಧಾರಣೆಯನ್ನು ಪ್ರಯತ್ನಿಸಿದರೆ ಮನಸ್ಸು ಹಾಡಿನಲ್ಲಿ ಏಕಾಗ್ರವಾಗಿ ಅದಕ್ಕೆ ಸಂಬಂಧಿಸಿದ ಆಲೋಚನೆಗಳು ಬರಲಾರಂಭಿಸುತ್ತವೆ. ಅಲ್ಲದೆ, ಧ್ಯಾನದ ಸಮಯದಲ್ಲಿ ಮನಸ್ಸು ಯಾವುದಾದರೂ ವಿಷಯದ ಮೇಲೆ ಅವಲಂಬಿತವಾಗಬಾರದು, ಇಂಥ ಸಮಯದಲ್ಲಿ ಬೇರೆ ಯಾವುದೇ ಸಂಗೀತ ಅಥವಾ ಹಾಡನ್ನು ಕೇಳದೆ ಕೇವಲ ನಿಮ್ಮ ಉಸಿರಿನ ಸಂಗೀತವನ್ನು ಮಾತ್ರ ಆಲಿಸಬೇಕು, ಇದನ್ನು ಗಮನದಲ್ಲಿಡಿ.

**ಮನಸ್ಸಿನ ಮೇಲೆ ನಿಯಂತ್ರಣ:** ಮನುಷ್ಯನ ಮನಸ್ಸು ಕೋತಿಯಂತೆ, ಒಂದೆಡೆ ಸ್ಥಿರವಾಗುವುದು ಬಹಳ ಕಷ್ಟ ಮನಸ್ಸಿನ ಮೇಲೆ ಹತೋಟಿ ಸಾಧಿಸುವುದು ಅಷ್ಟೊಂದು ಸುಲಭದ ಕೆಲಸವಲ್ಲ. ಆಲೋಚನೆಗಳನ್ನು ಒಮ್ಮೆಲೇ ಅದುಮಲು ಪ್ರಯತ್ನಿಸಬೇಡಿ ಮೊದಲು ಅವುಗಳನ್ನು ಸ್ವತಂತ್ರವಾಗಿ ಹರಿಯಲು ಬಿಡಿ ನಿಧಾನವಾಗಿ ಮನಸ್ಸನ್ನು ಸಾತ್ವಿಕ ವಿಚಾರಗಳತ್ತ ತಿರುಗಿಸಿ ಇದಕ್ಕೆ ಒಂದು ಉತ್ತಮ ಉಪಾಯವೆಂದರೆ ದೇವರ ನಾಮ ಸ್ಮರಣೆ ಮಾಡುವುದು. ನಿಮಗೆ ಇಷ್ಟವಾದ ದೇವರನ್ನು ನೆನೆಸಿಕೊಂಡು ಆತನ ರೂಪವನ್ನು ಮುಚ್ಚಿದ ಕಣ್ಣುಗಳ ಮುಂದೆ ತಂದುಕೊಳ್ಳಿ ಆ ರೂಪವನ್ನು ಆನಂದ್ ಆನಂದಿಸಿ ಆ ದೇವರು ನಾಮದ ಸ್ಮರಣೆ ಮಾಡುತ್ತಾ ಮೈಮರೆಯಿರಿ ಕೆಲಸ ಸಮಯ ಇದನ್ನು ನೀವು ಯಶಸ್ವಿಯಾಗಿ, ನಿರಂತರವಾಗಿ, ನಿಯಮಿತವಾಗಿ ಮಾಡಿದರೆ ಕಾಲಕ್ರಮೇಣ ನಿಮ್ಮ ಆತ್ಮ, ಮನಸ್ಸು ಹಾಗೂ ದೇಹಕ್ಕೆ ಸಿಗುವ ಲಾಭಗಳಿಂದ ನೀವೇ ಆಶ್ಚರ್ಯ ಪಡುತ್ತೀರಿ

**ಸಾಮಾಜಿಕ ಕಳಕಳಿ**



ಹೆಚ್.ಎಸ್.ಪ್ರತಿಮಾ ಹಾಸನ್
ಸಾಹಿತಿ,ಶಿಕ್ಷಕಿ,ಸಾಮಾಜಿಕ ಚಿಂತಕಿ.ಹಾಸನ



**ದಿನಕ್ಕೊಂದು ಮುಕ್ತಕ -35**

ಸುತ್ತೆಲ್ಲ ಜನರಿರಲು ಏಕಾಂಗಿಯಾಗಿರುವೆ
ಮತ್ತೆ ಕಾಡುವುದಲ್ಲ ಹಳೆಯ ನೆನಪು
ಚಿತ್ತವನು ಕಾಡುತಿದೆ ಹಲವಾರು ಪ್ರಶ್ನೆಗಳು
ಬತ್ತಿ ಹೋಗಿದೆ ನೆನಪು ಲಕ್ಷ್ಮಿ ದೇವಿ....

**ಭಾವಾರ್ಥ :** ಸಾಮಾನ್ಯವಾಗಿ ಸಮಾರಂಭದ ಸುತ್ತೆಲ್ಲ ಸಾವಿರಾರು ಜನರಿರುವರು. ಎಲ್ಲರಿಗೂ ಸಂಭ್ರಮದ ನೋಟವಿದ್ದರೂ ಸಹ ಎಷ್ಟೇ ಮರೆಯಬೇಕೆಂದರೂ ಸಹ ಹಿಂದಿನ ನೆನಪುಗಳು ಬಂದು ಆ ನೆನಪುಗಳಲ್ಲಿ ತೇಲಿ ಹೋಗಿ ಎಷ್ಟೇ ಸಂಬಂದಿಕರು ಜೊತೆಗೆ ಇದ್ದರು ಸಹ ಏಕಾಂಗಿಯ ಕಲ್ಪನೆ ಬರುತ್ತದೆ.ಆಗ ಯಾರ ಮಾತುಗಳು ಕಿವಿಗೆ ಬೀಳುವುದಿಲ್ಲ.ಅವರದೇ ಕಲ್ಪನೆಯಲ್ಲಿ ತೇಲಿ ಹೋಗಿರುತ್ತಾರೆ . ಎಷ್ಟೇ ಮರೆಯಬೇಕೆಂದರು ಸಹ ಹಳೆಯ ನೆನಪುಗಳನ್ನು ಮರೆಯಲಾಗದೆ ನರಳಾಡುತ್ತಿರುತ್ತಾರೆ. ನಮ್ಮ ಗುರಿಯನ್ನು ನಾವೇ ತಲುಪಬೇಕು. ಹಾಗೆಯೇ ನಮಗೆ ನಾವೇ ಎಷ್ಟೋ ಪ್ರಶ್ನೆಗಳನ್ನು ಕೇಳಿಕೊಂಡರೂ ಹಳೆಯ ನೆನಪುಗಳೆಲ್ಲ ಕಾಡುತ್ತಿದೆ. ಹಳೆಯ ನೆನಪುಗಳೆಲ್ಲ ದೀಪದಲ್ಲಿ ಎಣ್ಣೆ ಮುಗಿದ ನಂತರ ಬತ್ತಿ ಹೋದಂತೆ.ನಮ್ಮ ನೆನಪುಗಳು ಸಹ ಬತ್ತಿ ಹೋಗಬಾರದೇನು ಎಂದು ಹೇಳುತ್ತಾ ಏಕಾಂಗಿತನವನ್ನು ಅನುಭವಿಸುತ್ತಿರುತ್ತಾರೆ. ಒಟ್ಟಾರೆ ಯಾರನ್ನು ನಂಬದೆ ನಮಗೆ ನಾವೇ ಎಂದು ಜೀವಿಸಿದರೆ ಮಾತ್ರ ಬದುಕು ಎಂಬುದು ಅರಿತು ಜೀವಿಸಬೇಕು.

# ಆರ್‌ಎಸ್‌ಎಸ್ ನವರು ಕೂಡ ನಮ್ಮ ಸಂವಿಧಾನ ಜಾರಿಯನ್ನು ವಿರೋಧಿಸಿದ್ದರು : ಸಿಎಂ

• ಉದಯವಾಹಿನಿ, ಬೆಂಗಳೂರು

ನಮ್ಮ ದೇಶದಲ್ಲಿ ಸಂವಿಧಾನ ವಿರೋಧಿಗಳೂ ಇದ್ದಾರೆ. ಈ ಬಗ್ಗೆ ನಮಗೆ ಎಚ್ಚರಿಕೆ ಇರಬೇಕು. ಸಂವಿಧಾನ ಜಾರಿಗೆ ಹಿಂದೂ ಮಹಾ ಸಭಾದ ಸಾವರ್ಕರ್, ಗೋಳ್ವಾಳರ್ ಕೂಡ ವಿರೋಧಿಸಿದ್ದರು. ಬಿಜೆಪಿಯ ಮಾತೃಪಕ್ಷ ಆರ್.ಎಸ್.ಎಸ್ ನವರು ಕೂಡ ನಮ್ಮ ಸಂವಿಧಾನ ಜಾರಿಯನ್ನು ವಿರೋಧಿಸಿದ್ದರು ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ.

ನಮ್ಮ ದೇಶದಲ್ಲಿ ಸಂವಿಧಾನ ವಿರೋಧಿಗಳೂ ಇದ್ದಾರೆ. ಈ ಬಗ್ಗೆ ನಮಗೆ ಎಚ್ಚರಿಕೆ ಇರಬೇಕು. ಸಂವಿಧಾನ ಜಾರಿಗೆ ಹಿಂದೂ ಮಹಾ ಸಭಾದ ಸಾವರ್ಕರ್, ಗೋಳ್ವಾಲ್ಕರ್ ಕೂಡ ವಿರೋಧಿಸಿದ್ದರು. ಬಿಜೆಪಿಯ ಮಾತೃಪಕ್ಷ ಆರ್.ಎಸ್.ಎಸ್ ನವರು ಕೂಡ ನಮ್ಮ ಸಂವಿಧಾನ ಜಾರಿಯನ್ನು ವಿರೋಧಿಸಿದ್ದರು.

ಬಾಬಾ ಸಾಹೇಬರ ಸಂವಿಧಾನ ಜಾರಿಗೂ ಮೊದಲು ಮನುಷ್ಯ-ಮನುಷ್ಯರನ್ನು ತಾರತಮ್ಯದಿಂದ ಶೋಷಿಸುವ, ಅಸಮಾನತೆಯನ್ನು ಆಚರಿಸುವ ಅನಾಗರಿಕ ವ್ಯವಸ್ಥೆ, ಶೂದ್ರರು ದಲಿತರು-ಮಹಿಳೆಯರಿಗೆ ಶಿಕ್ಷಣವನ್ನು ವಿರೋಧಿಸುವ ಅಲಿಖಿತವಾದ ಮನುಸ್ಮೃತಿಯ ಪದ್ಧತಿಗಳು ಭಾರತದಲ್ಲಿ ಜಾರಿಯಲ್ಲಿತ್ತು ಸಂವಿಧಾನ ವಿರೋಧಿಗಳು ಮತ್ತೆ ಮನುಸ್ಮೃತಿ ಜಾರಿಗೆ ಈಗಲೂ ಹುನ್ನಾರ ನಡೆಸುತ್ತಿದ್ದಾರೆ. ಈ ಚರಿತ್ರೆಯನ್ನು ಇತಿಹಾಸವನ್ನು ನಾವು ಮರೆಯಬಾರದು. ನಮಗೆ ಬಂದಿರುವ ಸ್ವಾತಂತ್ರ್ಯ ಸಫಲ ಆಗಬೇಕಾದರೆ ಎಲ್ಲಾರಿಗೂ ಸಾಮಾಜಿಕ, ಆರ್ಥಿಕ ಸ್ವಾತಂತ್ರ್ಯ ಸಿಕ್ಕಾಗ ಮಾತ್ರ ಸಾಧ್ಯ ಎಂದು ಅಂಬೇಡ್ಕರ್ ಅವರು ಹೇಳಿದ್ದರು. ಸಂವಿಧಾನದ ಆಶಯಗಳಾದ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ನಮ್ಮ ರಾಜಕೀಯದ ಸರ್ಕಾರದ ಸಿದ್ಧಾಂತವೂ ಹೌದು. ಈ ಆಶಯಗಳೊಂದಿಗೆ ಸಾಗುತ್ತಿರುವ ನಮ್ಮ ಸರ್ಕಾರ ಎದುರಾಗುವ ಎಲ್ಲಾ ಪ್ರತಿರೋಧಗಳನ್ನು ಬಾಬಾಸಾಹೇಬ್ ಅಂಬೇಡ್ಕರರು ನಮ್ಮ ಕೈಯಲ್ಲಿಟ್ಟು ಹೋಗಿರುವ ಸಂವಿಧಾನದ ಅಸ್ತ್ರದ ಮೂಲಕವೇ ಎದುರಿಸಿ ಮುನ್ನಡೆಯಲಿದೆ.



**ಸಿಎಂ ಸಿದ್ದರಾಮಯ್ಯ ಹೇಳಿಕೆ**

**ಇದೇ ಸಂದರ್ಭದಲ್ಲಿ ದೇಶದ ಸರ್ವೋಚ್ಚ ನ್ಯಾಯಾಲಯ ಸಂವಿಧಾನದ ಪ್ರಸ್ತಾವಣೆಯಲ್ಲಿರುವ ಸಮಾಜವಾದಿ ಮತ್ತು ಜಾತ್ಯತೀತ ಆಶಯಗಳನ್ನು ಎತ್ತಿ ಹಿಡಿಯುತ್ತಿರುವುದು ಅತೀವ ಸಂತೋಷ ಮತ್ತು ಭವಿಷ್ಯದಲ್ಲಿ ಭರವಸೆಯನ್ನು ಮೂಡಿಸಿದೆ ಎಂದಿದ್ದಾರೆ.**
**-ಸಿಎಂ ಸಿದ್ದರಾಮಯ್ಯ**

# ಆನೇಕಲ್‌ನಲ್ಲಿ ಕಡಲೆಕಾಯಿ ಪರಿಷೆ

• ಉದಯವಾಹಿನಿ, ಆನೇಕಲ್

ತಾಲ್ಲೂಕಿನ ವಿವಿಧ ದೇವಾಲಯಗಳಲ್ಲಿ ಕಾರ್ತಿಕ ಸೋಮವಾರ ಪ್ರಯುಕ್ತ ವಿಶೇಷ ಪೂಜೆ, ಅಭಿಷೇಕ, ದೀಪೋತ್ಸವ ಕಾರ್ಯಕ್ರಮಗಳು ಶ್ರದ್ಧಾ ಭಕ್ತಿಯಿಂದ ನೆರವೇರಿದವು. ತಾಲ್ಲೂಕಿನ ಎಲ್ಲಾ ಶಿವ ದೇವಾಲಯಗಳಲ್ಲಿಯೂ ಕಾರ್ತೀಕ ಮಾಸದ ಕಡೆಯ ಸೋಮವಾರದ ಪ್ರಯುಕ್ತ ವಿವಿಧ ಪೂಜೆ, ಹೋಮಗಳನ್ನು ಆಯೋಜಿಸಲಾಗಿತ್ತು. 5. ಮನೋರಂಜನೆ 23 ದೇವಾಲಯಗಳಲ್ಲಿ ಭಕ್ತರ ದಂಡು ಸಾಮಾನ್ಯವಾಗಿತ್ತು. ಬೆಂಗಳೂರು ಗ್ರಾಮಾಂತರ ಪಟ್ಟಣದ ಬನ್ನೇರುಘಟ್ಟ ರಸ್ತೆಯ ಚಿನ್ನಪ್ಪ ಸ್ವಾಮಿ ದೇವಾಲಯದಲ್ಲಿ ಕಡೆ ಕಾರ್ತೀಕ ಸೋಮವಾರದ ಪ್ರಯುಕ್ತ ಕಡಲೆಕಾಯಿ ಪರಿಷೆ ನಡೆಯಿತು. ಚಿನ್ನಪ್ಪಸ್ವಾಮಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು. ಬೆಳಗಿನಿಂದಲೂ ನೂರಾರು ಭಕ್ತರು ಸರತಿ ಸಾಲಿನಲ್ಲಿ ನಿಂತು ಸ್ವಾಮಿಯ ದರ್ಶನ ಪಡೆದರು. ಸಂಜೆಯ ವೇಳೆಗೆ ಜಾತ್ರೆಯಲ್ಲಿ ಜನಜಂಗುಳಿ ಜಮಾಯಿಸಿತ್ತು. ದೇವಾಲಯದ ಆವರಣದಲ್ಲಿ ವಿವಿಧೆಡೆಯಿಂದ ಬಂದಿದ್ದ ವ್ಯಾಪಾರಿಗಳು ಕಡಲೆಕಾಯಿ ರಾಶಿ ಹಾಕಿ ವ್ಯಾಪಾರ ನಡೆಸಿದರು. ಮಕ್ಕಳು ಹಾಗೂ ಭಕ್ತರು ಕಡಲೆಕಾಯಿಗಳನ್ನು ದೇವಾಲಯದತ್ತ ಎಸೆದು ತಮ್ಮ ಭಕ್ತಿ ಸಮರ್ಪಿಸಿದರು. ಭಕ್ತರು ಪ್ರಸಾದವೆಂಬಂತೆ ಕಡಲೆಕಾಯಿಗಳನ್ನು ಆಯ್ದು ತಿನ್ನುತ್ತಿದ್ದರು. ಪುಟಾಣಿ ಮಕ್ಕಳು ಕಡಲೆ ಕಾಯಿಯನ್ನು ಆಯುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಕಡಲೆಕಾಯಿ ಪ್ರಿಯ ಚಿನ್ನಪಸ್ವಾಮಿ ಅವಧೂತರಾಗಿದ್ದ ಚಿನ್ನಪ್ಪ ಸ್ವಾಮಿ ಅವರು ಕಡಲೆಕಾಯಿ ಪ್ರಿಯರಾಗಿದ್ದರು. ಹಾಗಾಗಿ ಕಡೆ ಕಾರ್ತೀಕ ಸೋಮವಾರದಂದು ಇಲ್ಲಿ ಕಡಲೆಕಾಯಿ ಪರಿಷೆ ವಿಶೇಷವಾಗಿ ನಡೆಯುತ್ತದೆ. ಭಕ್ತರು ಕಡಲೆಕಾಯಿ ಕೊಂಡು ಚಿನ್ನಪ್ಪಸ್ವಾಮಿ ಅರ್ಪಿಸುವುದು ಇಲ್ಲಿಯ ವಿಶೇಷ ಭಕ್ತರು ಕಡಲೆಕಾಯಿ ಖರೀದಿಸಿ ದೇವಾಲಯದತ್ತ ಎಸೆದು ತಮ್ಮ ಭಕ್ತಿ ಪ್ರದರ್ಶಿಸಿದರು.



ಉದಯವಾಹಿನಿ ಚಿತ್ರ

# ಬಿಜೆಪಿಯವರು ಅದಾನಿ ಗುಂಪಿನ ವಕ್ತಾರರಂತೆ ವರ್ತಿಸುತ್ತಿದ್ದಾರೆ

• ಉದಯವಾಹಿನಿ, ಬೆಂಗಳೂರು

ಬಿಜೆಪಿಯವರು ಅದಾನಿ ಗುಂಪಿನ ವಕ್ತಾರರಂತೆ ಏಕೆ ವರ್ತಿಸುತ್ತಿದ್ದಾರೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯೋಜನೆಗಳಿಗಾಗಿ ಭಾರತೀಯ ಅಧಿಕಾರಿಗಳಿಗೆ ಲಂಚ ನೀಡಲು ಅಮೆರಿಕದ ಹಣವನ್ನು ಎರವಲು ಪಡೆದಿದ್ದಾರೆ ಎಂದು ವಿಶ್ವದ ಶ್ರೀಮಂತ ವ್ಯಕ್ತಿಗಳಲ್ಲಿ ಒಬ್ಬರನ್ನು ಅಮೆರಿಕ ನ್ಯಾಯಾಲಯ ದೋಷಾರೋಪಣೆ ಮಾಡಿದೆ ಎಂದರು.

ತುಂಬಾ ಜನರು ಈಗ ಎಲ್‌ಐಸಿ ಸೇರಿದಂತೆ ಸಾರ್ವಜನಿಕ ಸಂಸ್ಥೆಯಲ್ಲಿ ಬಂಡವಾಳ ಹೂಡಿದಿದ್ದಾರೆ. ಅದಕ್ಕಾಗಿ ಅದರ ಬಗ್ಗೆ ಚರ್ಚೆಯಾಗಬೇಕಲ್ಲವೇ ಆದರೆ ಸರ್ಕಾರವು ಅದಾನಿ ದೋಷಾರೋಪಣೆಗೆ ಸಂಬಂಧಿಸಿದಂತೆ ಸಮಸ್ಯೆಗಳನ್ನು ಚರ್ಚಿಸಲು ಬಯಸಲ್ಲ, ಮಣಿಪುರದ ಬಗ್ಗೆ, ದೇಶದಲ್ಲಿನ ಆರ್ಥಿಕ ಅಸಮಾನತೆಯ ಬಗ್ಗೆ ಚರ್ಚಿಸಲು ಬಯಸುವುದಿಲ್ಲ ಎಂದು ಹೇಳಿದರು.

ಅದೇ ರೀತಿ ಸಂವಿಧಾನದ ದಿನದಂದು ಹರಡುತ್ತಿರುವ ಕೋಮು ಸೌಹಾರ್ದತೆಯ ಬಗ್ಗೆ ಚರ್ಚಿಸಲು ಬಯಸುವುದಿಲ್ಲ, ಅವರು ಏನು ಚರ್ಚಿಸಲು ಬಯಸುತ್ತಾರೆ? ಮನ್ ಕಿ ಬಾತ್ ಅಥವಾ ಜನ್ ಕಿ ಬಾತ್ ಕೇಳಲು ಸಂವಿಧಾನದಲ್ಲಿ ತಿಳಿಸಲಾಗಿದೆಯೇ ಇದನ್ನು ಜನರು ತಿಳಿದುಕೊಳ್ಳಲು ಬಯಸುತ್ತಾರೆ. ಇತರ ದೇಶಗಳು ನಾವು ಇನ್ನು ಮುಂದೆ ತಮ್ಮ ಹೂಡಿಕೆಗಳನ್ನು ಪ್ರಕ್ರಿಯೆಗೊಳಿಸುತ್ತಿಲ್ಲ ಎಂದು ಹೇಳುತ್ತಿವೆ. ಏಕೆಂದರೆ ಅವರು ಭದ್ರತಾ ಏಜೆಂಟ್‌ಗಳು, ವಿನಿಮಯ ಮಂಡಳಿಗಳಿಂದ ಸತ್ಯಗಳನ್ನು ಮರೆಮಾಡಿದ್ದಾರೆ ಎಂದು ಹೇಳುತ್ತಿದೆ.

ಬಿಜೆಪಿಯವರು ಅದಾನಿ ಗುಂಪಿನ ವಕ್ತಾರರಂತೆ ಏಕೆ ವರ್ತಿಸುತ್ತಿದ್ದಾರೆ ಎಂದು ಪ್ರಶ್ನಿಸಿದರು.



# ಸದ್ಗುರು ಶ್ರೀ ಮುತ್ತುಸ್ವಾಮಿ ದೀಕ್ಷಿತರ, ಕನಕದಾಸರ ಆರಾಧನೋತ್ಸವ

• ಉದಯವಾಹಿನಿ, ಬೆಂಗಳೂರು

- ಕಲಾ ಪೋಷಕರಾದ ಸುಧಾಮಣಿ ಅಭಿಮತ
- ಸದ್ಗುರು ಶ್ರೀ ಮುತ್ತುಸ್ವಾಮಿ ದೀಕ್ಷಿತರ ಕನಕದಾಸರ ಆರಾಧನೋತ್ಸವ
- ರಂಜಿಸಿದ ವಿಶೇಷ ವೀಣಾವಾದನ, ಗಾಯನ ಕಛೇರಿಗಳು
- ಶ್ರೀ ಅನುಗ್ರಹ ಸಂಗೀತ ಮಹಾವಿದ್ಯಾಲಯ ಆಯೋಜನೆ

ಶಾಸ್ತ್ರೀಯ ಸಂಗೀತ ಕಲಿಕೆಗೆ ಬದ್ಧತೆ ಇದ್ದರೆ ಮಾತ್ರ ಕಲೆ ಒಲಿಯಲು ಸಾಧ್ಯ, ಎಂದು ಹಿರಿಯ ಸಂಗೀತ ಪೋಷಕರು ಮತ್ತು ಕಸೂತಿ ಕಲಾವಿದರಾದ ಸುಧಾಮಣಿ ಅವರು ಹೇಳಿದರು. ಬೆಂಗಳೂರಿನ ಶ್ರೀ ಅನುಗ್ರಹ ಸಂಗೀತ ಮಹಾವಿದ್ಯಾಲಯವು ನಗರದ ಬನಶಂಕರಿ ಒಂದನೇ ಹಂತದಲ್ಲಿರುವ (ಪಿಇಎಸ್ ಪದವಿ ಕಾಲೇಜು ಹಿಂಭಾಗ) ಸ್ವಾಮಿ ವಿವೇಕಾನಂದ ವಿದ್ಯಾ ಶಾಲೆ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸಂಗೀತ ಪರಮಹಂಸ ಸದ್ಗುರು ಮುತ್ತುಸ್ವಾಮಿ ದೀಕ್ಷಿತರ ಮತ್ತು ಸಂತ ಕವಿ ಕನಕದಾಸರ ಜಯಂತಿ- ವಿಶೇಷ ಸಂಗೀತ ಕಚೇರಿಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

**ಶ್ರೀ ಅನುಗ್ರಹ ಸಂಗೀತ ಮಹಾವಿದ್ಯಾಲಯ ಆಯೋಜನೆ**

ಪುರಾತನ ವಿದ್ಯೆಗಳಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತವೂ ಒಂದು. ಈ ಕಲೆ ನಮ್ಮ ಮನೆ ಮತ್ತು ಮನೆ- ಮನೆಗಳಲ್ಲಿ ಬೆಳಗಬೇಕು. ಅದಕ್ಕೆ ಅದಕ್ಕೆ ಒಂದು ಸೂಕ್ತವಾದ, ಶಾಸ್ತ್ರ ಬದ್ಧ ತರಬೇತಿ ಅಗತ್ಯ. ಅಂಥಾ ಕೆಲಸವನ್ನು ಅನುಗ್ರಹ ಸಂಗೀತ ಮಹಾವಿದ್ಯಾಲಯ ಮಾಡುತ್ತಿದೆ ಎಂದು ಶ್ಲಾಘಿಸಿದರು. ಬೆಂಗಳೂರು ತುಮಕೂರಿನಲ್ಲಿ ಕಳೆದ 25 ವರ್ಷಗಳಿಂದ ಸಂಸ್ಥೆ ಮಾತೆಯರಿಗೆ ಪ್ರತಿ ವರ್ಷ 1 ತಿಂಗಳು ಉಚಿತ ತರಬೇತಿ ಶಿಬಿರ ನಡೆಸಿ, ದಾಸರಪದಗಳನ್ನು ಕಲಿಯುವ ಅವಕಾಶ ನೀಡುತ್ತಿರುವುದು ಮಾದರಿ ಸೇವೆಯಾಗಿದೆ ಎಂದು ಸುಧಾಮಣಿ ಮೆಚ್ಚುಗೆ ವ್ಯಕ್ತಪಡಿಸಿದರು.

**ಶುದ್ಧವಾಗಿ ಹಾಡುವುದೂ ಮುಖ್ಯ:** ನಾಡಿನ ಹಿರಿಯ ವಿದ್ವಾಂಸ, ವಿದ್ಯಾಲಯದ ಪ್ರಾಚಾರ್ಯ ವಿದ್ವಾನ್ ಜೆ. ಎಸ್. ಶ್ರೀಕಂಠ ಭಟ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ದಾಸರು ಸರಳ, ಸುಲಲಿತ ಮತ್ತು ಸುಂದರವಾದ ಕನ್ನಡ ಭಾಷೆಯಲ್ಲಿ ಪದ್ಯಗಳನ್ನು ರಚಿಸಿದ್ದಾರೆ. ಅವುಗಳನ್ನು ಅಷ್ಟೇ ಶುದ್ಧವಾದ ಉಚ್ಚಾರಣೆ ಮತ್ತು ಸ್ವರದಲ್ಲಿ ಹಾಡಬೇಕು. ಭಾಷೆಗೆ ಅಪಚಾರವಾಗಬಾರದು. ಸ್ಪಷ್ಟವಾದ ಕನ್ನಡದಲ್ಲಿ ದಾಸರ ಕೀರ್ತನೆ ಹಾಡುವುದೂ ರಾಜ್ಯೋತ್ಸವ ಸಂಭ್ರಮಕ್ಕೆ ಗೌರವಿಸಿದಂತೆ ಎಂದರು. ಮುತ್ತುಸ್ವಾಮಿ ದೀಕ್ಷಿತರು ವೈಣಿಕರೂ ಆಗಿದ್ದು, ಅವರಿಗೆ ಗೌರವ ಸೂಚಿಸುವ ನಿಟ್ಟಿನಲ್ಲಿ ಮುಂಬರುವ ನಮ್ಮ ಸಂಗೀತ ಕಾರ್ಯಕ್ರಮಗಳಲ್ಲಿ 25 ಕಲಾವಿದರಿಂದ ವೀಣಾವಾದನವನ್ನು ಏಕ ಕಾಲಕ್ಕೆ ಆಯೋಜಿಸುವ ಚಿಂತನೆ ಇದೆ ಎಂದು ಶ್ರೀಕಂಠ ಭಟ್ ನುಡಿದರು.

**ರಂಜಿಸಿದ ಕಛೇರಿಗಳು:** ಈ ಸಂದರ್ಭದಲ್ಲಿ 15 ಕಲಾವಿದರಿಂದ ಏಕಕಾಲಕ್ಕೆ ನೊಟ್ಟು ಸ್ವರ ವೀಣಾ ವಾದನ ಮತ್ತು ವಿದ್ಯಾಲಯದ ವಿದ್ಯಾರ್ಥಿಗಳಿಂದ ನೊಟ್ಟು ಸ್ವರ ಗಾಯನ ಪ್ರಸ್ತುತಿಪಡಿಸಿದ್ದು ರಂಜಿಸಿತು. ವಿದ್ಯಾಲಯವು ಆಯೋಜಿಸಿದ್ದ ವಿಶೇಷ ಉಚಿತ ಶಿಬಿರದಲ್ಲಿ ದಾಸರ ಪದಗಳನ್ನು ಕಲಿತ ಶಿಬಿರಾರ್ಥಿ ಮಾತೆಯರು ಮತ್ತು ವಿದ್ಯಾಲಯದ ವಿದ್ಯಾರ್ಥಿಗಳು ಕನಕದಾಸರು ರಚಿಸಿದ ದೇವರ ನಾಮಗಳನ್ನು ಹಾಡಿ ಎಲ್ಲಾರ ಗಮನಸೆಳೆದರು.

ನಂತರ ವಿದ್ವಾನ್ ಸುಬ್ಬುಕೃಷ್ಣ ಮತ್ತು ವಿದ್ವಾನ್ ನಿರಂಜನ ಎಡಿಲಾಯ ಪ್ರತ್ಯೇಕ ಕಛೇರಿ ನಡೆಸಿ ದೀಕ್ಷಿತರ ಮತ್ತು ದಾಸರ ಕೃತಿಗಳನ್ನು ಮೋಹ ಕಂಠಸಿರಿಯಿಂದ ಪ್ರಸ್ತುತಪಡಿಸಿದರು. ಯುವ ವಿದ್ವಾಂಸ ಶಶಾಂಕ ಚಿನ್ನ ಅವರ ಕೊಳಲು ವಾದನ ಕಛೇರಿ ಎಲ್ಲರನ್ನೂ ತಲೆಗೂಗುವಂತೆ ಮಾಡಿತು. ವಿದ್ವಾಂಸರಾದ ಅಭಯ್‌ಉ ಸಂಪಿಗೆತ್ತಾಯ (ಪಿಟೀಲು), ಶಿವಮೊಗ್ಗ ನಿಖಿಲ್ ಕುಮಾರ (ಮೃದಂಗ ), ವಿದುಷಿಯರಾದ ದೀಪ್ತಿ ಮತ್ತು ಧನ್ಯಾ ( ವೀಣೆ ) ಅವರು ಪಕ್ಕವಾದ್ಯದಲ್ಲಿ ಸಹಕಾರ ನೀಡಿ ಕಛೇರಿಗಳು ಕಳೆಗಟ್ಟುವಂತೆ ಮಾಡಿದರು. ಪ್ರಾಚಾರ್ಯ ವಿದ್ವಾನ್ ಜೆ. ಎಸ್. ಶ್ರೀಕಂಠ ಭಟ್ ಮತ್ತು ವಸುಮತಿ ಭಟ್ ಹಾಜರಿದ್ದರು.



**ಬೆಂಗಳೂರಿನಲ್ಲಿ ಶ್ರೀ ಅನುಗ್ರಹ ಸಂಗೀತ ಮಹಾವಿದ್ಯಾಲಯ ಹಮ್ಮಿಕೊಂಡಿದ್ದ ಸದ್ಗುರು ಮುತ್ತುಸ್ವಾಮಿ ದೀಕ್ಷಿತರು ಮತ್ತು ಸಂತ ಕವಿ ಕನಕದಾಸರ ಜಯಂತಿ ವಿಶೇ ಸಂಗೀತ ಕಚೇರಿಯನ್ನು ಕಲಾವಿದೆ ಸುಧಾಮಣಿ ಉದ್ಘಾಟಿಸಿದರು. ಪ್ರಾಚಾರ್ಯ ವಿದ್ವಾನ್ ಜೆ. ಎಸ್. ಶ್ರೀಕಂಠ ಭಟ್, ವಸುಮತಿ ಭಟ್ ಉಪಸ್ಥಿತರಿದ್ದರು. ಕಲಾವಿದರು ಗಾಯನ, ವಾದನ ಪ್ರಸ್ತುತ ಪಡಿಸಿಸಿದ್ದು ರಂಜಿಸಿತು.**

# ಬೆಂಗಳೂರು 2ನೇ ವಿಮಾನ ನಿಲ್ದಾಣ ಎಎಐಗೆ ಪ್ರಸ್ತಾವನೆ

• ಉದಯವಾಹಿನಿ, ಬೆಂಗಳೂರು

ಉದ್ಯಾನ ನಗರಿ ಬೆಂಗಳೂರಿಗೆ 2ನೇ ವಿಮಾನ ನಿಲ್ದಾಣ ಎಲ್ಲಿ ನಿರ್ಮಾಣವಾಗಲಿದೆ. ರಾಜ್ಯ ಸರ್ಕಾರದಿಂದ ಈ ಯೋಜನೆ ಕುರಿತು ಪ್ರಸ್ತಾವನೆ ಬಂದ ಬಳಿಕ ಕಾಡುತ್ತಿರುವ ಪ್ರಶ್ನೆ ಇದಾಗಿದೆ. ಸರ್ಕಾರ ಎರಡನೇ ವಿಮಾನ ನಿಲ್ದಾಣ ಯೋಜನೆ ವಿಚಾರದಲ್ಲಿ ವಿಳಂಬ ಮಾಡುತ್ತಿದೆಯೇ ಎಂಬ ಪ್ರಶ್ನೆಯೂ ಎದ್ದಿದೆ. ಸದ್ಯ ಯೋಜನೆ ಕುರಿತು ಅಪ್‌ಡೇಟ್ ಒಂದು ಸಿಕ್ಕಿದೆ. ಸರ್ಕಾರ ಸ್ಥಳ ಅಂತಿಮಗೊಳಿಸಿದ್ದು, ಎಎಐಗೆ ಈ ವಾರದಲ್ಲಿಯೇ ಈ ಯೋಜನೆ ಕುರಿತು ವರದಿ ಸಲ್ಲಿಕೆಯಾಗಲಿದೆ. ಸಿಎನ್‌ಬಿಸಿ ಟಿವಿ18 - ಮನಿ ಕಂಟ್ರೋಲ್ ಗ್ಲೋಬರ್ ಎಐ ಕಾನ್‌ಕ್ಲೇವ್ ಬೆಂಗಳೂರಿನಲ್ಲಿ ನಡೆಯಿತು. ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಖಾತೆ ಸಚಿವ ಎಂ. ಬಿ. ಪಾಟೀಲ ಬೆಂಗಳೂರು ನಗರದ 2ನೇ ವಿಮಾನ ನಿಲ್ದಾಣ ಯೋಜನೆ ಕುರಿತು ಮಾತನಾಡಿದ್ದಾರೆ. ಎಂ. ಬಿ. ಪಾಟೀಲ್ ಮಾತನಾಡಿ, ಕರ್ನಾಟಕ ಸರ್ಕಾರ ಬೆಂಗಳೂರಿನ 2ನೇ ವಿಮಾನ ನಿಲ್ದಾಣ ಯೋಜನೆ ಕುರಿತು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ (ಎಎಐ)ಗೆ ಈ ವಾರದಲ್ಲಿ ಪ್ರಸ್ತಾವನೆ ಸಲ್ಲಿಸಲಿದೆ ಎಂದು ಹೇಳಿದರು.

ತಮಿಳುನಾಡು ಸರ್ಕಾರ ಬೆಂಗಳೂರು ಸಮೀಪದ ಹೊಸೂರಿನಲ್ಲಿ ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣ ಸ್ಥಾಪನೆ ಕುರಿತು ಘೋಷಣೆ ಮಾಡಿದ ಬಳಿಕ ಬೆಂಗಳೂರಿನ 2ನೇ ವಿಮಾನ ನಿಲ್ದಾಣ ಯೋಜನೆ ಕುರಿತು ಚರ್ಚೆಗಳು ನಡೆಯುತ್ತಿವೆ.

**ಎಲ್ಲಿ ವಿಮಾನ ನಿಲ್ದಾಣ ಸ್ಥಾಪನೆ?;** ಸಚಿವ ಎಂ. ಬಿ. ಪಾಟೀಲ್ ಬೆಂಗಳೂರಿನ 2ನೇ ವಿಮಾನ ನಿಲ್ದಾಣ ಎಲ್ಲಿ ಸ್ಥಾಪನೆಯಾಗಲಿದೆ.. ಎಂಬ ಗುಟ್ಟು ಬಿಟ್ಟುಕೊಟ್ಟಿಲ್ಲ. ಆದರೆ, ಈ ವಾರ ನಾವು ಎಎಐಗೆ ಪ್ರಸ್ತಾವನೆ ಸಲ್ಲಿಕೆ ಮಾಡಲಿದ್ದೇವೆ. ಬೆಂಗಳೂರಿನ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು 2ನೇ ವಿಮಾನ ನಿಲ್ದಾಣದ ಸ್ಥಳವನ್ನು ಗುರುತಿಸಿದ್ದೇವೆ. ನಗರದ ಅಗತ್ಯ, ಐತಿಹಾಸಿಕ ಅಭಿವೃದ್ಧಿಯನ್ನು ಪರಿಗಣಿಸಿ ಸ್ಥಳವನ್ನು ಗುರುತಿಸಲಾಗಿದೆ ಎಂದು ಸಚಿವರು ಹೇಳಿದರು.


# ರೈತರ ಹೊಲಗಳಿಗೆ ಕೀಟಶಾಸ್ತ್ರ ತಜ್ಞರು ಭೇಟಿ ನೀಡಿ ಪರಿಶೀಲನೆ

## ಸಸಿ ಮಡಿಯಿಂದ ಸಸಿಗಳು ಕೀಳುವ ಮುನ್ನ ಕ್ಲೋರೋಫೈರಿಸ್ ಪಾಸ್ ಉಪಯೋಗಿಸಿ: ಡಾ ಸುಜಯ್ ಹುರಳಿ

• **ಉದಯವಾಹಿನಿ, ಸಿಂಧನೂರು**

ತಾಲ್ಲೂಕಿನ ಚನ್ನಳ್ಳಿ, ಸಿಂದ್ರಾಂಪುರ, ಮುಕ್ಕುಂದಾ, ಸಿಂಗಾಪುರ, ಹುಡಾ ಮತ್ತು ಗೊಬ್ಬರಕಲ್ ಗ್ರಾಮಗಳಿಗೆ ಭೇಟಿ ನೀಡಿ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಕಣೆ ನೊಣದ ಬಾಧೆಯು ಹತೋಟಿಗೆ ತರುವ ಹಿನ್ನೆಯಲ್ಲಿ ಡಾ. ಸುಜಯ ಹುರುಳಿ ಕೀಟಶಾಸ್ತ್ರ ತಜ್ಞರು, ಕೃಷಿ ಸಂಶೋಧನಾ ಕೇಂದ್ರ, ಗಂಗಾವತಿ ಕಣೆ ನೊಣ ನಿರ್ವಹಣೆ ಕುರಿತು ರೈತರಿಗೆ ತಾಂತ್ರಿಕ ಮಾಹಿತಿಯನ್ನು ನೀಡಿದರು.

ನಂತರ ರೈತರು ಹೊಲಗಳಿಗೆ ಹೋಗಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಕಣೆ ನೊಣವು ಸಾಮಾನ್ಯವಾಗಿ ಮಲೆನಾಡು ಮತ್ತು ಕರಾವಳಿ ಭಾಗದಲ್ಲಿ ಕಂಡುಬರುವಂತಹ ಕೀಟವಾಗಿದ್ದು ಇತ್ತೀಚಿಗೆ ತುಂಗಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ ಹವಾಮಾನದ ವೈಪರಿತ್ಯದಿಂದ ಮತ್ತು ತಡವಾಗಿ


ಉದಯವಾಹಿನಿ ಚಿತ್ರ

ನಾಟಿ ಮಾಡಿದ ಭತ್ತದ ಬೆಳೆಯಲ್ಲಿ ಕೀಟದ ಭಾದೆಯು ಕಾಣಿಸಿಕೊಂಡಿದೆ. ಈ ಕೀಟದ ಬಾಧೆಯನ್ನು ನಿರ್ವಹಿಸಲು ಸಸಿ ಮಡಿ ಹಂತದಲ್ಲಿ ಬಿತ್ತುವ ಮುನ್ನ 2 ಮಿ.ಲೀ. ಕ್ಲೋರೋಫೈರಿಫಾಸ್ 20ಇ.ಸಿ. ಕೀಟನಾಶಕವನ್ನು ಪ್ರತಿ ಲೀಟರ್ ನೀರಿಗೆ ಬೆರೆಸಿ ಬೀಜಗಳನ್ನು ಈ ದ್ರಾವಣದಲ್ಲಿ 12 ತಾಸುಗಳವರೆಗೆ ನೆನೆಸಿ ಬಿತ್ತುವದರಿಂದ ಸಸಿಮಡಿಯಲ್ಲಿ ಹುಳುವಿನ ಭಾದೆಯನ್ನು ಕಡಿಮೆ ಮಾಡಬಹುದು ಅಥವಾ

### ಹುಳುವಿನ ಭಾದೆ ನಿರ್ವಹಣೆ

**ಸಸಿಮಡಿಗಳಿ ಭತ್ತದ ಬೀಜಗಳನ್ನು ಬಿತ್ತುವ, ಉಗ್ಗುವ ಮೊದಲೇ ಸಸಿಮಡಿಗೆ (300 ಚ.ಮೀ. ಪ್ರದೇಶಕ್ಕೆ) 1.25 ಕಿ.ಗ್ರಾಂ. ಶೇ. 3 ರ ಕಾರ್ಬೋಫ್ಯುರಾನ್ ಹರಳನ್ನು ಬಿತ್ತನೆಗೆ ಮುಂಚೆ ಮಣ್ಣಿನಲ್ಲಿ ಬೆರೆಸಿ ನೀರು ಹಾಯಿಸುವದರಿಂದ ಹುಳುವಿನ ಭಾದೆಯನ್ನು ನಿರ್ವಹಣೆ ಮಾಡಬಹುದು.**

ಮೊಳಕೆಯೊಡೆದ ಬೀಜಗಳನ್ನು ಕ್ಲೋರೋಫೈರಿಫಾಸ್ 20 ಇ.ಸಿ. ಕೀಟನಾಶಕವನ್ನು 2 ಮಿ. ಲೀ ಪ್ರತಿ ಲೀಟರ್ ನೀರಿನಲ್ಲಿ 3 ತಾಸುಗಳವರೆಗೆ ನೆನೆಸಿ ಸಸಿ ಮಡಿಯಲ್ಲಿ ಉಗ್ಗುವದರಿಂದ ಹುಳುವಿನ ಭಾದೆಯನ್ನು ಕಡಿಮೆಗೊಳಿಸಬಹುದು ಎಂದರು.

**ಸಸಿಮಡಿಯಿಂದ ಸಸಿಗಳನ್ನು ಕೀ ಳುವ 4-6 ದಿನ ಮುಂಚಿತವಾಗಿ 2 ಮಿ. ಲೀ ಕ್ಲೋರೋಫೈರಿಫಾಸ್ 20 ಇ.ಸಿ., 2 ಮಿ. ಲೀ ಕಾರ್ಬೋಸಲ್ಫಾನ್ 25 ಇ.ಸಿ. ಅಥವಾ 1.5 ಮಿ.ಲೀ. ಫಿಪ್ರೊನಿಲ್ 5 ಇ.ಸಿ. ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸುವದರಿಂದ ಹುಳುವಿನ ಭಾದೆಯನ್ನು ತಪ್ಪಿಸಬಹುದು ಅಥವಾ ಸಸಿ ಹಚ್ಚಿದ 10 ದಿನದ ಒಳಗೆ ಹರಳು ರೂಪದ ಕೀಟನಾಶಕಗ ಳಾದ ಕಾರ್ಬೋ ಫ್ಯುರಾನ್ 3 ಜಿ, ಫಿಪ್ರೋನಿಲ್ 0.3 ಜಿ.ಆರ್. ಯಾವುದಾರೊಂದನ್ನು ಎಕರೆಗೆ 10 ಕೇಜಿಯಂತೆ ಉಗ್ಗಬೇಕು ಬಹು ಮುಖ್ಯವಾಗಿ ಕೀಟನಾಶಕ ವನ್ನು ಸಿಂಪಡಿಸಬೇಕಾದ ಸಮಯದಲ್ಲಿ ಗದ್ದೆಯಲ್ಲಿ ನೀರನ್ನು ನಿಲ್ಲಿಸಬಾರದೆಂದು ತಿಳಿಸಿದರು.**


ಈ ಸಂದರ್ಭದಲ್ಲಿ ನಜೀರ್ ಅಹ್ಮದ್ ಸಹಾಯಕ ಕೃಷಿ ನಿರ್ದೇಶಕರು ಸಿಂಧನೂರ, ಕೃಷಿ ಸಂಶೋಧನಾ ಕೇಂದ್ರ ಗಂಗಾವತಿಯ ಡಾ. ಮಹಾಂತ ಶಿವಯೋಗಿತಳಿ, ವಂಶಾಭಿವೃದ್ಧಿ ತಜ್ಞರು, ಡಾ. ಶ್ವೇತಾ ಬೇಸಾಯ ಶಾಸ್ತ್ರ ತಜ್ಞರು, ಡಾ. ರೇವತಿ ರೋಗ ಶಾಸ್ತ್ರ ತಜ್ಞರು, ಗೊರೆಬಾಳ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿಗಳಾದ ಬಸವರಡ್ಡಿ, ಹುಡಾ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾ ರಿಗಳಾದ ರಾಮನಗೌಡ ಆತ್ಮ ಯೋಜನೆಯ ಗುರು ಸಿದ್ದಲಿಂಗಯ್ಯ, ರೈತ ಸಂಪರ್ಕದ ಸಿಬ್ಬಂದಿ ಸೇರಿದಂತೆ ಚನ್ನಳ್ಳಿ, ಸಿಂದ್ರಾಂಪುರ, ಮುಕ್ಕುಂದಾ, ಸಿಂಗಾಪುರ, ಹುಡಾ ಮತ್ತು ಗೊಬ್ಬರಕಲ್ ಗ್ರಾಮದ ರೈತಭಾಂದವರು ಉಪಸ್ಥಿತರಿದ್ದರು.

# ಶಾಸಕ ಕೆ,ಎಂ ಶಿವಲಿಂಗೇಗೌಡ ಪ್ರಚಂಡ ಗೆಲುವು

• **ಉದಯವಾಹಿನಿ, ಅರಸೀಕೆರೆ**

ಭಾರಿ ಕುತೂಹಲ ಕೆರಳಿಸಿದ್ದ ನಗರ ಸಭೆಯ ಎಂಟು ವಾರ್ಡ್ ಗಳಲ್ಲಿ ನಡೆದ ಉಪಚುನಾವಣೆಯಲ್ಲಿ ಏಳು ಮಂದಿ ಕಾಂಗ್ರೆಸ್ ಸೇರಿದಂತೆ ಓರ್ವ ಪಕ್ಷೇತರ ಅಭ್ಯರ್ಥಿ ಆಯ್ಕೆಯಾಗುವುದರೊಂದಿಗೆ ಎಲ್ಲಾ ಹೊಸ ಮುಖಗಳು ನಗರಸಭೆಯನ್ನು ಪ್ರವೇಶಿಸಿದ್ದಾರೆ.

ಕಳೆದ ವಿಧಾನಸಭೆ ಚುನಾವಣೆಯಲ್ಲಿ ತೆನೆ ಇಳಿಸಿ ಕೈ ಹಿಡಿದಿದ್ದ ಶಾಸಕ ಕೆ,ಎಂ ಶಿವಲಿಂಗೇಗೌಡ ಪ್ರಚಂಡ ಗೆಲುವು ಸಾಧಿಸುವುದರೊಂದಿಗೆ ಕ್ಷೇತ್ರದಲ್ಲಿ ಕಾಂಗ್ರೆಸ್ ನಾಯಕತ್ವವನ್ನ ವಹಿಸಿಕೊಂಡ ಬಳಿಕ ಮೊದಲ ಬಾರಿಗೆ ನಡೆದ ನಗರಸಭೆಯ ಉಪಚುನಾವಣೆ ಯಲ್ಲಿ ನಗರದ ಜನತೆಯು ಕಾಂಗ್ರೆಸ್ ಅಭ್ಯರ್ಥಿಗಳನ್ನು ಆಶೀರ್ವದಿಸುವ ಮೂಲಕ ಶಿವಲಿಂಗೇಗೌಡರ ಕೈ ಬಲಪಡಿಸಿದ್ದಾರೆ. ಸತತ ಐದು ಬಾರಿ ಗೆಲುವು ಸಾಧಿಸಿದ್ದ ಬಿ,ಎನ್ ವಿದ್ಯಾಧರ್, ಮೊದಲ ಬಾರಿಗೆ ಪರಾಜಿತಗೊಂಡರೆ ವಾರ್ಡ್ ನಂಬರ್ 19 ರಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಇಮ್ರಾನ್ ಪಾಷಾ, ಸೇರಿದಂತೆ ನೂತನವಾಗಿ ಗೆಲುವು ಸಾಧಿಸಿರುವ ಎಲ್ಲಾ ಎಂಟು


ಉದಯವಾಹಿನಿ ಚಿತ್ರ

ಮಂದಿಯೂ ಸಹ ನಗರ ಸಭೆಗೆ ಹೊಸ ಮುಖಗಳಾಗಿರುವುದು ವಿಶೇಷ. ಚುನಾವಣೆಯ ಫಲಿತಾಂಶ ಹೊರಬೀಳುತ್ತಿದ್ದಂತೆ ಶಾಸಕ ಕೆಎಂ ಶಿವಲಿಂಗೇಗೌಡ ನೇತೃತ್ವದಲ್ಲಿ ವಿಜಯೋತ್ಸವ ಆಚರಿಸಿದ ನೂತನ ಸದಸ್ಯರು ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಪಟಾಕಿ ಸಿಡಿಸಿ ಪರಸ್ಪರ ಸಿಹಿ ತಿನಿಸುವ ಮೂಲಕ ತಮ್ಮ ಸಂತಸವನ್ನು ಹಂಚಿಕೊಂಡರು.

ಗೆಲುವು ಸಾಧಿಸಿದ ಕಾಂಗ್ರೆಸ್ ಪಕ್ಷದ ಯುವರಾಜ್ ದರ್ಶನ್ ಅವಿನಾಶ್ ರೇವಣ್ಣ ಯೋಗೀಶ್ ಪಲ್ಲವಿ ಗುಲ್ಜಾರಾ ಬಾನು ಹಾಗೂ ಪಕ್ಷೇತರ ಅಭ್ಯರ್ಥಿಯಾಗಿ ಇಮ್ರಾನ್ ಖಾನ್ ಗೆಲುವು ಸಾಧಿಸಿದರು ವಿಜಯೋತ್ಸವದ ಮೆರವಣಿಗೆಯಲ್ಲಿ ಯೋಜನಾ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅರುಣ್ ಕುಮಾರ್, ಬ್ಲಾಕ್

**ನಮ್ಮ ಕ್ಷೇತ್ರದ ಜನತೆ ಪ್ರಜ್ಞಾವಂತರಿದ್ದು ಅಭಿವೃದ್ಧಿಪರ ನಿಲುವು ಹೊಂದಿರುವುದರಿಂದ ಕಳೆದ ವಿಧಾನಸಭೆ ಚುನಾವಣೆಯಲ್ಲಿ ನನ್ನ ಗೆಲುವು ಸೇರಿದಂತೆ ಈಗ ನಡೆದಿರುವ ನಗರಸಭೆಯ ಉಪಚುನಾವಣೆಯ ಫಲಿತಾಂಶ ಸಾಕ್ಷಿಯಾಗಿದೆ ನಮ್ಮ ಅಭ್ಯರ್ಥಿಗಳ ಗೆಲುವಿಗೆ ಆಶೀರ್ವದಿಸಿರುವ ನಗರ ಜನತೆಗೆ ನಗರದ ಅಭಿವೃದ್ಧಿಯ ಮೂಲಕವೇ ಕೃತಜ್ಞತೆ ಸಲ್ಲಿಸುತ್ತೇನೆ**

**– ಕೆ,ಎಂ ಶಿವಲಿಂಗೇಗೌಡ, ಶಾಸಕ**

ಕಾಂಗ್ರೆಸ್ ಅಧ್ಯಕ್ಷರುಗಳಾದ ಬಾಣಾವರ ಶ್ರೀನಿವಾಸ್ ಮೆಟ್ರೋ ಬಾಬು ಮಾಜಿ ಅಧ್ಯಕ್ಷ ಗಂಜಿಗೆರೆ ಚಂದ್ರಶೇಖರ್,ನಗರ ಸಭೆ ಸದಸ್ಯ ವೆಂಕಟಮನಿ, ಕಾಂಗ್ರೆಸ್ ಮುಖಂಡರಾದ ವೆಂಕಟೇಶ್, ಸಂತೋಷ್ ಮಠ ವಿಭವ್ ಮತ್ತು ನಗರಸಭಾ ಸದಸ್ಯರುಗಳು ಹಾಗೂ ಇತರರು ಪಾಲ್ಗೊಂಡಿದ್ದರು


# ಎನ್.ವೆಂಕಟಾಪುರ ತಾಂಡಾಕ್ಕೆ 50ಲಕ್ಷ ಕಾಮಗಾರಿ ಮಂಜೂರು

• **ಉದಯವಾಹಿನಿ,ಚಿಂಚೋಳಿ**

ತಾಲ್ಲೂಕಿನ ಸೇಡಂ ವಿಧಾನಸಭಾ ಮತಕ್ಷೇತ್ರದ ಎನ್. ವೆಂಕಟಾಪುರ ತಾಂಡಾದ ಸೇವಾಲಾಲ್ ಸಮುದಾಯ ಭವನ 15ಲಕ್ಷ,ಜೆಜೆಎಂ ಕಾಮಗಾರಿ 25ಲಕ್ಷ,ಚರಂಡಿ ಸಿಸಿ ಬೇಡ್ ಹಾಕಲು 4ಲಕ್ಷ ಇಡಲಾಗಿದ್ದು ಈಗಾಗಲೇ ಕೆಲಸ ಪ್ರಾರಂಭವಾಗಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ ಹೇಳಿದರು.

ತಾಲ್ಲೂಕಿನ ಎನ್.ವೆಂಕಟಾಪುರ ತಾಂಡಾದಲ್ಲಿ ಹಮ್ಮಿಕೊಂಡ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು,ಈಗಾಗಲೇ ತಾಂಡಾದ ಸಮಗ್ರ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮಾಡಲಾಗಿದೆ ಇನ್ನೂ ಯಾವುದೇ ಕೆಲಸಗಳು ಮೂಲಭೂತ ಸೌಲಭ್ಯಗಳ ಸಮಸ್ಯೆಗಳು ಇದ್ದಲ್ಲಿ ಕೆಲಸಗಳ ಒಂದು ಪಟ್ಟಿ ಸಿದ್ಧಪಡಿಸಿ ಕೊಡಿ ಎಲ್ಲಾ ಕೆಲಸಗಳು ಮಾಡಲಾಗುವುದು ಎಂದರು.

ತಾಂಡಾದಲ್ಲಿ ಮಾಡಿರುವ ಜೆಜೆಎಂ ಯೋಜನೆಯಡಿ ಮಾಡಿರುವ ಕಾಮಗಾರಿಯನ್ನು ವೈದ್ಯಕೀಯ ಶಿಕ್ಷಣ ಸಚಿವರಾದ ಡಾ.ಶರಣಪ್ರಕಾಶ ಪಾಟೀಲರು ವಿಕ್ಷಿಸಿ ಗ್ರಾಮೀಣ ಪ್ರದೇಶ ಕುಡಿಯುವ ನೀರು ಸರಬರಾಜು ಇಲಾಖೆ ಎಇಇಗೆ ಪೋನಿನ ಮೂಲಕ ತರಾಟೆಗೆ ತೆಗೆದುಕೊಂಡ ಪ್ರಸಂಗ ನಡೆಯಿತು.


ಉದಯವಾಹಿನಿ ಚಿತ್ರ

ಯಾಕೆ ಜೆಜೆಎಂ ಕಾಮಗಾರಿ ಅರ್ಧಕ್ಕೆ ಮಾಡಿ ಬಿಟ್ಟಿದ್ದೀರಿ ತೆಗ್ಗುಗುಂಡಿಗಳು ಸಹ ಮುಚ್ಚಿಲ್ಲ ಯಾಕೆ ಕಾಮಗಾರಿ ಪೂರ್ಣಗೊಳಿಸಿಲ್ಲ ಎಂದು ತರಾಟೆಗೆ ತೆಗೆದುಕೊಂಡರು.

ಹಾಗೆಯೇ ಪಿಡಬ್ಲ್ಯೂಡಿ ಇಲಾಖೆ ಎಇಇಗೂ ಸಹ ಯಲ್ಲಮ್ಮಗೇಟ್ ದಿಂದ ನಿಡಗುಂದಾವರೆಗೂ ರಸ್ತೆ ಡಾಂಬರೀಕರಣ ರೀನಿವೇಷನ್ ಮಾಡಲು 03ಕೋಟಿ ಅನುದಾನ ಬಿಡುಗಡೆಯಾಗಿದೆ ಯಾಕೆ ಕೆಲಸ ಪ್ರಾರಂಭ ಮಾಡಿಲ್ಲ ಹಾಗೂ ಸುಲೇಪೇಟ್ ದಿಂದ ನಿಡಗುಂದಾವರೆಗೆ ರಸ್ತೆ ತೆಗ್ಗುಗುಂಡಿಗಳು ಮುಚ್ಚಿ ಯಾಕೆ ಮಾಡುತ್ತಿಲ್ಲಾವೆಂದು ರಸ್ತೆ ನಿಮಗೆ ಬರುತ್ತೆ ಶೀಘ್ರದಲ್ಲೇ ಮಾಡಿ ಮುಗಿಸಿ ಎಂದು ತರಾಟೆಗೆ ತೆಗೆದುಕೊಂಡು ತಾಕೀತು ಮಾಡಿದರು.

ಈ ಸಂದರ್ಭದಲ್ಲಿ ತಾಪಂ.ಮಾಜಿ ಸದಸ್ಯ ವೆಂಕಟರೆಡ್ಡಿ, ಲಕ್ಷ್ಮಣ ಆವುಂಟಿ, ಅರವಿಂದರೆಡ್ಡಿ, ಸುಬ್ಬಣ್ಣರೆಡ್ಡಿ, ರಾಜು ನಿಷ್ಠೆ, ಅನೇಕರಿದ್ದರು.

# ಖಾದಿ ಬಟ್ಟೆ ಖರೀದಿಸಿ ಉತ್ಪಾದಕರಿಗೆ ಪ್ರೋತ್ಸಾಹಿಸಲು ಕರೆ

• **ಉದಯವಾಹಿನಿ, ಯಾದಗಿರಿ**

ಯಾದಗಿರಿ ನಗರದ ಶುಭಂ ಪೆಟ್ರೋಲ್ ಬಂಕ್ ಹತ್ತಿರ, ತುನ್ನೂರ ಕಾಂಪೌಂಡ್, ಹೈದರಾಬಾದ್ ರಸ್ತೆ ಇಲ್ಲಿ 26-11-24 ರಿಂದ 10-12-24 ರವರೆಗೆ ಪ್ರತಿ ದಿನ ಬೆಳಿಗ್ಗೆ 10 ರಿಂದ ರಾತ್ರಿ 9 ರವರೆಗೆ ಆಯೋಜಿಸಲಾದ ರಾಜ್ಯ ಮಟ್ಟದ ಖಾದಿ ಮತ್ತು ಗ್ರಾಮೋದ್ಯೋಗ ವಸ್ತು ಪ್ರದರ್ಶನ, ಮಾರಾಟ ಮೇಳ ವನ್ನು ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಖಾತೆ ಸಚಿವರಾದ ಶ್ರೀ ಶರಣಬಸಪ್ಪ ದರ್ಶನಾಪುರ ಅವರು ಉದ್ಘಾಟಿಸಿದರು.

ಮಂಗಳವಾರ ಸಂವಿಧಾನದ ದಿನಾಚರಣೆ ಅಂಗವಾಗಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಹಾಗೂ ಸಂವಿಧಾನ ಶಿಲ್ಪಿ ಡಾ.ಬಿ.ಆರ್ ಅಂಬೇಡ್ಕರ್ ಅವರ


ಉದಯವಾಹಿನಿ ಚಿತ್ರ

**ವಸ್ತು ಪ್ರದರ್ಶನ ಮಾರಾಟ ಮೇಳ ಖಾದಿ ಉತ್ಸವ**

ಭಾವಚಿತ್ರಕ್ಕೆ ಪುಷ್ಪಾರ್ಪನೆ ಮಾಡಿ ಗೌರವ ಅರ್ಪಿಸಿದರು.ಇದೇ ಸಂದರ್ಭದಲ್ಲಿ ವಸ್ತು ಪ್ರದರ್ಶನ ಮಾರಾಟ ಮೇಳ ದೀಪ ಬೆಳಗಾವಿ ಉದ್ಘಾಟಿಸಿದರು. ಅದರಂತೆ ರಾಜ್ಯದ ವಿವಿಧ ಭಾಗಗಳಿಂದ ಬಂದಿರುವ ಗ್ರಾಮೋದ್ಯೋಗ ಸಂಘ ಸಂಸ್ಥೆಗಳಿಂದ ಸ್ಥಾಪಿಸಲಾದ ವಸ್ತು ಪ್ರದರ್ಶನ ಮಳಿಗೆ ಗಳನ್ನು ಉದ್ಘಾಟಿಸಿದರು. ಚರಖ ನೂಲುವ ಮೂಲಕ ಕುಶಲಕರ್ಮಿಗಳಿಗೆ ಪ್ರೋತ್ಸಾಹಿಸಿದರು.

**ಬಾಪೂಜಿ ಅವರು ಖಾದಿ ವಸ್ತುಗಳ ಬಳಕೆ ಮೂಲಕ ಸ್ವದೇಶಿ ಆಂದೋಲನದ ಮೂಲಕ ಭಾರತೀಯರನ್ನು ಪ್ರೋತ್ಸಾಹಿಸಿದ್ದರು. ಅವರ ಕನಸು ನನಸಾಗಿಸಲು ಖಾದಿ ವಸ್ತು ಬಳಸಿ,ಖರೀದಿಸಿ ಉತ್ಪಾದಕರಿಗೂ ಉತ್ತೇಜಿಸಬೇಕು**

**-ಶ್ರೀ ಚನ್ನಾರೆಡ್ಡಿ ಪಾಟೀಲ್ ತುನ್ನೂರ ಶಾಸಕ**

ಖಾದಿ ಬಟ್ಟೆ ತೊಡುವದರಿಂದ ಮನಸ್ಸು ಸಹ ಉಲ್ಲಾಸಭರಿತವಾಗುತ್ತದೆ.ನೋಡಲು ಸಹ ಆಕರ್ಷಕವಾಗಿರುವದರಿಂದ ಖಾದಿ ಪ್ರೀಯರು ಈ ಬಟ್ಟೆಗಳನ್ನು ಖರೀದಿಸಿ ಉತ್ಪಾದಕರಿಗೆ ಪ್ರೋತ್ಸಾಹಿಸಬೇಕು ಸಲಹೆ ನೀಡಿದರು. ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಸಿಇಓ ಶ್ರೀ ವಿ.ಕೆ. ವೆಂಕಟೇಶ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ,ಖಾದಿ ಕುಶಲ ಕರ್ಮಿಗಳಿಗೆ ಸರ್ಕಾರ ಹಲವು ರೀತಿಯಲ್ಲಿ ನೆರವಾಗುತ್ತಿದೆ. ರಾಜ್ಯದಲ್ಲಿ ವಾರ್ಷಿಕ 300 ಕೋ. ರೂಗಳ ಉತ್ಪಾದನೆ ಮತ್ತು ವ್ಯವಹಾರ ನಡೆಯುತ್ತಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಸಂವಿಧಾನ ದಿನಾಚರಣೆ ಅಂಗವಾಗಿ ಪ್ರಾಣೇಶ್ ಆಚಾರ್ಯ ಅವರು ಸಂವಿಧಾನದ ಪೀಠಿಕೆ ಓದಿದರು.

ಖಾದಿ, ಚರಖ ನೂಲು ಹಾಗೂ ನೇಯ್ಗೆ ಕುಶಲ ಕರ್ಮಿಗಳಾದ ಬಸಮ್ಮ ಅವರಿಗೆ ಸನ್ಮಾನಿಸಲಾಯಿತು.

ಜಿಲ್ಲಾಧಿಕಾರಿ ಡಾ.ಸುಶೀಲಾ. ಬಿ. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಲವೀಶ ಒರಡಿಯಾ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ್, ಸಹಾಯಕ ಆಯುಕ್ತರು ಹಂಪಣ್ಣ ಸಜ್ಜನ್, ಕೈಗಾರಿಕೆ ಕೇಂದ್ರ ಜಂಟಿ ನಿರ್ದೇಶಕರು ಬಿ.ಸತೀಶ್ ಕುಮಾರ್, ತಹಶೀಲ್ದಾರ ಸುರೇಶ್, ರಾಯಚೂರು ಖಾದಿ ಗ್ರಾಮೋದ್ಯೋಗ ಮಂಡಳಿ ಮಾಜಿ ಸದಸ್ಯರು ಮಲ್ಲಿಕಾರ್ಜುನ ನಾಗಪ್ಪ, ಜಿಲ್ಲಾ ಖಾದಿ ಗ್ರಾಮೋದ್ಯೋಗ ಅಧಿಕಾರಿ ಮನೀಶ ಸಿ.ಹೆಚ್, ಸಾವಿತ್ರಿ ದಳವಾಯಿ, ಉಪಸ್ಥಿತರಿದ್ದರು.ರಾಯಣ್ಣ ಅವರು ಕಾರ್ಯಕ್ರಮ ನಿರ್ವಹಿಸಿದರು.

# ಶಾಸಕರ ನಿವಾಸಕ್ಕೆ ಮುತ್ತಿಗೆ ಹಾಕದಿರಲು ಮುನ್ನೆಚ್ಚರಿಕೆ ಕ್ರಮ

• **ಉದಯವಾಹಿನಿ, ಮುದ್ದೇಬಿಹಾಳ**

ದಲಿತ ಸಂಘಟನೆಗಳ ನೂರಾರು ಸದಸ್ಯರು ಶಾಸಕ, ಕರ್ನಾ ಟಕ ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷ ಸಿ.ಎಸ್.ನಾಡಗೌಡರ ಇಲ್ಲಿನ ಹುಡ್ಕೋ ನಿವಾಸಕ್ಕೆ ಮುತ್ತಿಗೆ ಹಾಕುವುದನ್ನು ತಡೆಯಲು ಮುನ್ನೆಚ್ಚರಿಕೆ ಕ್ರಮವಾಗಿ ಪೊಲೀಸರು ದಲಿತ ಮುಖಂಡರನ್ನು ಕೆಲ ಸಮಯ ವಶಕ್ಕೆ ಪಡೆದಿದ್ದರು ನ್ಯಾ.ಸದಾಶಿವ ಆಯೋಗದ ವರದಿ ಅನುಸಾರ, ಸುಪ್ರಿಂ ಕೋರ್ಟ ತೀರ್ಮಾನದಂತೆ ರಾಜ್ಯ ಸರ್ಕಾರ ಒಳ ಮೀಸಲಾತಿ ಅನುಷ್ಠಾನಗೊಳಿಸುವಂತೆ ಆಗ್ರಹಿಸಿ ದಲಿತ ಸಂಘಟನೆಗಳು ನ.22 ರಿಂದ ಬಾಗಲಕೋಟ ಜಿಲ್ಲೆಯ ಕೂಡಲಸಂಗಮ ಕ್ರಾಸನ ರಾಷ್ಟ್ರೀಯ ಹೆದ್ದಾರಿಯಿಂದ ಮುದ್ದೇಬಿಹಾಳದವರೆಗೆ ಪಾದಯಾತ್ರೆ ನಡೆಸಿದ್ದರು. ನಿನ್ನೆ ಭಾನುವಾರ ರಾತ್ರಿ, ಪಾದಯಾತ್ರೆ ಮುದ್ದೇಬಿಹಾಳ ಪ್ರವೇಶಿಸಿತ್ತು.

ಮಂಗಳವಾರ ಶಾಸಕರ ನಿವಾಸಕ್ಕೆ ಮುತ್ತಿಗೆ ಹಾಕಲು ಸಿದ್ಧತೆ ನಡೆದಿದ್ದವು. ಇದನ್ನರಿತ ಪೊಲೀಸರು ಪ್ರವಾಸಿ ಮಂದಿರದಲ್ಲಿದ್ದ ಮುಖಂಡರಾದ ಬಸವರಾಜ ಪೂಜಾರಿ, ಶೇಖರ ಆಲೂರ, ಆನಂದ ಮುದೂರ ಇನ್ನಿತರರನ್ನು ವಶಕ್ಕೆ ಪಡೆದು ಠಾಣೆಗೆ ಕರೆತಂದು ಶಾಸಕರ ನಿವಾಸಕ್ಕೆ ಮುತ್ತಿಗೆ ಹಾಕದಂತೆ ಸೂಚಿಸಿದರು.

ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಿಂದ 150 ಕ್ಕೂ ಹೆಚ್ಚು ಪೊಲೀಸರು ಬಂದೋಬಸ್ತಗೆ ಆಗಮಿಸಿದ್ದು ಹೋರಾಟದ ಗಂಭೀರತೆ ಎತ್ತಿ ತೋರಿಸುವಂತಿತ್ತು. ಇತ್ತ ಅಂಬೇಡ್ಕರ್ ವೃತ್ತದಲ್ಲಿ ಸೇರಿರುವ ದಲಿತ ಸಂಘಟನೆಗಳ ನೂರಾರು ಸದಸ್ಯರು ತಮ್ಮ ನಾಯಕರ ಬರುವಿಕೆಗಾಗಿ ಕಾಯತೊಡಗಿದ್ದರು ಠಾಣೆಯ ಎದುರೇ ಮಾಧ್ಯಮದವರೊಂದಿಗೆ ಮಾತನಾಡಿದ ಬಸವರಾಜ ಪೂಜಾರಿ ಅವರು ಪೊಲೀಸ್ ಬಲ ಬಳಸಿ ಶಾಸಕರು ನಮ್ಮ ಹೋರಾಟ ಹತ್ತಿಕ್ಕಲು ಯತ್ನಿಸಿದ್ದಾರೆ. ಹೋರಾಟ ಹತ್ತಿಕ್ಕಿದಷ್ಟು ಹುಮ್ಮಸ್ಸು ನಮಗೆ ಹೆಚ್ಚಾಗುತ್ತದೆ. ಪೊಲೀಸರು ನಮ್ಮನ್ನ ತಡೆಯಬಹುದು ಆದರೆ ಹೋರಾಟ ಹತ್ತಿಕ್ಕುವುದು ಸಾಧ್ಯವಿಲ್ಲ ಎಂದು ಆಕ್ರೋಶ ಹೊರಹಾಕಿದರು.


ಉದಯವಾಹಿನಿ ಚಿತ್ರ

**ದಲಿತ ಮುಖಂಡರನ್ನು ವಶಕ್ಕೆ ಪಡೆದ ಪೊಲೀಸರು**

### ತಹಶೀಲ್ದಾರ್‌ಗೆ ಮನವಿ

**ಇತ್ತ ಹುಡ್ಕೋದಲ್ಲಿರುವ ಶಾಸಕರ ನಿವಾಸಕ್ಕೆ ಪೊಲೀಸ್ ಭದ್ರತೆ ಒದಗಿಸಲಾಗಿದೆ. ಹೆಚ್ಚುವರಿ ಎಸ್ಪಿ ಶಂಕರ ಮಾರಿಹಾಳ, ಬಸವನ ಬಾಗೇವಾಡಿ ಡಿವಿಸ್ಪಿ ಬಲ್ಲಪ್ಪ ನಂದಗಾಂವಿ ಇಲ್ಲಿಗೆ ಆಗಮಿಸಿ ಪರಿಸ್ಥಿತಿ ಅವಲೋಕಿಸಿ ಹಲವು ಸುತ್ತಿನ ಮಾತುಕತೆಯ ನಂತರ ಹುಡ್ಕೋದ ಹೇಮರಡ್ಡಿ ಮಲ್ಲಮ್ಮ ವೃತ್ತದವರೆಗೆ ಮಾತ್ರ ಪಾದಯಾತ್ರೆ ತೆರಳಿ ಅಲ್ಲಿಯೇ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಲು ಪೊಲೀಸರು ಅವಕಾಶ ಮಾಡಿ ಕೊಟ್ಟರು. ವೃತ್ತದಿಂದ ಮುಂದೆ ಅಂದಾಜು 300-400 ಮೀಟರ್ ಅಂತರದಲ್ಲಿರುವ ಶಾಸಕರ ನಿವಾಸಕ್ಕೆ ಹೋಗಲು ಬ್ಯಾರಿಕೇಡ್ ಹಾಕಿ ತಡೆ ಒಡ್ಡಲಾಗಿತ್ತು**

# ಬಗರ್ ಹುಕುಂ ಮಾರ್ಗಸೂಚಿ ಪರಿಷ್ಕರಿಸಿ: ಬಿ.ಶಿವರಾಂ

• **ಉದಯವಾಹಿನಿ, ಹಾಸನ**



ಬಗರ್ ಹುಕುಂ ಸಮಿತಿ ಮುಂದೆ ಬಾಕಿ ಇರುವ ಅಕ್ರಮ ಸಕ್ರಮ ಅರ್ಜಿಗಳ ಶೀಘ್ರ ವಿಲೇವಾರಿ ಹಾಗೂ ರೈತರಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ನೂತನವಾಗಿ ಜಾರಿ ಮಾಡಿರುವ ನಿಯಮಗಳನ್ನು ಪರಿಷ್ಕರಣೆ ಮಾಡಬೇಕು ಎಂದು ಮಾಜಿ ಸಚಿವ, ಕಾಂಗ್ರೆಸ್ ಮುಖಂಡ ಬಿ.ಶಿವರಾಂ ಒತ್ತಾಯಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಭೂ ಮಂಜೂರಾತಿಗೆ ನಮೂನೆ 50, 53, 57ರ ಮೂಲಕ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದೆ. ಅದರಂತೆ ರಾಜ್ಯದಲ್ಲಿ ಇದುವರೆಗೆ ಸುಮಾರು 14 ಲಕ್ಷ ಅರ್ಜಿಗಳ ವಿಲೇವಾರಿ ಬಾಕಿ ಇದೆ ಎಂದರು. 2023 ಡಿಸೆಂಬರ್ 1 ರಂದು ಕಂದಾಯ ಇಲಾಖೆಯಿಂದ ಹೊರಡಿಸಿರುವ ಗೊಂದಲದ ಸುತ್ತೋಲೆಯೇ ಸಾವಿರಾರು ಆರ್ಜಿಗಳ ವಿಲೇವಾರಿ ವಿಳಂಬಕ್ಕೆ ಕಾರಣವಾಗಿದೆ. ಇದರ ಅನ್ವಯ ಜಿಲ್ಲಾಧಿಕಾರಿ ಹಾಗೂ ಉಪ ವಿಭಾಗಾಧಿಕಾರಿಗಳಿಗೆ ಇರುವ ಅಧಿಕಾರಗಳನ್ನು ಮೊಟಕುಗೊಳಿಸಲಾಗಿದೆ. ನಮೂನೆ 50ಹಾಗೂ 53 ರಲ್ಲಿ ಅರ್ಜಿ ಸಲ್ಲಿಸಿದವರು, 57ರ ಅಡಿ ಅರ್ಜಿ ಸಲ್ಲಿಸಲು ಬರುವುದಿಲ್ಲ.

ಇದರಿಂದ ರೈತರಿಗೆ ಅನ್ಯಾಯ ಆಗುತ್ತಿದೆ ಎಂದು ಆರೋಪಿಸಿದರು. ವಿಲೇವಾರಿ ಆಗದ ಅರ್ಜಿಗಳು ತಿರಸ್ಕೃತಗೊಂಡ ಸಂದರ್ಭದಲ್ಲಿ ಮೇಲ್ಮನವಿ ಸಲ್ಲಿಸಲು ರೈತರು ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ ಬದಲಿಗೆ ಕೆಎಟಿ ಮತ್ತು ಹೈಕೋರ್ಟ್ ಅಲೆಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು. ಭೂ ಕಂದಾಯ ಅಧಿನಿಯಮ 108 ಸಿಸಿಯಂತೆ, ಯಾವುದೇ ನೋಟಿಸ್ ಅಥವಾ ತಿಳುವಳಿಕೆ ಮಾಹಿತಿ ಕೊಡದೇ ಅಧಿಕಾರಿಗಳ ಹಂತದಲ್ಲಿ ನಮೂನೆ 53 ಮತ್ತು 57 ರಲ್ಲಿ ಸಲ್ಲಿಸಿದ ಅರ್ಜಿಗಳನ್ನು ವಜಾ ಮಾಡಬಹುದು. ಹಾಗಾಗಿ ಈ ಕಾನೂನಿಗೆ ಅಮೂಲಾಗ್ರ ಬದಲಾವಣೆ ತರಬೇಕಾಗಿದೆ. ಬೆಳಗಾವಿ ಅಧಿವೇಶನದಲ್ಲಿ ರಾಜ್ಯದ ಶಾಸಕರು ಈ ಕುರಿತು ಗಮನಹರಿಸಬೇಕು ಎಂದು ಒತ್ತಾಯಿಸಿದರು.

ಈ ನಿಟ್ಟಿನಲ್ಲಿ ಕಂದಾಯ ಇಲಾಖೆ ಹಾಗೂ ಮುಖ್ಯಮಂತ್ರಿ ಗಮನಹರಿಸಬೇಕು ಎಂದು ಆಗ್ರಹಿಸಿದರು. ರೈತರ ಹಿತ ಕಾಪಾಡಿ. ಬಿ.ಶಿವರಾಂ ಮಾಜಿ ಸಚಿವಬೆಳಗಾವಿ ಅಧಿವೇಶನಕ್ಕೂ ಮುನ್ನ ಬಗರ್ ಹುಕುಂ ನಿಯಮಾವಳಿ ಪರಿಷ್ಕರಣೆ ಮಾಡಬೇಕು.

ಇಲ್ಲವಾದರೆ ಬೇಲೂರಿನಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು. 549 ಅರ್ಜಿ ಮಾತ್ರ ಅರ್ಹ ಹೊಸದಾಗಿ ತಂದಿರುವ ಸುತ್ತೋಲೆಯಂತೆ ಒಮ್ಮೆ ಮಂಜೂರಾದವರಿಗೆ ಮತ್ತೊಮ್ಮೆ ಮಂಜೂರಾತಿ ದೊರೆಯುತ್ತಿಲ್ಲ. ಅನುಭವದಲ್ಲಿ ಇರದಿರುವುದು ಹೆಚ್ಚುವರಿ ಭೂಮಿ ಹೊಂದುವುದು ಸಾಕಷ್ಟು ಗೋಮಾಳ ಇಲ್ಲ ಎಂಬ ಕಾರಣ ನೀಡಿ ಸಾವಿರಾರು ಅರ್ಜಿಗಳನ್ನು ಬೇಲೂರು ತಾಲ್ಲೂಕಿನಲ್ಲಿಯೇ ವಜಾ ಮಾಡಲಾಗಿದೆ ಎಂದು ಬಿ. ಶಿವರಾಂ ಆರೋಪಿಸಿದರು.

ಈ ಹಿಂದೆ ಸಮಿತಿ ಮುಂದೆ ಬರುತ್ತಿದ್ದ ಅರ್ಜಿಗಳ ಪೈಕಿ ಶೇ 90 ರಷ್ಟು ಮಂಜೂರಾತಿ ದೊರೆಯುತ್ತಿತ್ತು. ಆದರೆ ಇತ್ತೀಚಿನ ಮಾನದಂಡಗಳಿಂದಾಗಿ ಶೇ 10ರಷ್ಟು ಪ್ರಗತಿ ಕಾಣುತ್ತಿಲ್ಲ. ಬೇಲೂರು ತಾಲ್ಲೂಕಿನಲ್ಲಿಯೇ ನಮೂನೆ 53ರಡಿ 4115 ಅರ್ಜಿಗಳು ಸಲ್ಲಿಕೆಯಾಗಿವೆ. ನಮೂನೆ 57ರಲ್ಲಿ 14229 ಸೇರಿದಂತೆ ಒಟ್ಟು 18344 ಅರ್ಜಿಗಳು ಸಲ್ಲಿಕೆಯಾಗಿದ್ದು ಈ ಪೈಕಿ ಕೇವಲ 549 ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗಿದೆ ಎಂದು ಹೇಳಿದರು.

### ರೈತರಿಗೆ ಅನ್ಯಾಯ

**ಸಾವಿರಾರು ರೈತರ ಸಮಸ್ಯೆಗಳ ಬಗ್ಗೆ ಸ್ಥಳೀಯ ಶಾಸಕರು, ರಾಜ್ಯದ ಎಲ್ಲಾ ಜನಪ್ರತಿನಿಧಿಗಳು ಮಾತನಾಡಬೇಕಾಗಿದೆ. ಈ ಹೊಸ ನಿಯಮದಿಂದ ರೈತರಿಗೆ ಅನ್ಯಾಯವಾಗುತ್ತಿದೆ ಎಂದರು. ಕಾಫಿ ಬೆಳೆಗಾರರಿಗೆ ಗುತ್ತಿಗೆ ಆಧಾರದಲ್ಲಿ ಭೂಮಿ ನೀಡಲು ಸರ್ಕಾರ ಅರ್ಜಿ ಆಹ್ವಾನಿಸಿದೆ.ಅದರಂತೆಯೇ ಅಕ್ರಮ-ಸಕ್ರಮದಡಿ ರೈತರು ಗುತ್ತಿಗೆ ಪಡೆಯಲು ಸರ್ಕಾರ ಅರ್ಜಿ ಆಹ್ವಾನಿಸಬಹುದು.**

**ಇತ್ತೀಚಿಗೆ ಕಂದಾಯ ಇಲಾಖೆಯ ಅಧಿಕಾರಿಗಳ ಸಭೆ ನಡೆಸಿರುವ ಕಂದಾಯ ಸಚಿವ ಕೃಷ್ಣ ಬೈರೇಗೌಡ, ಶೀಘ್ರ ಬಗರ್ ಹುಕುಂ ಅಕ್ರಮ-ಸಕ್ರಮ ಅರ್ಜಿಗಳನ್ನು ವಿಲೇವಾರಿ ಮಾಡಬೇಕು. ಹೆಚ್ಚು ಅರ್ಜಿಗಳ ವಿಲೇವಾರಿ ಮಾಡಿದ ಅಧಿಕಾರಿಗಳನ್ನು ಸನ್ಮಾನಿಸಲಾಗುವುದು, ಆದರೆ ರೈತರಿಗೆ ನ್ಯಾಯ ದೊರೆಯುವ ನಿಟ್ಟಿನಲ್ಲಿ ಹೊಸ ಸುತ್ತೋಲೆ ತೊಡಕುಂಟು ಮಾಡಿದ್ದು, ಈ ಬಗ್ಗೆ ಕಂದಾಯ ಸಚಿವರು ಗಮನ ಹರಿಸಬೇಕು**

**-ಬಿ. ಶಿವರಾಂ, ಕಾಂಗ್ರೆಸ್ ಮುಖಂಡ**

# ಜಗತ್ತಿನಲ್ಲಿ ಶ್ರೇಷ್ಟವಾದ ಸಂವಿಧಾನ ಭಾರತ ದೇಶದ ಸಂವಿಧಾನ

## ಸಂವಿಧಾನ ಭಾರತದೇಶದ ಜನರು ಜೀವನದ ಆಧಾರ ಸ್ತಂಭ, ಬಹು ದೊಡ್ಡ ಸಂವಿಧಾನವನ್ನು ಡಾ. ಅಂಬೇಡ್ಕರ್ ಭಾರತ ದೇಶಕ್ಕೆ ನೀಡಿದ್ದಾರೆ

• **ಉದಯವಾಹಿನಿ, ಸಿಂಧನೂರು**

ಇಡೀ ಪ್ರಪಂಚದಲ್ಲಿ ಶ್ರೇಷ್ಠವಾದ ಸಂವಿಧಾನ ಎಂದರೆ ಅದು ಭಾರತದೇಶದ ಸಂವಿಧಾನ ಎಂದರೆ ತಪ್ಪಾಗಲಾರದು ಎಂದು ತಾಲ್ಲೂಕು ತಹಶೀಲ್ದಾರ್ ಅರುಣ್ ಕುಮಾರ್ ಹೆಚ್ ದೇಸಾಯಿ ಅವರು ಹೇಳಿದರು.

ನಗರದ ತಾಲ್ಲೂಕು ಕಛೇರಿಯಲ್ಲಿ ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಡಿಪಾಯ ಹಾಕಿದ ದಿನ ಸಂವಿಧಾನದ ಅಂಗೀಕಾರ ದಿನವನ್ನು ಆಚರಿಸಲಾಯಿತು. 1949 ನವೆಂಬರ್ 26ರಂದು ಅಂದೂ ಲೋಕಸಭೆ ಮತ್ತು ರಾಜ್ಯಸಭೆ ಅಂಗೀಕರಿಸಿದ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು. ಸರ್ಕಾರವು ಸಂವಿಧಾನದ


ಉದಯವಾಹಿನಿ ಚಿತ್ರ

**ಸಂವಿಧಾನದ ಮೂಲಕ ದೇಶವೇ ನಡೆಯುತ್ತಿದೆ**

ಪೀಠಿಕೆಯನ್ನು ಕಡ್ಡಾಯವಾಗಿ ಓದುವುದರ ಮೂಲಕ ಸಂವಿಧಾನದ ಬಗ್ಗೆ ಎಲ್ಲರಿಗೂ ಜಾಗ್ರತೆ ಮೂಡಿಸುವ ನಿಟ್ಟಿನಲ್ಲಿ ಮತ್ತು ನಾವೆಲ್ಲರೂ ಸಂವಿಧಾನದ ಪ್ರಕಾರ ನಡೆದುಕೊಳ್ಳೋಣವೆಂದು ಹೇಳಿದರು. ಸಂವಿಧಾನ ಭಾರತದೇಶದ ಜನರು ಜೀವ ನದ ಆಧಾರ ಸ್ತಂಭ. ಇಡೀ ಸಮಾಜವನ್ನು ಯಾವ ರೀತಿಯ ಒಳ್ಳೆಯ ದಾರಿಯ ಮೂಲಕ ಮುಂದಕ್ಕೆ ತೆಗೆದು ಕೊಂಡು ಹೋಗಬೇಕು ಎನ್ನುವುದೇ ಸಂವಿಧಾನದ ಅಡಿಪಾಯವಾಗಿದೆ ಎಂದು ಭೀಮರಾಯಪ್ಪ ವಕೀ ಲರು ಮಾತನಾಡಿದರು.

ಈ ಸಂದರ್ಭದಲ್ಲಿ ಎಮ್ ದೊಡ್ಡ ಬಸವರಾಜ ಅಧ್ಯಕ್ಷರು ಪಿಕಾರ್ಡ್ ಬ್ಯಾಂಕ್ ಸಿಂಧನೂರು. ಬಸವರಾಜ ನಾಡ ಗೌಡ ಜೆಡಿಎಸ್ ಪಕ್ಷದ ತಾಲ್ಲೂಕು ಅಧ್ಯಕ್ಷರು. ಹನುಮಂತಪ್ಪ ಗೋಮರ್ಷಿ ಹನುಮಂತಪ್ಪ ವಕೀಲರು ಬೂದಿಹಾಳ ನರಸಪ್ಪ ಕಟ್ಟಿಮನೆ ಖಾಜಾ ಮಲ್ಲಿಕಾ ವಕೀಲರು. ಶರಣ ಬಸವ ಮಲ್ಲಾಪೂರ.ವಿರೇಶ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ವಿಜಯ್ ಬಿಸಿಎಂ ಇಲಾಖೆ ಅಧಿಕಾರಿ ಲಿಂಗಪ್ಪ ಅಂಗಡಿ ಮತ್ತು ತಾಲ್ಲೂಕು ಕಛೇರಿ ಸಿಬ್ಬಂದಿ ವರ್ಗ ಸೇರಿದಂತೆ ಇತರರು ಉಪಸ್ಥಿತರಿದ್ದರು.

**ಇಡೀ ದೇಶವನ್ನು ಮುನ್ನಡೆಸುವ ಹಿನ್ನೆಲೆಯಲ್ಲಿ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ರಚಿಸಿದ ಸಂವಿಧಾನ ಅನ್ನೋ ಬಹುದೊಡ್ಡ ಕೊಡುಗೆ ಭಾರತ ದೇಶಕ್ಕೆ ನೀಡಿದ್ದಾರೆ. ಸುಮಾರು 75 ವರ್ಷ ಕಳೆದರೂ ಮಹಾ ಗ್ರಂಥ ಸಂವಿಧಾನದ ಮೂಲಕ ದೇಶವೇ ನಡೆಯುತ್ತಿದೆ. ಎಂದರೆ ಅದಕ್ಕೆ ಕಾರಣ ಡಾ.ಬಿ. ಆರ್. ಅಂಬೇಡ್ಕರ್ ಅದಕ್ಕೆ ಅವರನ್ನು ಸಂವಿಧಾನದ ಶಿಲ್ಪ ಎಂದು ಕರೆಯುತ್ತಾರೆ**

**– ಅರುಣ್ ಕುಮಾರ್ ಹೆಚ್. ದೇಸಾಯಿ ತಹಶೀಲ್ದಾರ್**

**ಭಾರತ ದೇಶವನ್ನು ಯಾವ ರೀತಿ ಮುನ್ನಡೆಸಿಕೊಂಡು ಹೋಗಲು ಸಾಧ್ಯವಿಲ್ಲದಾಗ. ನಮ್ಮ ದೇಶಕ್ಕೆ ಒಂದು ಕಾನೂನು ಬೇಕು ಎಂಬ ಹಿನ್ನೆಲೆಯಲ್ಲಿ ಅಂದಿನ ಸರಕಾರ ಡಾ. ಅಂಬೇಡ್ಕರ್ ಅವರ ಹೆಗಲ ಮೇಲೆ ದೊಡ್ಡ ಜವಾಬ್ದಾರಿಯನ್ನು ನೀಡಿತ್ತು. ಆಗ ಜಗತ್ತಿನ ಎಲ್ಲಾ ಸಂವಿಧಾನವನ್ನು ಅಧ್ಯಯನ ಮಾಡಿ ಭಾರತ ದೇಶಕ್ಕೆ ಒಂದು ಸ್ವಾತಂತ್ರ ಸಂವಿಧಾನವನ್ನು ರಚಿಸಿದರು. ಇದರೊಳಗೆ ಜಾತ್ಯತೀತ ಆರ್ಥಿಕ ಸಾಮಾಜಿಕ ರಾಜಕೀಯ ಜಾತಿ ಧರ್ಮ ಭಾಷೆ ಸಂಸ್ಕೃತಿಯನ್ನು ಹೊಂದಿರುವ ಬಹು ದೊಡ್ಡ ಸಂವಿಧಾನವನ್ನು ಡಾ ಬಾಬು ಸಾಹೇಬ್ ಅಂಬೇಡ್ಕರ್ ಭಾರತ ದೇಶಕ್ಕೆ ನೀಡಿದ್ದಾರೆ**

**– ಬಸವರಾಜ ನಾಡಗೌಡ, ಅಧ್ಯಕ್ಷ**

ಉದಯವಾಹಿನಿ

ಪ್ರಾದೇಶಿಕ

ಬುಧವಾರ 27 ನವೆಂಬರ್ 2024



## ಮಿನಿ ನ್ಯೂಸ್

### ಜಿಲ್ಲಾ ಪಂಚಾಯಿತಿಯಲ್ಲಿ ಸಂವಿಧಾನ ದಿನ ಆಚರಣೆ




ಉದಯವಾಹಿನಿ ಚಿತ್ರ

• **ಉದಯವಾಹಿನಿ, ಚಿತ್ರದುರ್ಗ**

ಚಿತ್ರದುರ್ಗ ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಮಂಗಳವಾರ ಸಂವಿಧಾನ ದಿನ ಆಚರಿಸಲಾಯಿತು. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಜೆ.ಸೋಮಶೇಖರ್ ಅವರು ಜಿಲ್ಲಾ ಪಂಚಾಯಿತಿಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಸಂವಿಧಾನ ಪ್ರತಿಜ್ಞಾವಿಧಿ ಬೋಧಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯಿತಿ ಯೋಜನಾ ನಿರ್ದೇಶಕಿ ಸಿ.ಎನ್.ಗಾಯತ್ರಿ, ಮುಖ್ಯ ಲೆಕ್ಕಾಧಿಕಾರಿ ಮಧು, ಸಹಾಯಕ ಕಾರ್ಯದರ್ಶಿ ರವಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಕಾರ್ಯಪಾಲಕ ಅಭಿಯಂತರ ಬಸನಗೌಡ ಪಾಟೀಲ್ ಮತ್ತು ಜಿಲ್ಲಾಮಟ್ಟದ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ ಸಿಬ್ಬಂದಿ ಇದ್ದರು.

### ಪದವಿಪೂರ್ವ ಕಾಲೇಜೀನಲ್ಲಿ ಸಂವಿಧಾನ ಸಮರ್ಪಣಾ ದಿನಾಚರಣೆ


ಉದಯವಾಹಿನಿ ಚಿತ್ರ

• **ಉದಯವಾಹಿನಿ,ಚಿಂಚೋಳಿ**

ಪಟ್ಟಣದ ಸರ್ಕಾರಿ ಪದವಿಪೂರ್ವ ಮಹಾವಿದ್ಯಾಲಯದಲ್ಲಿ ತಾಲ್ಲೂಕಾ ಕಾನೂನು ಸೇವಾ ಸಮಿತಿ, ತಾಲ್ಲೂಕಾ ನ್ಯಾಯಾವಾದಿಗಳ ಸಂಘ, ತಾಲ್ಲೂಕಾಡಳಿತ, ಶಿಕ್ಷಣ ಇಲಾಖೆ, ಶಿಶು ಅಭಿವೃದ್ಧಿ ಇಲಾಖೆ, ತಾಲ್ಲೂಕಾ ಪಂಚಾಯತ್ ಇಲಾಖೆ, ಪುರಸಭೆ, ಸಮಾಜ ಕಲ್ಯಾಣ ಇಲಾಖೆ, ಪೋಲಿಸ್ ಇಲಾಖೆ, ಆರೋಗ್ಯ ಇಲಾಖೆ, ಅರಣ್ಯ ಇಲಾಖೆರವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡ ಸಂವಿಧಾನ ಸಮರ್ಪಣಾ ದಿನಾಚರಣೆ ಕಾರ್ಯಕ್ರಮವನ್ನು ಹಿರಿಯ ಶ್ರೇಣಿ ನ್ಯಾಯಾಧೀಶರು, ತಾಲ್ಲೂಕಾ ಕಾನೂನು ಸೇವಾ ಸಮಿತಿ ಅಧ್ಯಕ್ಷ ಜ್ಯೋತಿ ಶಾಂತಪ್ಪ ಕಾಳೆಯವರು ಜ್ಯೋತಿ ಬೆಳಗಿಸುವುದರ ಮೂಲಕ ಚಾಲನೆ ನೀಡಿದರು. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಕಾನೂನು ಸೇವಾ ಸಮಿತಿ ಸದಸ್ಯ ಕಾರ್ಯದರ್ಶಿಗಳು ದತ್ತುಕುಮಾರ ಜವಳಕರ್, ಘನ ಉಪಸ್ಥಿತರಿದ್ದರು.

### ಪತಿಯ ಸಾವಿನ ಸುದ್ದಿ ಕೇಳಿ ಕುಸಿದು ಬಿದ್ದು ಪತ್ನಿ ಸಾವು

• **ಉದಯವಾಹಿನಿ, ದಾವಣಗೆರೆ**

ಪತಿಯ ಸಾವಿನ ಸುದ್ದಿ ಕೇಳಿ ಕುಸಿದು ಬಿದ್ದು ಪತ್ನಿಯೂ ಸಾವನ್ನಪ್ಪಿರುವುದು ಚನ್ನಗಿರಿ ತಾಲ್ಲೂಕಿನ ದೇವರಹಳ್ಳಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಕಸ್ತೂರಿ ರಂಗಪ್ಪ (65) ಜಯಮ್ಮ (58) ಸಾವನ್ನಪ್ಪಿದ ದಂಪತಿ. ಪಡಿತರ ಅಕ್ಕಿ ತರಲು ನ್ಯಾಯಬೆಲೆ ಅಂಗಡಿಗೆ ಕಸ್ತೂರಿ ರಂಗಪ್ಪ ಹೋಗಿದ್ದರು. ಈ ವೇಳೆ ಅವರು ಕುಸಿದು ಬಿದಿದ್ದಾರೆ. ಅವರನ್ನು ಆಸ್ಪತ್ರೆಗೆ ಸಾಗಿಸುವ ಮಾರ್ಗದಲ್ಲಿ ಸಾವನ್ನಪ್ಪಿದ್ದಾರೆ.

ಕಸ್ತೂರಿ ರಂಗಪ್ಪ ಸಾವನ್ನಪ್ಪಿದ ವಿಚಾರವನ್ನು ಫೋನ್ ಮೂಲಕ ಪತ್ನಿ ಜಯಮ್ಮನಿಗೆ ಕುಟುಂಬಸ್ಥರು ತಿಳಿಸಿದ್ದಾರೆ. ಈ ವಿಚಾರ ಕೇಳಿದ ಕೂಡಲೇ ಅವರು ಸಹ ಕುಸಿದು ಬಿದ್ದು ಸಾವನ್ನಪ್ಪಿದ್ದಾರೆ. ಇಬ್ಬರ ಅಂತ್ಯಕ್ರಿಯೆಗೆ ಕುಟುಂಬಸ್ಥರು ಸಿದ್ಧತೆ ನಡೆಸಿದ್ದಾರೆ.

### ವಿಜಯಪುರ ಮಹಾನಗರ ಪಾಲಿಕೆ ಉಪ ಚುನಾವಣೆ: ಬಿಜೆಪಿಗೆ ಜಯ

• **ಉದಯವಾಹಿನಿ, ವಿಜಯಪುರ**

ವಿಜಯಪುರ ಮಹಾನಗರ ಪಾಲಿಕೆಯ ವಾರ್ಡ್ ನಂ.29ಕ್ಕೆ ನಡೆದ ಉಪ ಚುನಾವಣೆಯ ಮತ ಎಣಿಕೆ ಕಾರ್ಯ ಪೂರ್ಣ ಗೊಂಡಿದ್ದು, ಭಾರತೀಯ ಜನತಾ ಪಾರ್ಟಿಯ ಗಿರೀಶ ಬಿರಾದಾರ ಅವರು 2754 ಮತಗಳನ್ನು ಪಡೆಯುವ ಮೂಲಕ ಆಯ್ಕೆಯಾಗಿದ್ದಾರೆ. ವಾರ್ಡ್ ನಂ.29ಕ್ಕೆ ನಡೆದ ಉಪ ಚುನಾವಣೆಗೆ ಕಾಂಗ್ರೆಸ್ ನಿಂದ ಸ್ಪರ್ಧಿಸಿದ್ದ ಭಾಗಪ್ಪ ಏಳಗಂಟಿ 1762 ಮತಗಳನ್ನು ಪಡೆದಿದ್ದಾರೆ. 38 ನೋಟಾ ಮತಗಳು ಚಲಾವಣೆಯಾಗಿವೆ ಎಂದು ಚುನಾವಣಾಧಿಕಾರಿ ತಿಳಿಸಿದ್ದಾರೆ.

ಕಳೆದ ಶನಿವಾರ ನಡೆದ ಉಪ ಚುನಾವಣೆಯಲ್ಲಿ ಶೇ. 46.18 ರಷ್ಟು ಮತದಾನವಾಗಿತ್ತು. ವಾರ್ಡ್ ನಂ.29ರ ಸದಸ್ಯರಾಗಿದ್ದ ಬಿಜೆಪಿಯ ವಿಜಯಕುಮಾರ ಬಿರಾದಾರ ಅವರ ಅಕಾಲಿಕ ನಿಧನದಿಂದ ತೆರವಾಗಿದ್ದ ಕಾರಣಕ್ಕೆ ಉಪಚುನಾವಣೆ ನಡೆದಿತ್ತು. ಒಟ್ಟು 35 ಸದಸ್ಯ ಸ್ಥಾನ ಹೊಂದಿರುವ ಪಾಲಿಕೆಯಲ್ಲಿ ಸದ್ಯ ಬಿಜೆಪಿ 17, ಕಾಂಗ್ರೆಸ್ 10, ಎಐಎಂಐಎಂ 2, ಜೆಡಿಎಸ್ 1 ಹಾಗೂ ಪಕ್ಷೇತರ 5 ಸ್ಥಾನ ಹೊಂದಿವೆ. ಸದ್ಯ ಕಾಂಗ್ರೆಸ್ ಅಧಿಕಾರದಲ್ಲಿ ಇದೆ. ಜನವರಿಯಲ್ಲಿ ಹಾಲಿ ಮೇಯರ್, ಉಪ ಮೇಯರ್ ಅವಧಿ ಮುಗಿಯಲ್ಲಿದ್ದು, ಮುಂದಿನ ಅವಧಿಗೆ ಪಾಲಿಕೆ ಗದ್ದುಗೆ ಹಿಡಿಲು ಬಿಜೆಪಿ, ಕಾಂಗ್ರೆಸ್ ನಡುವೆ ಕಸರತ್ತು ನಡೆದಿದೆ.


### ಬ್ಯಾಡಗಿ ಮೆಣಸಿನಕಾಯಿ ಆವಕದಲ್ಲಿ ತುಸು ಹೆಚ್ಚಳ: ಬೆಲೆಯಲ್ಲಿ ಸ್ಥಿರತೆ

• **ಉದಯವಾಹಿನಿ, ಬ್ಯಾಡಗಿ**

ಅಂತರಾಷ್ಟ್ರೀಯ ಮೆಣಸಿನಕಾಯಿ ಮಾರುಕಟ್ಟೆಗೆ 30,213 ಚೀಲ 7,553 ಕ್ವಿಂಟಲ್ ಮೆಣಸಿಕಾಯಿ ಅಂತರಾಷ್ಟ್ರೀಯ ಮೆಣಸಿನಕಾಯಿ ಮಾರುಕಟ್ಟೆಗೆ 30,213 (7,553 ) ಮಾರಾಟಕ್ಕೆ ತರಲಾಗಿದ್ದು, ಆವಕದಲ್ಲಿ ತುಸು ಹೆಚ್ಚಳ ಕಂಡು ಬಂದಿದೆ. ಆದರೆ ಬೆಲೆಯಲ್ಲಿ ಸ್ಥಿರತೆ ಕಾಯ್ದುಕೊಂಡಿದೆ. ಕಳೆದ ಗುರುವಾರ ಮಾರುಕಟ್ಟೆಗೆ 27,486 ಚೀಲ (6,871 ಕ್ವಿಂಟಲ್) ಆವಕವಾಗಿತ್ತು. ಸೋಮವಾರ ಮಾರುಕಟ್ಟೆಗೆ ಒಟ್ಟು 4,070 ಲಾಟ್ ಮೆಣಸಿನಕಾಯಿ ಚೀಲಗಳನ್ನು ಟೆಂಡರ್‌ಗೆ ಇಡಲಾಗಿದ್ದು, ಈ ಪೈಕಿ ತೇವಾಂಶ ಹೆಚ್ಚಿರುವ ಹಾಗೂ ಗುಣಮಟ್ಟದ ಕೊರತೆ ಇರುವ 474 ಲಾಟ್‌ಗಳಿಗೆ ವರ್ತಕರು ಟೆಂಡರ್ ನಮೂದಿಸಿಲ್ಲ. 6 ಚೀಲ ಡಬ್ಬಿ ಮೆಣಸಿನಕಾಯಿ 28,009ರಂತೆ, 21 ಚೀಲ ಕಡ್ಡಿ ಮೆಣಸಿನಕಾಯಿ 27,400 ರಂತೆ ಮತ್ತು ಗುಂಟೂರು ತಳಿ ಮೆಣಸಿನಕಾಯಿ 16,909 ರಂತೆ ಗರಿಷ್ಠ ಬೆಲೆಯಲ್ಲಿ ಮಾರಾಟವಾಗಿವೆ. ಸರಾಸರಿ ಬೆಲೆಯಲ್ಲಿ ಬ್ಯಾಡಗಿ ಡಬ್ಬಿ 23,669, ಬ್ಯಾಡಗಿ ಕಡ್ಡಿ 22,817 ಹಾಗೂ ಗುಂಟೂರ ತಳಿ 13,009 ರಂತೆ ಮಾರಾಟವಾಗಿವೆ. ಇಂದಿನ ಟೆಂಡರ್ ಪ್ರಕ್ರಿಯೆಯಲ್ಲಿ ಒಟ್ಟು 221 ಖರೀದಿ ವರ್ತಕರು ಪಾಲ್ಗೊಂಡಿದ್ದರು ಎಂದು ಎಪಿಎಂಸಿ ಮೂಲಗಳು ತಿಳಿಸಿವೆ.

# ಸಿಂಗಾಪುರ ವಿಮಾನದಲ್ಲಿ ನಾಲ್ವರು ಮಹಿಳೆಯರಿಗೆ ಲೈಂಗಿಕ ಕಿರುಕುಳ

## ಅಮೆರಿಕದಿಂದ ಸಿಂಗಾಪುರಕ್ಕೆ ಪ್ರಯಾಣಿಸುವಾಗ ಮಹಿಳೆಯರಿಗೆ ಲೈಂಗಿಕ ಕಿರುಕುಳ ಕೊಟ್ಟ ಆರೋಪ



**ಭಾರತ ಮೂಲದ ವ್ಯಕ್ತಿ ವಿರುದ್ಧ ಕೇಸ್**

**ಸಿಂಗಾಪುರ:** ಭಾರತ ಮೂಲದ 73 ವರ್ಷದ ವ್ಯಕ್ತಿಯೊಬ್ಬರ ವಿರುದ್ಧ ನಾಲ್ಕು ಮಹಿಳೆರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪಗಳು ಕೇಳಿಬಂದಿದ್ದು ಆ ವ್ಯಕ್ತಿಯನ್ನು ಸಿಂಗಾಪುರ ನ್ಯಾಯಾಲಯದಲ್ಲಿ ವಿಚಾರಣೆಗೊಳಪಡಿಸಲಾಗಿದೆ. ಆ ವ್ಯಕ್ತಿಯನ್ನು ಬಾಲಸುಬ್ರಹ್ಮಣ್ಯನ್ ರಮೇಶ್ ಎಂದು ಗುರುತಿಸಲಾಗಿದೆ. ಇವರು ಅಮೆರಿಕದಿಂದ ಸಿಂಗಾಪುರ ವಿಮಾನದಲ್ಲಿ ಪ್ರಯಾಣಿಸುವಾಗ ನಾಲ್ವರು ಮಹಿಳೆಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಹೊರಿಸಲಾಗಿದೆ.

ಈತನು ಮೊದಲಿಗೆ ಓರ್ವ ಮಹಿಳೆಯ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದ, ಆನಂತರ ಇತರ ಮೂವರು ಮಹಿಳೆಯರಿಗೂ ಲೈಂಗಿಕ ದೌರ್ಜನ್ಯ ನಡೆಸಿದ್ದ. ಹಾಗಾಗಿ, ಆತನನ್ನು ಸಿಂಗಾ ಪುರದ ಜಿಲ್ಲಾ ನ್ಯಾಯಾಲಯದಲ್ಲಿ ವಿಚಾರಣೆಗೊಳಪಡಿಸಲಾಗಿದೆ ಎಂದು ಹೇಳಲಾಗಿದೆ. ಅವರ ಮೇಲೆ ಸಿಂಗಾಪುರದ ಸ್ಥಳೀಯ ಕಾನೂನಿನನ್ವಯ ಎಂಟು ಆರೋಪಗಳನ್ನು ಹೊರಿಸಲಾಗಿದೆ. ಈತನಿಂದ ಕಿರುಕುಳಕ್ಕೊಳಗಾದ ಮಹಿಳೆಯರು, ಸಹ ಪ್ರಯಾಣಿಕರಾಗಿದ್ದರೋ ಅಥವಾ ಅವರು ವಿಮಾನ ಸಿಬ್ಬಂದಿಯೇ ಎಂಬುದು ಗೊತ್ತಾಗಿಲ್ಲ. ಸಿಂಗಾಪುರ ಕಾನೂನಿನ ಪ್ರಕಾರ, ಲೈಂಗಿಕ ದೌರ್ಜನ್ಯಕ್ಕೊಳಗಾದ ಮಹಿಳೆಯರ ವಿಚಾರಗಳನ್ನು ಹೊರಗೆಡುವುವಂತಿಲ್ಲ. ಹಾಗಾಗಿ, ಅವರ ಹೆಸರುಗಳನ್ನು ಗೌಪ್ಯವಾಗಿರಿಸಲಾಗಿದೆ.

**ಅಮೆರಿಕದ ಸಿಂಗಾಪುರಕ್ಕೆ ಪ್ರಯಾಣಿಸುತ್ತಿದ್ದ ವಿಮಾನದಲ್ಲಿ ನಾಲ್ವರು ಮಹಿಳೆಯರಿಗೆ ಲೈಂಗಿಕ ಕಿರುಕುಳ ಕೊಟ್ಟ ಆರೋಪದ ಮೇರೆಗೆ ಭಾರತ ಮೂಲದ ಬಾಲಸುಬ್ರಹ್ಮಣ್ಯನ್ ರಮೇಶ್ ಎಂಬುವರ ವಿರುದ್ಧ ಸಿಂಗಾಪುರದ ನ್ಯಾಯಾಲಯದಲ್ಲಿ ಕೇಸ್ ದಾಖಲಿಸಲಾಗಿದೆ. ನ. 18ರಂದು ಅಮೆರಿಕದ ಪ್ರಯಾಣಿಸುವಾಗ ಈ ಘಟನೆ ನಡೆದಿದೆ ಎಂದು ಹೇಳಲಾಗಿದೆ. ಸಿಂಗಾಪುರದ ಕಾನೂನಿನ ಪ್ರಕಾರ, ಮಹಿಳೆಯರು ಸಹಪ್ರಯಾಣಿಕರೋ ಅಥವಾ ವಿಮಾನ ಸೇನಾ ಸಿಬ್ಬಂದಿಯೋ ಎಂಬುದನ್ನು ಬಹಿರಂಗಪಡಿಸಲಾಗಿಲ್ಲ.**

### ಸೋಲಿನೊಂದಿಗೆ ಗುಕೇಶ್ ಅಭಿಯಾನ ಆರಂಭ

**ಪಂದ್ಯದ ಮಧ್ಯದಲ್ಲಿಅನಗತ್ಯ ಅಡಚಣೆ ಎದುರಿಸಿದ ಭಾರತದ ಗ್ರ್ಯಾಂಡ್ ಮಾಸ್ಟರ್ ಡಿ. ಗುಕೇಶ್ ಸೋಮವಾರ ಇಲ್ಲಿಆರಂಭವಾದ ವಿಶ್ವ ಚೆಸ್ ಚಾಂಪಿಯನ್‌ಷಿಪ್ ಫೈನಲ್‌ನ ಮೊದಲ ಸುತ್ತಿನಲ್ಲಿಕಳೆದ ಬಾರಿಯ ಚಾಂಪಿಯನ್ ಚೀನಾದ ಡಿಂಗ್ ಲಿರೆನ್ ವಿರುದ್ಧ ಪರಾಭವಗೊಂಡರು.**

ವಿಶ್ವ ಚಾಂಪಿಯನ್‌ಷಿಪ್ ಕಿರೀಟಕ್ಕೆ ಸ್ಪರ್ಧಿಸಿರುವ ಅತ್ಯಂತ ಕಿರಿಯ ಆಟಗಾರ ಎನಿಸಿರುವ 18 ವರ್ಷದ ಗುಕೇಶ್, ಪಂದ್ಯದ ಆರಂಭದಲ್ಲಿ ಅಚ್ಚರಿ ನಡೆಯ ಮೂಲಕ ಗಮನ ಸೆಳೆದರು. ಭಾರತೀಯ ಆಟಗಾರನ ನಡೆಯು ಆಕ್ರಮಣಕಾರಿ ಉದ್ದೇಶದ ಸಂಕೇತವಾಗಿತ್ತು. ಈ ವೇಳೆ ಎಚ್ಚರಿಕೆಯ ಆಟವಾಡಿದ ಚೀನಾದ ಆಟಗಾರ ಫ್ರೆಂಚ್ ರಕ್ಷಣಾ ಆಟಕ್ಕೆ ಒತ್ತು ನೀಡಿದರು. 2001ರಲ್ಲಿ ಸ್ಪೇನ್‌ನ ಅಲೆಕ್ಸಿ ಶಿರೋವ್ ವಿರುದ್ಧ ಗೆದ್ದು ಮೊದಲ ವಿಶ್ವ ಚಾಂಪಿಯನ್‌ಷಿಪ್ ಕಿರೀಟ ಗೆದ್ದ ಭಾರತದ ದಿಗ್ಗಜ ವಿಶ್ವನಾಥನ್ ಆನಂದ್ ಅವರ ಹಾದಿಯಲ್ಲಿಸಾಗಲು ಗುಕೇಶ್ ಯತ್ನಿಸಿದರು.

12ನೇ ನಡೆಯ ವೇಳೆ ಗುಕೇಶ್ ಪಂದ್ಯದ ಮೇಲೆ ಹಿಡಿತ ಸಾಧಿಸಿದ್ದರು. ಆದರೆ ನಂತರದ ಆಟದಲ್ಲಿ ಚೀನಾ ಆಟಗಾರ ಕೌಶಲ್ಯಯುತ ಆಟದೊಂದಿಗೆ ಸಂಪೂರ್ಣ ಮೇಲುಗೈ ಸಾಧಿಸಿದರು. ಅಂತಿಮವಾಗಿ 42ನೇ ನಡೆಯಲ್ಲಿಲಿರೆನ್ ಗೆಲುವಿನ ನಗೆ ಬೀರಿದರು. 14 ಸುತ್ತುಗಳ ಫೈನಲ್ ಹಣಾಹಣಿಯಲ್ಲಿಭಾರತೀಯ ಆಟಗಾರ ಪುಟಿದೇಳುವ ನಿರೀಕ್ಷೆಯಲ್ಲಿದ್ದಾರೆ.

# ಮಹಿಳೆಯರು, ಹುಡುಗಿಯರ ವಿಶ್ವಸಂಸ್ಥೆಯ ಶಾಕಿಂಗ್ ವರದಿ



**ವಿಶ್ವಸಂಸ್ಥೆ:** ಮಹಿಳೆಯರಿಗೆ ಅವರ ಮನೆಯೇ ಮಾರಣಾಂತಿಕವಾಗಿ ಪರಿಣಮಿಸಿದೆ. ಕಳೆದ ವರ್ಷ ದಿನಕ್ಕೆ ಸರಾಸರಿ 140 ಮಹಿಳೆಯರು, ಹುಡುಗಿಯರು ನಿಕಟ ಸಂಗಾತಿ, ಕುಟುಂಬದ ಸದಸ್ಯರಿಂದ ಕೊಲ್ಲಲ್ಪಟ್ಟಿದ್ದಾರೆ ಎಂದು ಎರಡು ವಿಶ್ವಸಂಸ್ಥೆ ಏಜೆನ್ಸಿಗಳು ವರದಿ ಮಾಡಿವೆ. ಜಾಗತಿಕವಾಗಿ, 2023 ರಲ್ಲಿ ಸುಮಾರು 51,100 ಮಹಿಳೆಯರು ಮತ್ತು ಹುಡುಗಿಯರ ಸಾವಿಗೆ ನಿಕಟ ಪಾಲುದಾರ ಅಥವಾ ಕುಟುಂಬದ ಸದಸ್ಯರು ಕಾರಣರಾಗಿದ್ದಾರೆ, ಇದು 2022 ರಲ್ಲಿ ಅಂದಾಜು 48,800 ಬಲಿಪಶುಗಳಿಂದ ಹೆಚ್ಚಾಗಿದೆ ಎಂದು ಯುಎನ್ ಮಹಿಳೆಯರು, ಡ್ರಗ್ಸ್ ಮತ್ತು ಕ್ರೈಮ್ ಕಚೇರಿ ತಿಳಿಸಿದೆ. ಆದರೆ ಎರಡು ಏಜೆನ್ಸಿಗಳು ಎಲ್ಲೆಡೆ ಮಹಿಳೆ ಯರು ಮತ್ತು ಹುಡುಗಿಯರು ಈ ತೀವ್ರ ಸ್ವರೂಪದ ಲಿಂಗ-ಆಧಾರಿತ ಹಿಂಸಾಚಾರದಿಂದ ಪ್ರಭಾವಿತರಾಗುತ್ತಿದ್ದಾರೆ ಮತ್ತು ಯಾವುದೇ ಪ್ರದೇಶವನ್ನು ಹೊರತುಪಡಿಸಲಾಗಿಲ್ಲ ಎಂದು ಒತ್ತಿ ಹೇಳಿದರು. ಮತ್ತು ಅವರು ಹೇಳಿದರು, ಮಹಿಳೆಯರು ಮತ್ತು ಹುಡುಗಿಯರಿಗೆ ಮನೆ ಅತ್ಯಂತ ಅಪಾಯಕಾರಿ ಸ್ಥಳವಾಗಿದೆ ಎಂದು. ಯುಎನ್ ಮಹಿಳಾ ಉಪ ಕಾರ್ಯನಿರ್ವಾಹಕ ನಿರ್ದೇಶಕಿ ನ್ಯಾರಡ್ಜಾಯಿ ಗುಂಬೊನ್ಯಾಂಡಾ ಅವರು ಸುದ್ದಿಗೋಷ್ಟಿಯಲ್ಲಿ ವರದಿಯನ್ನು ಬಿಡುಗಡೆ ಮಾಡಿದರು, ದೀರ್ಘಕಾಲದವರೆಗೆ ಮಹಿಳೆಯರು ತಮ ಪ್ರೀತಿಪಾತ್ರರಿಂದ ಕೊಲ್ಲಲ್ಪಟ್ಟಿದ್ದಾರೆ ಮತ್ತು ಪ್ರವೃತ್ತಿಯು ಮುಂದುವರಿಯುತ್ತಿದೆ ಏಕೆಂದರೆ ಆಧಾರವಾಗಿರುವ ಸಮಸ್ಯೆಗಳನ್ನು ವಿಶೇಷವಾಗಿ ಲಿಂಗ ಸ್ಟೀರಿಯೊಟೈಪಿಂಗ್ ಮತ್ತು ಸಾಮಾಜಿಕ ರೂಢಿಗಳನ್ನು ತಿಳಿಸಲಾಗಿಲ್ಲ ಎಂದಿದ್ದಾರೆ.

ಇದು ಮಹಿಳೆಯರ ಮೇಲಿನ ಅಧಿಕಾರಕ್ಕೆ ಸಂಬಂಧಿಸಿದ ಕೊಲೆಯಾಗಿದೆ ಎಂದು ಅವರು ಹೇಳಿದರು ಮತ್ತು ಮಹಿಳೆಯರ ವಿರುದ್ಧದ ಹಿಂಸಾತಕ ದಾಳಿಗಳಿಗೆ ನಿರಂತರ ನಿರ್ಭಯದಿಂದಾಗಿ ಇದು ಮುಂದುವರಿಯುತ್ತಿದೆ.

ಜಿಂಬಾಬ್ವೆಯ ಮತ್ತು ಮಹಿಳಾ ಹಕ್ಕುಗಳ ದೀರ್ಘಕಾಲದ ವಕೀಲರಾದ ಗುಂಬೊನ್ಯಾಂಡಾ, ಪಾಲುದಾರರು ಅಥವಾ ಕುಟುಂಬದ ಸದಸ್ಯರಿಂದ ಮಹಿಳೆಯರನ್ನು ಕೊಲ್ಲುವ ವಿಷಯಕ್ಕೆ ಬಂದಾಗ ಅನೇಕ ಅಪರಾಧಿ ಅನಾಮಧೇಯತೆ ಇದೆ ಏಕೆಂದರೆ ಇದರರ್ಥ ಕುಟುಂಬ ಸದಸ್ಯರು ಇನ್ನೊಬ್ಬ ಕುಟುಂಬದ ಸದಸ್ಯರ ವಿರುದ್ಧ ನ್ಯಾಯವನ್ನು ತರಬೇಕು .ಯುಎನ್ ವುಮೆನ್ ಆರ್ಥಿಕ ಮತ್ತು ರಾಜಕೀಯ ಶಕ್ತಿ ಹೊಂದಿರುವವರಿಗೆ ಮತ್ತು ವಿವಿಧ ಸಂಪ್ರದಾಯಗಳ ನಾಯಕರಿಗೆ ಹಿಂಸೆಯನ್ನು ಶಾಶ್ವತಗೊಳಿಸಲು ತಮ ಶಕ್ತಿಯನ್ನು ಬಳಸದಂತೆ ಪ್ರಚಾರ ಮಾಡುತ್ತಿದೆ.

### ಹೆಚ್ಚಿನ ಕೊಲೆಗಳಲ್ಲ

**ಮಹಿಳೆಯರ ವಿರುದ್ಧದ ಹಿಂಸಾಚಾರ ನಿರ್ಮೂಲನೆಗಾಗಿ ಅಂತರಾಷ್ಟ್ರೀಯ ದಿನದಂದು ಬಿಡುಗಡೆಯಾದ ವರದಿಯು ಈ ಹೆಚ್ಚಳವು ಹೆಚ್ಚಾಗಿ ದೇಶಗಳಿಂದ ಲಭ್ಯವಿರುವ ಹೆಚ್ಚಿನ ಡೇಟಾದ ಪರಿಣಾಮವಾಗಿದೆ ಮತ್ತು ಹೆಚ್ಚಿನ ಕೊಲೆಗಳಲ್ಲ ಎಂದು ಹೇಳಿದೆ.**

# ಮೂರು ಪೂರಿ ಒಟ್ಟಿಗೆ ತಿನ್ನಲು ಹೋಗಿ ಗಂಟಲಿಗೆ ಸಿಕ್ಕಿಕೊಂಡು 11ರ ಬಾಲಕ ಸಾವು



**ಹೈದರಾಬಾದ್:** 11 ವರ್ಷದ ಬಾಲಕ ಪೂರಿ ತಿಂದು ಸಾವನ್ನಪ್ಪಿರುವ ಘಟನೆ ತೆಲಂಗಾಣದ ಸಿಕಂದರಾಬಾದ್‌ನ ಶಾಲೆಯೊಂದರಲ್ಲಿ ನಡೆದಿದೆ. ಮೃತ ಬಾಲಕನನ್ನು 6ನೇ ತರಗತಿಯ ವಿಕಾಸ್ ಜೈನ್ ಎಂದು ಗುರುತಿಸಲಾಗಿದೆ. ಸಿಕಂದರಾಬಾದ್‌ನ ತಿವೋಲಿ ಥಿಯೇಟರ್ ಬಳಿ ಇರುವ ಶಾಲೆಯಲ್ಲಿ ವಿಕಾಸ್ ಜೈನ್ 6ನೇ ತರಗತಿಯಲ್ಲಿ ಓದುತ್ತಿದ್ದ. ಮನೆಯಿಂದ ತಂದ ಪೂರಿಯನ್ನು ಮಧ್ಯಾಹ್ನ ಊಟದ ಸಮಯದಲ್ಲಿ ತಿನ್ನುವಾಗ ಈ ಘಟನೆ ಸಂಭವಿಸಿದೆ. ಶಾಲೆಯಲ್ಲಿ ಮಧ್ಯಾಹ್ನ ಊಟದ ವೇಳೆ ಮೂರು ಪೂರಿ ಒಟ್ಟಿಗೆ ತಿಂದ ಪರಿಣಾಮ ಬಾಲಕನಿಗೆ ಉಸಿರುಗಟ್ಟಿ ನೆಲಕ್ಕೆ ಕುಸಿದಿದ್ದಾನೆ. ಎಷ್ಟೇ ಎಚ್ಚರಗೊಳಿಸಿದರೂ ಪ್ರಜ್ಞೆ ಬರದ ಕಾರಣ ಆತನನ್ನು ಕೂಡಲೇ ಹತ್ತಿರದ ಆಸ್ಪತ್ರೆಗೆ ದಾಖಲಿಸಲಾಯಿತು. ಬಳಿಕ ವೈದ್ಯರು ತಪಾಸಣೆ ಮಾಡಿ ಸಾವನ್ನಪ್ಪಿರುವುದಾಗಿ ಧೃಡಪಡಿಸಿದ್ದಾರೆ.

ಶಾಲಾ ಆಡಳಿತ ಮಂಡಳಿ ಬಾಲಕನ ಪೋಷಕರಿಗೆ ಕರೆ ಮಾಡಿ ನಿಮ್ಮ ಮಗ ಊಟದ ಸಮಯದಲ್ಲಿ ಒಟ್ಟಿಗೆ ಮೂರು ಪೂರಿ ತಿಂದ ಪರಿಣಾಮ ಉಸಿರುಗಟ್ಟಿ ಸಾವನ್ನಪ್ಪಿದ್ದಾನೆ ಎಂದು ತಿಳಿಸಿದ್ದಾರೆ. ಸದ್ಯ ಪೊಲೀಸರು ಮೃತ ಬಾಲಕನ ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ರವಾನಿಸಿದ್ದು, ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಇಲ್ಲಿಯವರೆಗೂ ಆಂಧ್ರಪ್ರದೇಶದಲ್ಲಿ ಈ ರೀತಿಯ ಮೂರು ಘಟನೆಗಳು ವರದಿಯಾಗಿವೆ. ಕಳೆದ ತಿಂಗಳು ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯಲ್ಲಿ ವ್ಯಕ್ತಿಯೊಬ್ಬ ದೋಸೆ ತಿಂದು ಉಸಿರುಗಟ್ಟಿಸಿ ಸಾವನ್ನಪ್ಪಿದ್ದ. ವೆಂಕಟಯ್ಯ (43) ಅವರು ಸ್ಥಳೀಯ ಉಪಾಹಾರ ಗೃಹದಲ್ಲಿ ದೋಸೆ ತಿನ್ನುತ್ತಿದ್ದಾಗ ಅವರ ಗಂಟಲಿಗೆ ಆಹಾರ ಸಿಕ್ಕಿಹಾಕಿಕೊಂಡ ಪರಿಣಾಮ ಉಸಿರುಗಟ್ಟಿ ಸಾವನ್ನಪ್ಪಿದ್ದಾರೆ.

**ಜೂನ್‌ನಲ್ಲಿ ಹೈದರಾಬಾದ್‌ನಲ್ಲಿ 7 ವರ್ಷದ ವ್ಯಕ್ತಿಯೊಬ್ಬರು ಕೋಳಿಯ ಮೂಳೆಯ ತುಂಡು ಗಂಟಲಿಗೆ ಸಿಲುಕಿ ಉಸಿರುಗಟ್ಟಿ ಸಾವನ್ನಪ್ಪಿದ್ದರು. ಜನವರಿಯಲ್ಲಿ ಮಹಬೂಬ್‌ನಗರ ಜಿಲ್ಲೆಯಲ್ಲಿ ನಡೆದ ಇದೇ ರೀತಿಯ ಘಟನೆಯಲ್ಲಿ, ಊಟ ಮಾಡುವಾಗ ಕೋಳಿಯ ಮೂಳೆಯ ತುಂಡು ಗಂಟಲಿಗೆ ಸಿಲುಕಿ ಯುವಕನೊಬ್ಬ ಪ್ರಾಣ ಕಳೆದುಕೊಂಡಿದ್ದ**

# ಮಹಾರಾಷ್ಟ್ರ ಸಿಎಂ ಸ್ಥಾನಕ್ಕೆ ಏಕನಾಥ್ ಶಿಂಧೆ ರಾಜೀನಾಮೆ



**ಮುಂಬೈ:** ಮಹಾರಾಷ್ಟ್ರ ವಿಧಾನಸಭೆಯ ಅವಧಿ ಇಂದಿಗೆ ಮುಕ್ತಾಯಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಏಕನಾಥ್ ಶಿಂಧೆ ರಾಜ್ಯಪಾಲರನ್ನು ಭೇಟಿಯಾಗಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಮುಂಬೈನಲ್ಲಿರುವ ರಾಜಭವನಕ್ಕೆ ತೆರಳಿದ ಏಕ್‌ನಾಥ್ ಶಿಂಧೆ ಅವರು ತಮ ಸ್ಥಾನಕ್ಕೆ ರಾಜೀನಾಮೆಯನ್ನು ನೀಡಿದ್ದು, ಈ ವೇಳೆ ಡಿಸಿಎಂಗಳಾದ ದೇವೇಂದ್ರ ಫಡ್ನವೀಸ್ ಹಾಗೂ ಅಜಿತ್ ಪವಾರ್ ಮತ್ತಿರರು ಹಾಜರಿದ್ದರು. ರಾಜ್ಯಪಾಲರು ಏಕ್‌ನಾಥ್ ಶಿಂಧೆ ಅವರ ರಾಜೀನಾಮೆಯನು ಅಂಗೀಕಾರ ಮಾಡಿದ್ದಾರೆ. ಸದ್ಯ ಅವರನ್ನು ಮುಂದಿನ ಸರ್ಕಾರ ರಚನೆಯಾಗುವವರೆಗೂ ಹಂಗಾಮಿ ಸಿಎಂ ಆಗಿ ಮುಂದುವರೆಯಲು ಸೂಚಿಸಲಾಗಿದೆ. 2022ರಲ್ಲಿ ಬಿಜೆಪಿ, ಶಿವಸೇನೆ (ಏಕನಾಥ್ ಶಿಂಧೆ ಬಣ), ಎನ್‌ಸಿಪಿ (ಅಜಿತ್ ಪವಾರ್ ಬಣ) ಸೇರಿರುವ ಮಹಾಯತಿ ಮೈತ್ರಿಕೂಟದ ಸರ್ಕಾರ ರಚನೆಯಾಗಿತ್ತು. ಆಗ ಏಕನಾಥ್ ಶಿಂಧೆ ಮುಖ್ಯಮಂತ್ರಿಯಾಗಿದ್ದರು.

ಎರಡೂವರೆ ವರ್ಷಗಳ ಕಾಲ ಮುಖ್ಯಮಂತ್ರಿಯಾಗಿದ್ದ ಏಕನಾಥ್ ಶಿಂಧೆ ಮತ್ತೆ ಮುಖ್ಯಮಂತ್ರಿ ಆಗಲಿ ಎಂದು ಅವರ ಬೆಂಬಲಿಗರು, ಅಭಿಮಾನಿಗಳು ದೇವರ ಮೊರೆ ಹೋಗಿದ್ದು, ರಾಜ್ಯಾದ್ಯಂತ ಮಂಗಳವಾರ ಏಕನಾಥ್ ಶಿಂಧೆ ಪರವಾಗಿ ದೇವಾಲಯಗಳಲ್ಲಿ ವಿಶೇಷ ಪೂಜೆಗಳನ್ನು ಸಲ್ಲಿಸಿದ್ದಾರೆ.2022ರಲ್ಲಿ ಬಿಜೆಪಿ ನೇತೃತ್ವದಲ್ಲಿ ಮಹಾಯುತಿ ಮೈತ್ರಿಕೂಟದ ಸರ್ಕಾರ ರಚನೆಗೊಂಡಿತು. ಬಿಜೆಪಿ ಮುಖ್ಯಮಂತ್ರಿ ಹುದ್ದೆಯನ್ನು ಏಕನಾಥ್ ಶಿಂಧೆಗೆ ಬಿಟ್ಟುಕೊಟ್ಟಿತ್ತು. ಬಿಜೆಪಿ ನಾಯಕ ದೇವೇಂದ್ರ ಫಡ್ನವೀಸ್, ಎನ್‌ಸಿಪಿ ನಾಯಕ ಅಜಿತ್ ಪವಾರ್ ಉಪ ಮುಖ್ಯಮಂತ್ರಿಯಾಗಿದ್ದರು.

ಈ ಬಾರಿಯ ಚುನಾವಣೆಯಲ್ಲಿ ಮುಖ್ಯಮಂತ್ರಿ ಏಕನಾಥ್ ಶಿಂಧೆ ಕೊಪ್ರಿ-ಪಂಚಖಾಡಿ ವಿಧಾನ ಸಭಾ ಕ್ಷೇತ್ರದ ಅಭ್ಯರ್ಥಿಯಾಗಿದ್ದರು. 1,59,060 ಮತಗಳನ್ನು ಪಡೆದು, 1,20,717 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ.

ಎದುರಾಳಿಯಾಗಿದ್ದ ಶಿವಸೇನೆ (ಉದ್ಧವ್ ಠಾಕ್ರೆ ಬಣ)ಯ ಕೇದಾರ್ ದಿಘೆ 38,343 ಮತಗಳನ್ನು ಪಡೆದು ಸೋತಿದ್ದಾರೆ. ಕಾಂಗ್ರೆಸ್ ಟಿಕೆಟ್ ಕೈತಪ್ಪಿದ್ದ ಮನೋಜ್ ಶಿಂಧೆ ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದರು. ಆದರೆ ಅವರು ಕೇವಲ 1,653 ಮತ ಪಡೆದು ಸೋಲು ಕಂಡರು. 2024ರ ವಿಧಾನಸಭೆ ಚುನಾವಣೆಯಲ್ಲಿ ಮುಖ್ಯಮಂತ್ರಿ ಅಭ್ಯರ್ಥಿ ಘೋಷಣೆ ಮಾಡದೇ ಮಹಾಯುತಿ ಮೈತ್ರಿಕೂಟ ಚುನಾವಣೆ ಎದುರಿಸಿತ್ತು. ಮೈತ್ರಿಕೂಟದಲ್ಲಿ ಹೆಚ್ಚು ಸೀಟು ಗೆದ್ದ ಪಕ್ಷಕ್ಕೆ ಮುಖ್ಯಮಂತ್ರಿ ಹುದ್ದೆ ಎಂಬ ತೀರ್ಮಾನವಾಗಿತ್ತು. ಚುನಾವಣೆಯಲ್ಲಿ ಬಿಜೆಪಿ 132 ಸೀಟುಗಳಲ್ಲಿ ಗೆದ್ದಿದ್ದು, ಮುಖ್ಯಮಂತ್ರಿ ಹುದ್ದೆ ಈ ಬಾರಿ ಬಿಜೆಪಿ ಪಾಲಾಗುವುದು ಖಚಿತವಾಗಿದೆ. ಈಗಾಗಲೇ ಹೊಸದಾಗಿ ಆಯ್ಕೆಯಾದ ಶಾಸಕರ ಜೊತೆ ಶಿವಸೇನೆ, ಎನ್‌ಸಿಪಿ ಸಭೆಯನ್ನು ನಡೆಸಿದೆ.

ಮಹಾಯುತಿ ಸರ್ಕಾರ ರಚನೆ ಬಗ್ಗೆ ಮಾತುಕತೆ ನಡೆಸಿದೆ. ಆದರೆ ಪ್ರಮುಖ ಪಕ್ಷವಾದ ಬಿಜೆಪಿ ಮುಖ್ಯಮಂತ್ರಿ ಹುದ್ದೆಯ ಕುತೂಹಲವನ್ನು ಇನ್ನೂ ಸಹ ಹಾಗೆಯೇ ಉಳಿಸಿದೆ. ದೇವೇಂದ್ರ ಫಡ್ನವೀಸ್ ಮತ್ತೊಮ ರಾಜ್ಯದ ಮುಖ್ಯಮಂತ್ರಿಯಾಗಲಿದ್ದಾರೆ ಎಂಬ ಸುದ್ದಿ ಹಬ್ಬಿದೆ. ಆದರೆ ಅಧಿಕೃತವಾಗಿ ಘೋಷಣೆಯಾಗಿಲ್ಲ. ರಾಜ್ಯದಲ್ಲಿ ಸರ್ಕಾರ ರಚನೆಯ ಪ್ರಕ್ರಿಯೆ ಆರಂಭಗೊಂಡಿದೆ. ಚುನಾವಣೆಯಲ್ಲಿ ಬಿಜೆಪಿ 132 ಸೀಟುಗಳಲ್ಲಿ ಗೆದ್ದು ಅತಿ ದೊಡ್ಡ ಪಕ್ಷವಾಗಿದೆ. ಸರ್ಕಾರ ರಚನೆ ಮಾಡಲು ಬೇಕಾದ ಮ್ಯಾಜಿಕ್ ನಂಬರ್ 145. ಬಿಜೆಪಿ ಮಹಾಯುತಿ ಮೈತ್ರಿಕೂಟದ ನೆರವಿನಿಂದ ಮತ್ತೊಮ ಸರ್ಕಾರ ರಚಿಸಲಿದೆ. ಮಹಾಯತಿ ಮೈತ್ರಿಕೂಟದ ಶಾಸಕರ ಬಲ 230. ಆದರೆ ಮುಖ್ಯಮಂತ್ರಿ ಯಾರು ಎಂಬ ಗುಟ್ಟನ್ನು ಬಿಜೆಪಿ ಇನ್ನೂ ಬಿಟ್ಟುಕೊಟ್ಟಿಲ್ಲ. ಸರ್ಕಾರದ ರಚನೆ ಯಾವಾಗ ಎಂಬುದನ್ನು ಸ್ಪಷ್ಟವಾಗಿ ಹೇಳಲು ಯಾರು ತಯಾರಿಲ್ಲ. ಲಾಡ್ಲಿ ಬೆಹನ್ ಯೋಜನೆ ತಂದಿದ್ದು ಶಿಂಧೆ, ಸರ್ಕಾರದ ಯೋಜನೆಗಳು ಈ ಗೆಲುವಿನಲ್ಲಿ ಮಹತ್ವದ ಪಾತ್ರ ವಹಿಸಿವೆ. ಹೀಗಾಗಿ ಮೈತ್ರಿ ಧರ್ಮದ ಅನುಸಾರ ಶಿಂಧೆ ಅವರನ್ನೇ ಮುಖ್ಯಮಂತ್ರಿಯನ್ನಾಗಿ ಆಯ್ಕೆ ಮಾಡಬೇಕು ಎನ್ನುತ್ತಿದೆ.

ಇನ್ನೊಂದು ಕಡೆ ಸಿಎಂ ರೇಸ್‌ನಲ್ಲಿ ಕಾಣಿಸಿಕೊಳ್ಳದ ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿ ಫಡ್ನವೀಸ್ ಸಿಎಂ ಆಗುವುದರ ಪರವಾಗಿದೆ. ಹೀಗಾಗಿ ಮಹಾಯುತಿಯಲ್ಲಿ ಚೌಕಾಶಿ ವ್ಯವಹಾರ ಈಗ ದೆಹಲಿಗೆ ಶಿಫ್ಟ್ ಆಗಿದೆ. ಸಿಎಂ ಆಯ್ಕೆಗೆ ಇನ್ನೂ ಎರಡು ದಿನದ ನಂತರವೇ ಪ್ರಮಾಣ ವಚನ ಸ್ವೀಕಾರ ದಿನಾಂಕ ನಿಗದಿ ಆಗಲಿದೆ ಎನ್ನಲಾಗುತ್ತಿದೆ.

### ಶಿವಸೇನೆ ಇದಕ್ಕೆ ಒಪ್ಪುತ್ತಿಲ್ಲ

**ಇದಕ್ಕೆ ಕಾರಣ ಮುಂದಿನ ಮುಖ್ಯಮಂತ್ರಿ ಯಾರಾಗುತ್ತಾರೆ ಎಂಬ ಪ್ರಶ್ನೆಗೆ ಇನ್ನೂ ಉತ್ತರ ಸಿಕ್ಕಿಲ್ಲ. ಈ ವಿಚಾರದಲ್ಲಿ ಒಮ್ಮತಾಭಿಪ್ರಾಯಕ್ಕೆ ಬರಲು ಬಿಜೆಪಿ-ಶಿಂಧೆ ಸೇನೆ-ಅಜಿತ್ ಪವಾರ್ ಎನ್‌ಸಿಪಿ ಇನ್ನಿಲ್ಲದ ಕಸರತ್ತು ನಡೆಸಿವೆ. ಮಹಾಯುತಿ ಭರ್ಜರಿ ಗೆಲುವಿನಲ್ಲಿ ಫಡ್ನವೀಸ್ ಪಾತ್ರ ಪ್ರಧಾನವಾದುದ್ದು ಎನ್ನುತ್ತಿರುವ ಬಿಜೆಪಿ ಅವರನ್ನೇ ಸಿಎಂ ಮಾಡಬೇಕು ಎಂದು ಪಟ್ಟು ಹಿಡಿದು ಕುಳಿತಿದೆ. ಆರೆಸ್‌ಎಸ್ ಸಹ ಫಡ್ನವೀಸ್ ಅವರ ಪರವಾಗಿ ಬ್ಯಾಟ್ ಬೀಸಿದೆ. ಆದರೆ ಹಾಲಿ ಸಿಎಂ ಏಕನಾಥ್ ಶಿಂಧೆ ನೇತೃತ್ವದ ಶಿವಸೇನೆ ಮಾತ್ರ ಇದಕ್ಕೆ ಒಪ್ಪುತ್ತಿಲ್ಲ.**

# ಅದಾನಿಯ 100 ಕೋಟಿ ದೇಣಿಗೆ ಬೇಡ: ತೆಲಂಗಾಣ ಸಿಎಂ



**ಹೈದರಾಬಾದ್:** ಯಂಗ್ ಇಂಡಿಯಾ ಸ್ಕಿಲ್ಸ್ ಯೂನಿವರ್ಸಿಟಿಗೆ ಅದಾನಿ ಫೌಂಡೇಶನ್ ವಾಗ್ದಾನ ಮಾಡಿದ್ದ 100 ಕೋಟಿ ರೂ. ದೇಣಿಗೆಯನ್ನು ತಮ್ಮ ಸರ್ಕಾರ ನಿರಾಕರಿಸಿದೆ ಎಂದು ತೆಲಂಗಾಣ ಮುಖ್ಯಮಂತ್ರಿ ಎ ರೇವಂತ್ ರೆಡ್ಡಿ ತಿಳಿಸಿದ್ದಾರೆ. ವಿಶೇಷ ಮುಖ್ಯ ಕಾರ್ಯದರ್ಶಿ ಮತ್ತು ಕೈಗಾರಿಕಾ ಉತ್ತೇಜನ, ಕೈಗಾರಿಕೆಗಳು ಮತ್ತು ವಾಣಿಜ್ಯ ಇಲಾಖೆ ಆಯುಕ್ತ ಜಯೇಶ್ ರಂಜನ್ ಅವರು ಡಾ.ಪ್ರೀತಿ ಅದಾನಿಗೆ ಬರೆದ ಪತ್ರದಲ್ಲಿ, 'ನಿಮ್ಮ ಪ್ರತಿಷ್ಠಾನದ ಪರವಾಗಿ ಯಂಗ್ ಇಂಡಿಯಾ ಸ್ಕಿಲ್ಸ್ ಯೂನಿವರ್ಸಿಟಿಗೆ 100 ಕೋಟಿ ರೂ. ನೀಡಿದ್ದಕ್ಕಾಗಿ ನಾವು ನಿಮಗೆ ಧನ್ಯವಾದ ತಿಳಿಸುತ್ತೇವೆ.

ಪ್ರಸ್ತುತ ಸಂದರ್ಭದಲ್ಲಿ ಉದ್ಭವಿಸಿರುವ ವಿವಾದಗಳನ್ನು ಗಮನದಲ್ಲಿಟ್ಟುಕೊಂಡು ಹಣ ವರ್ಗಾವಣೆ ಮಾಡದಂತೆ ಮಾನ್ಯ ಮುಖ್ಯಮಂತ್ರಿಗಳು ನನಗೆ ಸೂಚನೆ ನೀಡಿದ್ದಾರೆ ಎಂದು ಸ್ಪಷ್ಟಪಡಿಸಿದೆ.

ಅದಾನಿ ವಿರುದ್ಧ ದೋಷಾರೋಪಣೆ ಮಾಡಿದ ನಂತರ, ತೆಲಂಗಾಣ ಸರ್ಕಾರ, ಮುಖ್ಯಮಂತ್ರಿ ರೆಡ್ಡಿ ಅವರು ಭಾರತ್ ರಾಷ್ಟ್ರ ಸಮಿತಿ ಮತ್ತು ಬಿಜೆಪಿಯಿಂದ ಟೀಕೆಗೆ ಗುರಿಯಾದರು.

> **ಸೌರಶಕ್ತಿ ಪೂರೈಕೆ ಯೋಜನೆ ಗುತ್ತಿಗೆ ಪಡೆದುಕೊಳ್ಳಲು ಭಾರತೀಯ ಸರ್ಕಾರಿ ಅಧಿಕಾರಿಗಳಿಗೆ ಲಂಚ ನೀಡಿದ ಆರೋಪದ ಮೇಲೆ ಯುನೈಟೆಡ್ ಸ್ಟೇಟ್ಸ್‌ನಲ್ಲಿ ಗೌತಮ್ ಅದಾನಿ ವಿರುದ್ಧ ದೋಷಾರೋಪಣೆಯನ್ನು ಗಮನದಲ್ಲಿಟ್ಟುಕೊಂಡು ಈ ನಿರ್ಧಾರ ಕೈಗೊಳ್ಳಲಾಗಿದೆ**
>
> **- ಎ. ರೇವಂತ್ ರೆಡ್ಡಿ**
> **ತೆಲಂಗಾಣ ಮುಖ್ಯಮಂತ್ರಿ**

# ರಸ್ತೆ ಬದಿ ಟೆಂಟ್ ಮೇಲೆ ಟ್ರಕ್ ಹರಿದು ಐವರ ದುರ್ಮರಣ



**ತ್ರಿಶೂರ್:** ಮಂಗಳವಾರ ಮುಂಜಾನೆ ಕೇರಳದ ತ್ರಿಶೂರ್ ಜಿಲ್ಲೆಯಲ್ಲಿ ಟ್ರಕ್ ರಸ್ತೆ ಬದಿ ಟೆಂಟ್‌ವೊಂದಕ್ಕೆ ನುಗ್ಗಿದ ಪರಿಣಾಮ ಅಲ್ಲಿ ಮಲಗಿದ್ದ ಇಬ್ಬರು ಮಕ್ಕಳು ಸೇರಿ ಐದು ಮಂದಿ ಸಾವನ್ನಪ್ಪಿದ್ದಾರೆ. ವಲಪಾಡ್ ಪೊಲೀಸ್ ಠಾಣಾ ವ್ಯಾಪ್ತಿಯ ನಾಟಿಕ ಎಂಬಲ್ಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಬೆಳಗಿನ ಜಾವ 4.30ರ ಸುಮಾರಿಗೆ ಹೆದ್ದಾರಿ ಪಕ್ಕದಲ್ಲಿ ಹಾಕಲಾಗಿದ್ದ ಟೆಂಟ್‌ಗಳಲ್ಲಿ ವಾಸಿಸುತ್ತಿದ್ದ ಅಲೆಮಾರಿ ಗಳ ಮೇಲೆ ಟ್ರಕ್ ಹರಿದು ಈ ದುರ್ಘಟನೆ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮತರಲ್ಲಿ ಒಂದೂವರೆ ಮತ್ತು ನಾಲ್ಕು ವರ್ಷದ ಇಬ್ಬರು ಮಕ್ಕಳಿದ್ದಾರೆ. ಇಬ್ಬರು ಮಹಿಳೆಯರೂ ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ.

ಪೊಲೀಸರ ಪ್ರಕಾರ ಟ್ರಕ್ ಕಣ್ಣೂರಿನಿಂದ ಮರದೊಂದಿಗೆ ಬರುತ್ತಿದ್ದು, ಅಪಘಾತ ಸಂಭವಿಸಿದಾಗ ಪರವಾನಗಿ ಇಲ್ಲದ ಕ್ಲೀನರ್ ವಾಹನವನ್ನು ಚಲಾಯಿಸುತ್ತಿದ್ದದ್ದೆ ಅಪಘಾತಕ್ಕೆ ಕಾರಣ ಎಂದು ಗೊತ್ತಾಗಿದೆ. ಅವರಿಬ್ಬರೂ ಕುಡಿದಿದ್ದರು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು. ಅವರನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಹೇಳಿದರು.

ಸಾಕ್ಷಿಗಳ ಪ್ರಕಾರ ವಾಹನವು ವೇಗವಾಗಿ ಚಲಿಸುತ್ತಿತ್ತು ಮತ್ತು ಅಪಘಾತದ ನಂತರ ಚಾಲಕ ಮತ್ತು ಕ್ಲೀನರ್ ತಪ್ಪಿಸಿಕೊಳ್ಳಲು ಪ್ರಯತ್ನಿಸಿದರು ಎಂದು ಇನ್ನೊಬ್ಬ ಅಧಿಕಾರಿ ಹೇಳಿದರು. ಅವರನ್ನು ಸ್ಥಳೀಯರು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ ಎಂದು ಅಧಿಕಾರಿ ಹೇಳಿದರು.

ಘಟನೆಯನ್ನು ದುರದಷ್ಟಕರ ಎಂದು ಬಣ್ಣಿಸಿದ ರಾಜನ್, ಪೊಲೀಸರ ಆರಂಭಿಕ ಸಂಶೋಧನೆಗಳ ಪ್ರಕಾರ ಚಾಲಕ ಮತ್ತು ಕ್ಲೀನರ್‌ನ ಕಡೆಯಿಂದ ಗಂಭೀರ ಲೋಪಗಳಿವೆ ಎಂದು ಹೇಳಿದರು. ಸಂತ್ರಸ್ತರು ರಸ್ತೆಬದಿಯಲ್ಲಿ ಮಲಗಬೇಕಾದ ಸಂದರ್ಭಗಳ ಬಗ್ಗೆಯೂ ಪರಿಶೀಲಿಸಲಾಗುವುದು ಎಂದು ಹೇಳಿದರು.

> **ಅಪಘಾತ ಸ್ಥಳಕ್ಕೆ ಭೇಟಿ ನೀಡಿದ ತ್ರಿಶೂರ್ ಸಿಟಿ ಪೊಲೀಸ್ ಕಮಿಷನರ್ ಆರ್ ಇಳಂಗೋ, ಭಾರತೀಯ ನ್ಯಾಯ ಸಂಹಿತೆಯಡಿ (ಬಿಎನ್‌ಎಸ್) ಕೊಲೆಗೆ ಸಮನಾಗದ ಅಪರಾಧಿ ನರಹತ್ಯೆಯ ಜಾಮೀನು ರಹಿತ ಪ್ರಕರಣದಡಿ ಪ್ರಕರಣ ದಾಖಲಿಸಲಾಗಿದೆ, ಈ ಅಪರಾಧಕ್ಕೆ 10 ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗುತ್ತದೆ ಎಂದರು.**

# ಯಾರೇ ಆಗಲಿ ಇಂತಹ ವಿದ್ಯಮಾನಗಳನ್ನೂ ಗ್ರಹಿಸಲೂ ಅಸಾಧ್ಯ

## 2 ವರ್ಷದ ಬಾಲಕಿ ಪೋಷಕರನ್ನು ಹುಡುಕಿಕೊಂಡು ಒಬ್ಬಂಟಿಯಾಗಿ ಅಮೆರಿಕಾಗೆ ಬಂದಾಗ: ಅಧಿಕಾರಿಗಳು ಮಾಡಿದ್ದೇನು?



**ಅಮೆರಿಕ ಸರ್ಕಾರದ ವೈಫಲ್ಯತೆ**

**ವಾಷಿಂಗ್ಟನ್:** ಅಮೆರಿಕಾದ ಗಡಿ ಅಧಿಕಾರಿಗಳು ತೀರಾ ಅಪರೂಪದ ಮತ್ತು ಹೃದಯ ಹಿಂಡುವ ಹಿನ್ನಲೆಯುಳ್ಳ ವಿದ್ಯಮಾನಕ್ಕೆ ಸಾಕ್ಷಿಯಾಗಬೇಕಾಯಿತು. ಇದು, ವಲಸಿಗರ ವಿಚಾರದಲ್ಲಿ ಹಾಲೀ ಜೋ ಬೈಡನ್ ಸರ್ಕಾರದ ಕಾರ್ಯವೈಖರಿಯನ್ನು ಪ್ರಶ್ನಿಸುವಂತಿತ್ತು. ಕೇವಲ ಎರಡು ವರ್ಷದ ಮಗು ವೊಂದು ಕೈಯಲ್ಲಿ ತುಂಡು ಪೇಪರ್ ಅನ್ನು ಹಿಡಿದು ಕೊಂಡು ಬಂದಿತ್ತು. ಅದರಲ್ಲಿ ಮೊದಲ ಹೆಸರು, ದೂರವಾಣಿ ನಂಬರ್ ಮಾತ್ರ ಇದ್ದವು. ಎಲ್ -ಸಾಲ್ವಡಾರ್‌ನಿಂದ ಬಂದಿದ್ದ ಮಗು, ತನ್ನ ಪೋಷಕರನ್ನು ಹುಡುಕಿಕೊಂಡು ಬಂದಿತ್ತು ಎನ್ನುವುದನ್ನು ಅರಿತ ಗಡಿ ಅಧಿಕಾರಿಗಳ ಹೃದಯವೂ ಭಾರವಾಯಿತು.

ಎಲ್ಲಿಗೆ ನೀನು ಹೋಗುತ್ತಿದ್ದೀಯಾ ಎಂದು ಅಧಿಕಾರಿಗಳನ್ನು ಆ ಮಗುವನ್ನು ಕೇಳಿದಾಗ, ನನ್ನ ತಂದೆ ತಾಯಿಯನ್ನು ಹುಡುಕಿಕೊಂಡು ಎಂದು ಹೇಳಿದ್ದಾಳೆ. ಅವರು ಎಲ್ಲಿದ್ದಾರೆ ಎನ್ನುವ ಪ್ರಶ್ನೆಗೆ ಯುನೈಟೆಡ್ ಸ್ಟೇಟ್ಸ್ ಎಂದು ಮಗು ಹೇಳಿದೆ. ಕಸ್ಟಮ್ಸ್ ಮತ್ತು ಬಾರ್ಡರ್ ಪ್ರೊಟೆಕ್ಷನ್ ಡೇಟಾದ ಪ್ರಕಾರ 3,20,00 ಪೋಷಕರು ಇಲ್ಲದ ಮಕ್ಕಳು, ಅಮೆರಿಕಾವನ್ನು ಪ್ರವೇಶಿಸಿದ್ದಾರೆ.

ಇನ್ನೂರು, ಅಕ್ರಮ ವಲಸೆಗಾರರ ಗುಂಪಿನಲ್ಲಿ ಪಿಂಕ್ ಬಣ್ಣದ ಜ್ಯಾಕೆಟ್ ಹಾಕಿಕೊಂಡು ಬಂದಿದ್ದ ಈ ಹುಡುಗಿಯನ್ನು ಅಧಿಕಾರಿಗಳು ತಮ್ಮ ವಶಕ್ಕೆ ಪಡೆದುಕೊಂಡಿದ್ದಾರೆ. 200 ವಲಸೆಗಾರರ ಪೈಕಿ, 60 ಅಪ್ರಾಪ್ತ ವಯಸ್ಸಿನವರನ್ನೂ ಬೋರ್ಡರ್ ಅಧಿಕಾರಿಗಳು ವಶಕ್ಕೆ ತೆಗೆದುಕೊಂಡಿದ್ದಾರೆ. ಇವರೆಲ್ಲರೂ, ಟೆಕ್ಸಾಸ್ ರಾಜ್ಯದ ಮಾರ್ವೆರಿಕ್ ಕಡೆಗೆ ವಲಸೆ ಹೋಗುವಾಗ ಗಡಿಯಲ್ಲಿ ಸಿಕ್ಕಿಬಿದ್ದಿದ್ದರು.

ಈ ಪುಟ್ಟ ಹುಡುಗಿಯ ಫೋಟೋ ವೈರಲ್ ಆಗುತ್ತಿದ್ದಂತೆಯೇ, ಜೋ ಬೈಡೆನ್ ನೇತೃತ್ವದ ಅಮೆರಿಕಾ ಸರ್ಕಾರದ ವಲಸೆ ನೀತಿಯು ವ್ಯಾಪಕ ಟೀಕೆಗೆ ಒಳಗಾಗುತ್ತಿದೆ ಮತ್ತು ಅಮೆರಿಕ ಸರ್ಕಾರದ ವೈಫಲ್ಯತೆ ಎಂದು ಕಿಡಿಕಾರಲಾಗುತ್ತಿದೆ.

ಎರಡು ವರ್ಷದ ಈ ಪುಟ್ಟ ಮತ್ತು ಮುಗ್ದ ಮಗುವನ್ನು ಆಕೆಯ ಪೋಷಕರು ಬಿಟ್ಟು ಹೋಗಿದ್ದಾರೆ ಎನ್ನುವ ವಿಚಾರವೇ ತುಂಬಾ ನೋವು ತರುವಂತದ್ದು. ಮನುಷ್ಯತ್ವದ ಮೇಲೆ ಏನೂ ಕಾಳಜಿಯಿಲ್ಲದ ಮಾನವ ಕಳ್ಳಸಾಗಾಣಿಕೆದಾರರಿಂದ ಅಪಾಯ ಎಂದೂ ತಪ್ಪುವುದಿಲ್ಲ ಎಂದು ಬೈಡೆನ್ ಸರ್ಕಾರದ ಟೀಕಾಕಾರರೊಬ್ಬರು ಅಭಿಪ್ರಾಯ ಪಟ್ಟಿದ್ದಾರೆ.

ವಲಸೆ ನೀತಿಯನ್ನು ಜಾರಿಗೊಳಿಸಲು ನಿರಾಕರಿಸುವ ಮೂಲಕ ಬೈಡೆನ್ - ಕಮಲಾ ಹ್ಯಾರಿಸ್ ಆಡಳಿತ, ಈ ರೀತಿಯ ಮುಗ್ದ ಮಕ್ಕಳು ಅಪಾಯಕ್ಕೆ ಸಿಲುಕುವುದು ಮುಂದುವರಿದಂತಾಗಿರುವುದಕ್ಕೆ ಕಾರಣರಾಗಿದ್ದಾರೆ. ಬೈಡೆನ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ, ಈ ರೀತಿಯ ಲಕ್ಷಾಂತರ ಮಕ್ಕಳು ಅಪಾಯಕ್ಕೆ ಸಿಲುಕಿದ್ದಾರೆ ಎಂದು ಇನ್ನೊಬ್ಬರು ಅಭಿಪ್ರಾಯ ಪಟ್ಟಿದ್ದಾರೆ. ಈ ಪುಟ್ಟ ಹುಡುಗಿಯ ವಿಡಿಯೋ ನೋಡಿ ದಾಗ ನಮ್ಮ ದೇಶದ ಆಡಳಿತ ವೈಖರಿಯ ಬಗ್ಗೆ ಸಿಟ್ಟು ಬಂತು ಎಂದು ನ್ಯೂಯಾರ್ಕ್ ಸಿಟಿ ಕೌನ್ಸಿಲರ್ ರಾಬರ್ಟ್ ಹೋಲ್ಡನ್ ಹೇಳಿದ್ದಾರೆ. ಇದೊಂದು ನಿಜವಾಗಿಯೂ ಬೇಸರದ ಸಂಗತಿ, ನನಗೆ ಎರಡು ವರ್ಷದ ಮತ್ತು ಐದು ವರ್ಷದ ಮೊಮ್ಮಕ್ಕಳು ಇದ್ದಾರೆ. ಈ ಪುಟ್ಟ ಹುಡುಗಿ ಎಂತಹ ನೋವನ್ನು ಅನುಭವಿಸುತ್ತಿರಬಹುದು ಎಂದು ಇನ್ನೊಬ್ಬರು ಅಳಲು ತೋಡಿಕೊಂಡಿದ್ದಾರೆ.

ನಾಗರೀಕ ಸಮಾಜದಲ್ಲಿ ಇರುವ ಯಾರೇ ಆಗಲಿ ಇಂತಹ ವಿದ್ಯಮಾನಗಳನ್ನೂ ಗ್ರಹಿಸಲೂ ಸಾಧ್ಯವಾಗುವುದಿಲ್ಲ. ಇದಕ್ಕೆಲ್ಲಾ ಪರಿಹಾರ ಎಂದರೆ ಗಡಿಯಲ್ಲಿ ಭದ್ರತೆ ಹೆಚ್ಚಾಗಿರಬೇಕು. ಮುಗ್ದ ಮಕ್ಕಳು ಸರ್ಕಾರದ ವೈಫಲ್ಯದಿಂದಾಗಿ ತೊಂದರೆ ಅನುಭವಿಸುವಂತಾಗಿದೆ ಎಂದು ಇನ್ನೋರ್ವರು ವಿಷಾದ ವ್ಯಕ್ತ ಪಡಿಸಿದ್ದಾರೆ.

### ಪೇಪರ್ ಹಿಡಿದುಕೊಂಡು ಬಂದಿತ್ತು

**ಎರಡು ವರ್ಷದ ಮಗುವೊಂದು ಕೈಯಲ್ಲಿ ತುಂಡು ಪೇಪರ್ ಅನ್ನು ಹಿಡಿದುಕೊಂಡು ಬಂದಿತ್ತು. ಅದರಲ್ಲಿ ಮೊದಲ ಹೆಸರು ಮತ್ತು ದೂರವಾಣಿ ನಂಬರ್ ಮಾತ್ರ ಇದ್ದವು. ಇನ್ನೂರು, ಅಕ್ರಮ ವಲಸೆಗಾರರ ಗುಂಪಿನಲ್ಲಿ ಪಿಂಕ್ ಬಣ್ಣದ ಜ್ಯಾಕೆಟ್ ಹಾಕಿಕೊಂಡು ಬಂದಿದ್ದ ಈ ಹುಡುಗಿಯನ್ನು ಅಧಿಕಾರಿಗಳು ತಮ್ಮ ವಶಕ್ಕೆ ಪಡೆದುಕೊಂಡಿದ್ದಾರೆ. ಈ ಹುಡುಗಿ ತನ್ನ ಪೋಷಕರನ್ನು ಹುಡುಕಿಕೊಂಡು ಅಮೆರಿಕಾಗೆ ಬಂದಿತ್ತು.**

- **ಜೋ ಬೈಡೆನ್ ನೇತೃತ್ವದ ಅಮೆರಿಕಾ ಸರ್ಕಾರದ ವಲಸೆ ನೀತಿಯು ವ್ಯಾಪಕ ಟೀಕೆಗೆ ಒಳಗಾಗುತ್ತಿದೆ**
- **ಎರಡು ವರ್ಷದ ಈ ಪುಟ್ಟ ಮತ್ತು ಮುಗ್ದ ಮಗುವನ್ನು ಆಕೆಯ ಪೋಷಕರು ಬಿಟ್ಟು ಹೋಗಿದ್ದಾರೆ**
- **ಬೈಡೆನ್ - ಕಮಲಾ ಹ್ಯಾರಿಸ್ ಆಡಳಿತ, ಈ ರೀತಿಯ ಮುಗ್ದ ಮಕ್ಕಳು ಅಪಾಯಕ್ಕೆ ಸಿಲುಕುವುದು ಮುಂದುವರಿದಿದೆ**

## ಮಿನಿ ನ್ಯೂಸ್

### ಮಹಾರಾಷ್ಟ್ರದ ಡಿಜಿಪಿಯಾಗಿ ಐಪಿಎಸ್ ಅಧಿಕಾರಿ ರಶ್ಮಿ ಶುಕ್ಲಾ ಮರುನೇಮಕ

**ಮುಂಬೈ:** ಮಹಾರಾಷ್ಟ್ರ ವಿಧಾನಸಭಾ ಚುನಾವಣೆ ಮುಗಿದ ನಂತರ ವಿವಾದಿತ ಐಪಿಎಸ್ ಅಧಿಕಾರಿ ರಶ್ಮಿ ಶುಕ್ಲಾ ಅವರನ್ನು ಪೊಲೀಸ್ ಮಹಾನಿರ್ದೇಶಕರಾಗಿ ಮರುನೇಮಕಗೊಳಿಸಿ ರಾಜ್ಯ ಗೃಹ ಇಲಾಖೆ ಆದೇಶ ಹೊರಡಿಸಿದೆ. ಚುನಾವಣೆಗೆ ಮುನ್ನ ಭಾರತೀಯ ಚುನಾವಣಾ ಆಯೋಗದ ನಿರ್ದೇಶನದ ಮೇರೆಗೆ ಶುಕ್ಲಾ ಅವರನ್ನು ಡಿಜಿಪಿ ಹುದ್ದೆಯಿಂದ ತೆರವುಗೊಳಿಸಿದ ನಂತರ ಸಂಜಯ್ ಕುಮಾರ್ ವರ್ಮಾ ಅವರು ಡಿಜಿಪಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಶುಕ್ಲಾ ಅವರನ್ನು ಚುನಾವಣೆಯಿಂದ ದೂರವಿಡಬೇಕು ಎಂದು ಕಾಂಗ್ರೆಸ್ ಒತ್ತಾಯಿಸಿತ್ತು.

ಭಾರತೀಯ ಪೊಲೀಸ್ ಸೇವೆಯ ಹಿರಿಯ ಅಧಿಕಾರಿಯಾಗಿರುವ ವರ್ಮಾ ಅವರು ಚುನಾವಣಾ ಪ್ರಕ್ರಿಯೆ ಮುಗಿಯುವವರೆಗೆ ಡಿಜಿಪಿಯಾಗಿ ಇರಬೇಕಿತ್ತು. ಆದರೆ ಚುನಾವಣೆ ವೇಳೆ ಶುಕ್ಲಾ ಅವರನ್ನು ಕಡ್ಡಾಯ ರಜೆಯ ಮೇಲೆ ಕಳುಹಿಸಲಾಗಿತ್ತು. ಚುನಾವಣಾ ಪ್ರಕ್ರಿಯೆ ಪೂರ್ಣಗೊಂಡು ಚುನಾವಣಾ ಫಲಿತಾಂಶ ಪ್ರಕಟವಾದ ಹಿನ್ನೆಲೆಯಲ್ಲಿ ಮಾದರಿ ನೀತಿ ಸಂಹಿತೆ ಸೋಮವಾರದಿಂದ ಎಂದು ಗೃಹ ಇಲಾಖೆ ಆದೇಶದಲ್ಲಿ ತಿಳಿಸಲಾಗಿದೆ. ನೀತಿ ಸಂಹಿತೆ ಸ್ಥಗಿತ ಹಿನ್ನೆಲೆಯಲ್ಲಿ ಸರ್ಕಾರ ಶುಕ್ಲಾ ಅವರ ಕಡ್ಡಾಯ ರಜೆ ಅವಧಿಯನ್ನು ಕೊನೆಗೊಳಿಸಿದ್ದು, ಡಿಜಿಪಿಯಾಗಿ ಮುಂದುವರೆಯಲು ಅವರಿಗೆ ಸೂಚಿಸಲಾಗಿದೆ. ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಮಹಾಯುತಿ ಒಕ್ಕೂಟವು ಭರ್ಜರಿ ಬಹುಮತದೊಂದಿಗೆ ಅಧಿಕಾರವನ್ನು ಉಳಿಸಿಕೊಂಡಿದೆ.

### ಸಂವಿಧಾನ ದಿನದ ಶುಭ ಕೋರಿದ ಪ್ರಧಾನಿ ಮೋದಿ

**ನವದೆಹಲಿ:** ಸಂವಿಧಾನದ ಅಂಗೀಕಾರದ 75ನೇ ವಾರ್ಷಿಕೋತ್ಸವದ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಜನತೆಗೆ ಶುಭಾಶಯ ಕೋರಿದ್ದಾರೆ. ಸಂವಿಧಾನ ಸಭೆಯು ನವೆಂಬರ್ 26, 1949 ರಂದು ಸಂಸತ್ತಿನ ಸೆಂಟ್ರಲ್ ಹಾಲ್‌ನಲ್ಲಿ ಸಂವಿಧಾನವನ್ನು ಅಂಗೀಕರಿಸಿತು. ಸಂವಿಧಾನವು ಜನವರಿ 26, 1950 ರಂದು ಜಾರಿಗೆ ಬಂದಿತು. ಇದನ್ನು ಅಳವಡಿಸಿಕೊಂಡ ದಿನವನ್ನು ಸಂವಿಧಾನ್ ದಿವಸ್ ಎಂದು ಆಚರಿಸಲಾಗುತ್ತದೆ. ಮಂಗಳವಾರ ಇಲ್ಲಿ ನಡೆದ ಸಂಸತ್ ಸದಸ್ಯರ ಜಂಟಿ ಅಧಿವೇಶನವನ್ನು ಉದ್ದೇಶಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಾಡಿದ ಭಾಷಣದಿಂದ ಪ್ರಾರಂಭವಾಗುವ ಸಂವಿಧಾನದ ಅಂಗೀಕಾರದ ವಾರ್ಷಿಕೋತ್ಸವವನ್ನು ಸರ್ಕಾರವು ಯೋಜಿಸಿದೆ. ಸಂಜೆ ನಡೆಯುವ ಮತ್ತೊಂದು ಕಾರ್ಯಕ್ರಮದಲ್ಲಿ ಮೋದಿ ಮಾತನಾಡುವ ನಿರೀಕ್ಷೆಯಿದೆ. ಆಡಳಿತಾರೂಢ ಬಿಜೆಪಿ ಹಾಗೂ ವಿರೋಧ ಪಕ್ಷಗಳು ಪರಸ್ಪರ ಸಾಂವಿಧಾನಿಕ ಮೌಲ್ಯಗಳಿಗೆ ವಿರುದ್ಧವಾಗಿ ಕೆಲಸ ಮಾಡುತ್ತಿವೆ ಎಂದು ಆರೋಪಿಸಿ ವಾಗ್ಯುದ್ಧದಲ್ಲಿ ತೊಡಗಿವೆ.

### ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಆಸ್ಪತ್ರೆಗೆ ದಾಖಲು

**ಚೆನ್ನೈ:** ಭಾರತೀಯ ರಿಸರ್ವ್ ಬ್ಯಾಂಕ್ ಗವರ್ನರ್ ಶಕ್ತಿಕಾಂತ ದಾಸ್ ಅವರು ಆಸ್ಪತ್ರೆಗೆ ದಾಖಲಾಗಿದ್ದಾರೆ.ಅವರಿಗೆ ಆಸಿಡಿಟಿ ಕಾಣಿಸಿಕೊಂಡ ನಂತರ ಅವರನ್ನು ಚೆನ್ನೈನ ಕಾರ್ಪೊರೇಟ್ ಆಸ್ಪತ್ರೆಗೆ ದಾಖಲಾಗಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಅವರ ಆರೋಗ್ಯದ ಮೇಲೆ ತೀವ್ರ ನಿಗಾ ಇರಿಸಲಾಗಿದೆ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ. ಭಾರತೀಯ ರಿಸರ್ವ್ ಬ್ಯಾಂಕ್ ವಕ್ತಾರರು, ಶಕ್ತಿಕಾಂತ ದಾಸ್ ಅವರು ಅಸಿಡಿಟಿ ಅನುಭವಿಸಿದರು ಮತ್ತು ವೀಕ್ಷಣೆಗಾಗಿ ಚೆನ್ನೈನ ಅಪೋಲೋ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ತಿಳಿಸಿದ್ದಾರೆ. ಈಗ ಅವರು ಆರೋಗ್ಯವಾಗಿದ್ದಾರೆ ಮತ್ತು ಮುಂದಿನ 2-3 ಗಂಟೆಗಳಲ್ಲಿ ಡಿಸ್ಚಾರ್ಜ್ ಆಗುತ್ತಾರೆ. ಆತಂಕಕ್ಕೆ ಯಾವುದೇ ಕಾರಣವಿಲ್ಲ ಎಂದು ಆರ್‌ಬಿಐ ವಕ್ತಾರರು ತಿಳಿಸಿದ್ದಾರೆ.

### ಭಾರೀ ಮಳೆ 5 ಜಿಲ್ಲೆಗಳಿಗೆ ರೆಡ್ ಅಲರ್ಟ್, ಚೆನ್ನೈ ಜಲಾವೃತ


**ಚೆನ್ನೈ:** ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತ ಸಂಭವಿಸಿದ್ದು ತಮಿಳುನಾಡಿನ ರಾಜಧಾನಿ ಚೆನ್ನೈನಲ್ಲಿ ಭಾರೀ ಮಳೆಯಾಗುತ್ತಿದೆ. ರಸ್ತೆಗಳು ನೀರಿನಿಂದ ಜಲಾವೃತವಾಗಿದೆ. ತಗ್ಗು ಪ್ರದೇಶಗಳಲ್ಲಿ ನೀರು ನುಗ್ಗಿದ್ದು ಸಂಚಾರಕ್ಕೆ ಸಮಸ್ಯೆಯಾಗಿದೆ. ದಟ್ಟವಾದ ಮಂಜು ಆವರಿಸಿದ್ದು ರಸ್ತೆಗಳು ಕಾಣದಾಗಿದೆ. ತಮಿಳುನಾಡಿನ ಕರಾವಳಿ ಮತ್ತು ಡೆಲ್ಟಾ ಜಿಲ್ಲೆಗಳಲ್ಲಿ ಮಂಗಳವಾರದಿಂದ ಮುಂದಿನ ಐದು ದಿನಗಳ ಕಾಲ ತೀವ್ರ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ. ವಾಯುಭಾರ ಕುಸಿತದಿಂದ ರಾಮನಾಥಪುರಂ, ತಿರುಚಿರಾಪಳ್ಳಿ, ಪೆರಂಬಲೂರು, ಕಲ್ಲಕುರಿಚಿ ಮತ್ತು ಚೆಂಗಲ್ಪಟ್ಟು ಜಿಲ್ಲೆಗಳಿಗೆ ರೆಡ್ ಅಲರ್ಟ್ ಘೋಷಣೆ ಮಾಡಲಾಗಿದೆ.

### ಬಿಜೆಪಿ ಶಾಸಕನಿಗೆ ಉದಯಪುರ ಅರಮನೆ ಪ್ರವೇಶಕ್ಕೆ ನಿರಾಕರಣೆ



**ಜೈಪುರ:** ಮೇವಾರ್ ರಾಜಮನೆತನದ ಬಿಜೆಪಿ ಶಾಸಕ ವಿಶ್ವರಾಜ್ ಸಿಂಗ್ ಮೇವಾರ್‌ಗೆ ಅರಮನೆ ಪ್ರವೇಶಕ್ಕೆ ನಿರಾಕರಿಸಿದ್ದಕ್ಕೆ ಹೊರಗಡೆ ಪರಿಸ್ಥಿತಿ ಉದ್ವಿಗ್ನಗೊಂಡಿದೆ. ಮೇವಾರದ 77ನೇ ಮಹಾರಾಣಾ ಆಗಿ ಬಿಜೆಪಿ ಶಾಸಕ ವಿಶ್ವರಾಜ್ ಸಿಂಗ್ ಮೇವಾರ್ ಪಟ್ಟಾಭಿಷೇಕದ ನಂತರ ಉದಯಪುರ ಅರಮನೆಯಲ್ಲಿ ಗದ್ದಲ ಸೃಷ್ಟಿಯಾಗಿದೆ. ಸಿಂಗ್ ಮತ್ತು ಬೆಂಬಲಿಗರಿಗೆ ಅರಮನೆಗೆ ಪ್ರವೇಶ ನಿರಾಕರಿಸಲಾಯಿತು. ಇದರಿಂದ ಕುಪಿತಗೊಂಡ ಬೆಂಬಲಿಗರು ರಾತ್ರಿ 10 ಗಂಟೆಯ ನಂತರ ಕಲ್ಲು ತೂರಾಟ ನಡೆಸಿ ಅರಮನೆ ಗೇಟ್‌ಗೆ ನುಗ್ಗಲು ಯತ್ನಿಸಿದರು. ಗಲಭೆ ದೃಶ್ಯದ ವಿಡಿಯೋಗಳು ಸೋಷಿಯಲ್ ಮೀಡಿಯಾದಲ್ಲಿ ಹರಿದಾಡುಉಡತ್ತಿವೆ. ಘರ್ಷಣೆಯಲ್ಲಿ ಮೂವರು ಗಾಯಗೊಂಡಿದ್ದಾರೆ. ಪೊಲೀಸರು ಗುಂಪನ್ನು ನಿಯಂತ್ರಿಸಲು ಪ್ರಯತ್ನಿಸುತ್ತಿದ್ದಾರೆ.

ವಿಶ್ವರಾಜ್ ಸಿಂಗ್ ಕೂಡ ಸೋಮವಾರ ರಾತ್ರಿ ಐದು ಗಂಟೆಗಳ ಕಾಲ ಸ್ಥಳದಲ್ಲಿ ತಮ್ಮ ಬೆಂಬಲಿಗರೊಂದಿಗೆ ನಿಂತಿದ್ದರು. ಇದೀಗ ಜಿಲ್ಲಾಡಳಿತ ಮಧ್ಯ ಪ್ರವೇಶಿಸಲು ನಿರ್ಧರಿಸಿದೆ. ತಂದೆ ಮಹೇಂದ್ರ ಸಿಂಗ್ ಅವರ ಮರಣದ 12 ದಿನಗಳ ನಂತರ ಐತಿಹಾಸಿಕ ಚಿತ್ತೋರ್‌ಗಢ ಕೋಟೆ ಯಲ್ಲಿ ನಡೆದ ಸಾಂಪ್ರದಾಯಿಕ ಪಟ್ಟಾಭಿಷೇಕ ಸಮಾರಂಭದಲ್ಲಿ ವಿಶ್ವರಾಜ್ ಸಿಂಗ್‌ರನ್ನು ಮೇವಾರ್ ರಾಜವಂಶದ ಉತ್ತರಾಧಿಕಾರಿ ಎಂದು ಘೋಷಿಸಲಾಯಿತು. ಪಟ್ಟಾಭಿಷೇಕ ಸಮಾರಂಭದಲ್ಲಿ ಪುರೋಹಿತರು ಪೂಜೆಗಳನ್ನು ಸಲ್ಲಿಸಿ ಹವನವನ್ನು ಮಾಡಿದರು.



## ಓದುವುದರಲ್ಲಿ ನಶೆ ಕಂಡುಕೊಳ್ಳಿ ಮಾದಕ ವಸ್ತುವಿನ ನಶೆ ಬೇಡ

### ವಿದ್ಯಾರ್ಥಿಗಳಿಗೆ ಶಿವಣ್ಣ ಸಲಹೆ

ಸ್ಯಾಂಡಲ್‌ವುಡ್ ನಟ ಶಿವರಾಜ್‌ಕುಮಾರ್ ಅವರು ಕನ್ನಡ, ತೆಲುಗು ಸೇರಿದಂತೆ ಹಲವು ಚಿತ್ರಗಳಲ್ಲಿ ಬ್ಯುಸಿಯಾಗಿದ್ದಾರೆ. ಸಿನಿಮಾ ಕೆಲಸಗಳಿಂದ ಬ್ರೇಕ್ ಸಿಕ್ಕ ಬೆನ್ನಲ್ಲೇ ಹುಬ್ಬಳ್ಳಿಯ ಬಿವಿಬಿ ಕಾಲೇಜಿನಲ್ಲಿ ನಡೆದ ಮಾದಕ ವ್ಯಸನ ಜಾಗೃತಿ ಅಭಿಯಾನದಲ್ಲಿ ಪತ್ನಿ ಜೊತೆ ಶಿವರಾಜಕುಮಾರ್ ಭಾಗಿಯಾಗಿದ್ದಾರೆ. ಓದುವುದರಲ್ಲಿ ನಶೆ ಕಂಡುಕೊಳ್ಳಿ, ಮಾದಕ ವಸ್ತುವಿನ ನಶೆ ಬೇಡ ಎಂದು ವಿದ್ಯಾರ್ಥಿಗಳಿಗೆ ಮಾದಕ ವ್ಯಸನದ ಬಗ್ಗೆ ಜಾಗೃತಿ ಮೂಡಿಸಿದರು. ಬಲೂನ್ ಹಾರಿಸುವ ಮೂಲಕ ಅಭಿಯಾನಕ್ಕೆ ಶಿವಣ್ಣ ಚಾಲನೆ ನೀಡಿದರು. ಜಾಗೃತಿ ಅಭಿಯಾನದಲ್ಲಿ 'ಟಗರು' ಚಿತ್ರದ ಟಗರು ಬಂತು ಟಗರು ಹಾಡಿಗೆ ನಟ ಸ್ಟೆಪ್ಸ್ ಹಾಕಿದ್ದಾರೆ. ಹಾಡು ಮತ್ತು ಡ್ಯಾನ್ಸ್ ಮೂಲಕ ರಂಜಿಸಿದ್ದಾರೆ. ಆ ನಂತರ ಮಾದಕ ವ್ಯಸನ ಬಗ್ಗೆ ಜಾಗೃತಿ ಕುರಿತು ನಟ ಮಾತನಾಡಿ, ಓದುವುದರಲ್ಲಿ ನಶೆ ಕಂಡುಕೊಳ್ಳಿ. ಮಾದಕ ವಸ್ತುವಿನ ನಶೆ ಬೇಡ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದ್ದಾರೆ. ಪ್ರತಿ ಅಭಿಮಾನಿಯನ್ನು ಸ್ನೇಹಿತನನ್ನಾಗಿ ನೋಡುತ್ತೇನೆ. ಅಭಿಮಾನಿ ಅಂತ ನೋಡಿದರೆ ಬೇರೆ ರೀತಿ ನೋಡ್ಬೇಕಾಗುತ್ತೆ. ಡ್ರಗ್ಸ್‌ನಿಂದ ನಾವು ದೂರ ಇರಬೇಕು. 'ಶಬ್ದವೇಧಿ' ಸಿನಿಮಾದಲ್ಲಿ ಅಪ್ಪಾಜಿ ಅದ್ಭುತವಾಗಿ ಹೇಳಿದ್ದಾರೆ. ಹುಟ್ಟು ಅನ್ನೋದು ಒಂದು ಗಿಫ್ಟ್. ಅದನ್ನ ಕಾಪಾಡಿಕೊಳ್ಳಬೇಕು ಎಂದಿದ್ದಾರೆ.



## ಡಿವೋರ್ಸ್ ಬಳಿಕ ಸೆಕೆಂಡ್ ಹ್ಯಾಂಡ್ ಎಂದು ಟೀಕಿಸಿದರು

ಸೌತ್‌ನ ಸ್ಟಾರ್ ನಟಿ ಸಮಂತಾ ಅವರು 2021ರಲ್ಲಿ ನಾಗಚೈತನ್ಯ ಜೊತೆಗಿನ ದಾಂಪತ್ಯಕ್ಕೆ ಅಂತ್ಯ ಹಾಡಿದ ಮೇಲೆ ತಾವು ಎದುರಿಸಿದ ಟೀಕೆಗಳ ಬಗ್ಗೆ ಮೌನ ಮುರಿದ್ದಾರೆ. ಡಿವೋರ್ಸ್ ಬಳಿಕ ನನ್ನನ್ನು ಸೆಕೆಂಡ್ ಹ್ಯಾಂಡ್ ಎಂದು ಟೀಕಿಸಿದರು ಎಂದು ಸ್ಯಾಮ್ ದುಃಖದ ದಿನಗಳ ಬಗ್ಗೆ ಮಾತನಾಡಿದ್ದಾರೆ. ಸಂದರ್ಶನವೊಂದರಲ್ಲಿ ಸಮಂತಾ ಮಾತನಾಡಿ, ಮಹಿಳೆಯರು ಡಿವೋರ್ಸ್ ಪಡೆದರೆ ಸಾಕಷ್ಟು ಅವಮಾನಗಳನ್ನು ಎದುರಿಸಬೇಕಾಗುತ್ತದೆ. ಡಿವೋರ್ಸ್ ಬಳಿಕ ನನ್ನನ್ನು ಸೆಕೆಂಡ್ ಹ್ಯಾಂಡ್, ಜೀವನ ಹಾಳು ಮಾಡಿಕೊಂಡವಳು ಎಂದು ನಾನಾ ರೀತಿಯಲ್ಲಿ ನಿಂದಿಸಿದರು. ಇಂತಹ ಸಂದರ್ಭದಲ್ಲಿ ನಮ್ಮ ಕುಟುಂಬ ಕೂಡ ಸಾಕಷ್ಟು ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಆರಂಭದಲ್ಲಿ ಈ ವಿಚಾರದಿಂದ ನನಗೆ ತುಂಬಾ ನೋವಾಗಿತ್ತು. ಆದರೆ ನಾನು ಡಿವೋರ್ಸ್ ಪಡೆದಿದ್ದೇನೆ ಎಂದು ಒಪ್ಪಿಕೊಂಡೆ. ಹೌದು.. ಡಿವೋರ್ಸ್ ಆಗಿದೆ. ಅದನ್ನು ನಾನು ಎಲ್ಲೂ ಮರೆಮಾಚಿಲ್ಲ. ಹಾಗಂತ ನಾನು ಮೂಲೆಯಲ್ಲಿ ಕುಳಿತು ಅಳುತ್ತಾ ಇರುತ್ತೇನೆ ಎಂದರ್ಥವಲ್ಲ. ಎಲ್ಲಿ ಕೊನೆ ಇದೆಯೋ ಅಲ್ಲಿಂದಲೇ ಆರಂಭ ಆಗುತ್ತದೆ. ನಾನು ಈಗ ತುಂಬಾ ಖುಷಿಯಾಗಿದ್ದೇನೆ. ನಾನು ಬೆಳೆಯುತ್ತಿದ್ದೇನೆ. ಒಳ್ಳೆಯ ಕೆಲಸ ಸಿಗುತ್ತಿದೆ. ಒಳ್ಳೆಯ ವ್ಯಕ್ತಿಗಳೊಂದಿಗೆ ಕೆಲಸ ಮಾಡುತ್ತಿದ್ದೇನೆ. ನನ್ನ ಜೀವನವನ್ನು ಮುಂದಿನ ಹಂತದತ್ತ ನೋಡುತ್ತಿದ್ದೇನೆ ಎಂದು ಸಮಂತಾ ಮಾತನಾಡಿದ್ದಾರೆ.

ಅಂದಹಾಗೆ, ಸಮಂತಾ ಮತ್ತು ನಾಗಚೈತನ್ಯ 2017ರಲ್ಲಿ ಮದುವೆಯಾದರು.





## ಝೈನಾಬ್ ಜೊತೆ ಗುಟ್ಟಾಗಿ ಎಂಗೇಜ್‌ಮೆಂಟ್

ಟಾಲಿವುಡ್ ನಟ ನಾಗಾರ್ಜುನ ಅವರ ಪುತ್ರ, ಅಖಿಲ್ ಅಕ್ಕಿನೇನಿ ಅವರು ಝೈನಾಬ್ ರಾವಡ್ಜಿ ಅವರೊಂದಿಗೆ ಗುಟ್ಟಾಗಿ ನಿಶ್ಚಿತಾರ್ಥ ಮಾಡಿಕೊಂಡಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ನಾಗಾರ್ಜುನ ಈ ಸುದ್ದಿಯನ್ನು ಹಂಚಿಕೊಂಡಿದ್ದು, ಯುವ ಜೋಡಿಗೆ ಶುಭ ಹಾರೈಸುವಂತೆ ಕೇಳಿದ್ದಾರೆ. ನಾಗಚೈತನ್ಯ ಅವರ ಎರಡನೇ ಮದುವೆಗೆ ಮುನ್ನವೇ ಅಖಿಲ್ ನಿಶ್ಚಿತಾರ್ಥ ನೆರವೇರಿದೆ. ಗುಟ್ಟಾಗಿ ಅಖಿಲ್ ಎಂಗೇಜ್‌ಮೆಂಟ್ ನಡೆದಿದ್ದು, ಇದೀಗ ಅಭಿಮಾನಿಗಳಿಗೆ ಗುಡ್ ನ್ಯೂಸ್ ಕೊಟ್ಟಿದ್ದಾರೆ. ನಮ್ಮ ಮಗನ ನಿಶ್ಚಿತಾರ್ಥವನ್ನು ಘೋಷಿಸಲು ನಮಗೆ ಸಂತೋಷವಾಗುತ್ತಿದೆ. ಅಖಿಲ್ ಅಕ್ಕಿನೇನಿ ಹಾಗೂ ನಮ್ಮ ಸೊಸೆಗೆ ಝೈನಾಬ್ ರಾವಡ್ಜಿ ಅವರ ನಿಶ್ಚಿತಾರ್ಥವನ್ನು ನೆರವೇರಿಸಿದ್ದೇವೆ. ಝೈನಾಬ್ ಅವರನ್ನು ನಮ್ಮ ಕುಟುಂಬಕ್ಕೆ ಸ್ವಾಗತಿಸುತ್ತಿರುವುದಕ್ಕೆ ಅತ್ಯಂತ ಸಂತಸವಾಗುತ್ತಿದೆ. ಯುವ ದಂಪತಿಗಳನ್ನು ಅಭಿನಂದಿಸಲು ದಯವಿಟ್ಟು ನಮ್ಮೊಂದಿಗೆ ಸೇರಿ ಮತ್ತು ಅವರಿಗೆ ಪ್ರೀತಿ, ಸಂತೋಷ ಮತ್ತು ನಿಮ್ಮ ಆಶೀರ್ವಾದ ನೀಡಿ ಹಾರೈಸಬೇಕು ಎಂದು ಮನವಿ ಮಾಡಿದ್ದಾರೆ. ಅಂದಹಾಗೆ, ಈ ಹಿಂದೆ ಶ್ರಿಯಾ ಭೂಪಾಲ್ ಎಂಬುವವರ ಜೊತೆ ಅಖಿಲ್ ನಿಶ್ಚಿತಾರ್ಥ ನಡೆದಿತ್ತು.

## ಮೂಕಾಂಬಿಕೆ ದರ್ಶನ ಪಡೆದ ಸೂರ್ಯ, ಜ್ಯೋತಿಕಾ ದಂಪತಿ

ಕೊಲ್ಲೂರು ಮೂಕಾಂಬಿಕೆ ಸನ್ನಿಧಿಗೆ ಕಾಲಿವುಡ್ ಕ್ಯೂಟ್ ಜೋಡಿ ಸೂರ್ಯ ಹಾಗೂ ಜ್ಯೋತಿಕಾ ಆಗಮಿಸಿದ್ದಾರೆ. ತಮಿಳು ಸಿನಿಕ್ಷೇತ್ರದಲ್ಲಿ ಸಾಕಷ್ಟು ಹೆಸರು ಮಾಡಿರೋ ಸೂರ್ಯ ಹಾಗೂ ಜ್ಯೋತಿಕಾ ಉಡುಪಿ ಜಿಲ್ಲೆ ಬೈಂದೂರಿನ ಕೊಲ್ಲೂರಿಗೆ ಭೇಟಿ ಕೊಟ್ಟಿದ್ದಾರೆ. ದೇಗುಲದಲ್ಲಿ ನಡೆಸುವ ವಿಶೇಷ ಚಂಡಿ ಕಾಯಾಗದಲ್ಲಿ ಭಾಗಿಯಾಗಿ, ದೇವರ ದರ್ಶನ ಪಡೆದರು. ಶಕ್ತಿ ದೇವತೆ ಮೂಕಾಂಬಿಕೆಗೆ ವಿಶೇಷ ಸೇವೆ ಸಲ್ಲಿಕೆ ಮಾಡಿ ತೆರಳಿದ್ದಾರೆ. ಈ ವೇಳೆ, ನೆಚ್ಚಿನ ಜೋಡಿ ಸೂರ್ಯ ದಂಪತಿ ಜೊತೆ ಫೋಟೋ ಕ್ಲಿಕ್ಕಿಸಿಕೊಳ್ಳಲು ಅಭಿಮಾನಿಗಳು ಮುಗಿಬಿದ್ದಿದ್ದಾರೆ. ಅಂದಹಾಗೆ, ಸೂರ್ಯ ನಟನೆಯ 'ಕಂಗುವ' ಸಿನಿಮಾ ನ.14ರಂದು ರಿಲೀಸ್ ಆಗಿತ್ತು. ಸೂರ್ಯ ನಟನೆಗೆ ಉತ್ತಮ ರೆಸ್ಪಾನ್ಸ್ ಸಿಕ್ಕಿತ್ತು. ಆದರೆ ಚಿತ್ರಕ್ಕೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿತ್ತು.





## ಮಕ್ಕಳೊಂದಿಗೆ ಮುಂಬೈ ಗಲ್ಲಿ ಸುತ್ತಿದ ರಾಕಿ ಬಾಯ್

ನ್ಯಾಷನಲ್ ಸ್ಟಾರ್ ಯಶ್ 'ಟಾಕ್ಸಿಕ್' ಸಿನಿಮಾಗಾಗಿ ಮುಂಬೈನಲ್ಲಿ ಬೀಡು ಬಿಟ್ಟಿದ್ದಾರೆ. ಸಿನಿಮಾ ಕೆಲಸಕ್ಕೆ ಬ್ರೇಕ್ ಬೆನ್ನಲ್ಲೇ ಪತ್ನಿ ರಾಧಿಕಾ, ಮಕ್ಕಳೊಂದಿಗೆ ಯಶ್ ಗಲ್ಲಿ ಸುತ್ತಾಡಿದ್ದಾರೆ. ಫ್ಯಾಮಿಲಿ ಜೊತೆ ಯಶ್ ಗಲ್ಲಿ ಸುತ್ತಿದ ವಿಡಿಯೋ ಸೋಶಿಯಲ್ ಮೀಡಿಯಾದಲ್ಲಿ ಭಾರೀ ಸದ್ದು ಮಾಡುತ್ತಿದೆ. 'ಟಾಕ್ಸಿಕ್' ಸಿನಿಮಾ ಕೆಲಸದ ನಡುವೆ ಫ್ಯಾಮಿಲಿಗೂ ಯಶ್ ಸಮಯ ನೀಡಿದ್ದಾರೆ. ಮುಂಬೈನಲ್ಲಿ ರಾಧಿಕಾ ಮತ್ತು ಮುದ್ದಿನ ಮಕ್ಕಳೊಂದಿಗೆ ಮುಂಬೈ ಬೀದಿ ಸುತ್ತಾಡಿದ್ದಾರೆ. ಇದು ಮುಂಬೈ ಪಾಪರಾಜಿಗಳ ಕ್ಯಾಮೆರಾ ಕಣ್ಣಲ್ಲಿ ಸೆರೆಯಾಗಿದೆ. ಸಾಮಾನ್ಯರಂತೆ ಮುಂಬೈನಲ್ಲಿ ಓಡಾಡಿದ ಯಶ್ ಫ್ಯಾಮಿಲಿ ನಡೆಗೆ ಫ್ಯಾನ್ಸ್ ಮೆಚ್ಚುಗೆ ಸೂಚಿಸಿದ್ದಾರೆ. ಇನ್ನೂ ಬೆಂಗಳೂರಿನಲ್ಲಿ ಕೆಲ ಭಾಗದ ಚಿತ್ರೀಕರಣ ನಡೆದ ಮೇಲೆ ಈಗ ಮುಂಬೈನಲ್ಲಿ 'ಟಾಕ್ಸಿಕ್' ಸಿನಿಮಾದ ಶೂಟಿಂಗ್ ನಡೆಯುತ್ತಿದೆ. ಇತ್ತೀಚೆಗೆ 'ಟಾಕ್ಸಿಕ್' ಸೆಟ್‌ನಲ್ಲಿ ಹುಮಾ ಖುರೇಶಿ ಕಾಣಿಸಿಕೊಂಡಿದ್ದರು. ಅವರು ಈ ಸಿನಿಮಾದ ಭಾಗವಾಗಿದ್ದಾರೆ ಎನ್ನಲಾಗಿದೆ. ಈ ಸಿನಿಮಾಗೆ ಮಲಯಾಳಂ ನಿರ್ದೇಶಕಿ ಗೀತು ಮೋಹನ್‌ದಾಸ್ ನಿರ್ದೇಶನ ಮಾಡುತ್ತಿದ್ದಾರೆ. ಬಹುಭಾಷೆಗಳಲ್ಲಿ ಮೂಡಿ ಬರಲಿರುವ ಈ ಚಿತ್ರಕ್ಕೆ ಕೆವಿಎನ್ ಸಂಸ್ಥೆ ಜೊತೆ ಯಶ್ ಕೂಡ ನಿರ್ಮಾಣಕ್ಕೆ ಸಾಥ್ ನೀಡಿದ್ದಾರೆ. ಈ ಸಿನಿಮಾದ ಜೊತೆಗೆ 'ರಾಮಾಯಣ' ಚಿತ್ರದಲ್ಲಿ ಯಶ್ ರಾವಣನಾಗಿಯೂ ಅಬ್ಬರಿಸಲಿದ್ದಾರೆ.

## ಐಪಿಎಲ್ ಅಖಾಡದಲ್ಲಿ 13 ಕನ್ನಡಿಗರು

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್ 2025) ಸೀಸನ್-18 ರಲ್ಲಿ ಕರ್ನಾಟಕದ 13 ಆಟಗಾರರು ಸ್ಥಾನ ಪಡೆದಿದ್ದಾರೆ. ಈ ಹದಿಮೂರು ಮಂದಿಯಲ್ಲಿ ಮೂವರು ಡೆಲ್ಲಿ ಕ್ಯಾಪಿಟಲ್ಸ್ ತಂಡದಲ್ಲಿದ್ದರೆ, ಪಂಜಾಬ್ ಕಿಂಗ್ಸ್ ಹಾಗೂ ಆರ್‌ಸಿಬಿ ತಂಡಗಳಲ್ಲಿ ತಲಾ ಇಬ್ಬರು ಕನ್ನಡಿಗರಿದ್ದಾರೆ. ಇಂಡಿಯನ್ ಪ್ರೀಮಿಯರ್ ಲೀಗ್ ಮೆಗಾ ಹರಾಜಿನ ಮೂಲಕ 10 ತಂಡಗಳಿಗೆ ಒಟ್ಟು 182 ಆಟಗಾರರು ಆಯ್ಕೆಯಾಗಿದ್ದಾರೆ. 182 ಆಟಗಾರರಲ್ಲಿ ಕರ್ನಾಟಕದ 13 ಪ್ಲೇಯರ್ಸ್ ಇದ್ದಾರೆ. ಅದರಂತೆ ಐಪಿಎಲ್ ಸೀಸನ್-18 ರಲ್ಲಿ ಕಾಣಿಸಿಕೊಳ್ಳಲಿರುವ ಕನ್ನಡಿಗರ ಪಟ್ಟಿ ಈ ಕೆಳಗಿನಂತಿದೆ.



**ಕೆಎಲ್ ರಾಹುಲ್:** ಈ ಬಾರಿಯ ಐಪಿಎಲ್ ಹರಾಜಿನಲ್ಲಿ 2 ಕೋಟಿ ರೂ ಮೂಲ ಬೆಲೆಯೊಂದಿಗೆ ಕಾಣಿಸಿಕೊಂಡಿದ್ದ ಕೆಎಲ್ ರಾಹುಲ್ ಅವರನ್ನು ಡೆಲ್ಲಿ ಕ್ಯಾಪಿಟಲ್ಸ್ ಫ್ರಾಂಚೈಸಿ ಖರೀದಿಸಿದೆ. ಅದು ಕೂಡ ಬರೋಬ್ಬರಿ 14 ಕೋಟಿ ರೂ. ನೀಡುವ ಮೂಲಕ ಎಂಬುದು ವಿಶೇಷ.

**ಪ್ರಸಿದ್ಧ್ ಕೃಷ್ಣ:** 2 ಕೋಟಿ ರೂ. ಬೇಸ್ ಪ್ರೈಸ್‌ನಲ್ಲಿ ಕಾಣಿಸಿಕೊಂಡಿದ್ದ ಕರ್ನಾಟಕದ ವೇಗಿ ಪ್ರಸಿದ್ಧ್ ಕೃಷ್ಣ ಅವರನ್ನು ಗುಜರಾತ್ ಟೈಟಾನ್ಸ್ ಫ್ರಾಂಚೈಸಿ 9.50 ಕೋಟಿ ರೂ. ನೀಡಿ ಖರೀದಿಸಿದೆ.

**ವೈಶಾಕ್ ವಿಜಯಕುಮಾರ್:** ಕೇವಲ 30 ಲಕ್ಷ ರೂ. ಮೂಲ ಬೆಲೆಯೊಂದಿಗೆ ಹರಾಜಿನಲ್ಲಿದ್ದ ವೈಶಾಕ್ ವಿಜಯಕುಮಾರ್ ಅವರನ್ನು ಪಂಜಾಬ್ ಕಿಂಗ್ಸ್ ಫ್ರಾಂಚೈಸಿ 1.80 ಕೋಟಿ ರೂ.ಗೆ ಖರೀದಿಸಿದೆ.

**ಕರುಣ್ ನಾಯರ್:** ಕರ್ನಾಟಕದ ಅನುಭವಿ ಆಟಗಾರ ಕರುಣ್ ನಾಯರ್ ಈ ಬಾರಿಯ ಮೆಗಾ ಹರಾಜಿನಲ್ಲಿ 30 ಲಕ್ಷ ರೂ. ಮೂಲ ಬೆಲೆಯೊಂದಿಗೆ ಕಾಣಿಸಿಕೊಂಡಿದ್ದರು. ಈ ಮೊತ್ತವನ್ನು 50 ಲಕ್ಷಕ್ಕೇರಿಸುವ ಮೂಲಕ ಡೆಲ್ಲಿ ಕ್ಯಾಪಿಟಲ್ಸ್ ಕನ್ನಡಿಗನ ಖರೀದಿಸಿದೆ.

**ಶ್ರೀಜಿತ್ ಕೃಷ್ಣನ್:** ಕರ್ನಾಟಕದ ವಿಕೆಟ್ ಕೀಪರ್ ಬ್ಯಾಟರ್ ಶ್ರೀಜಿತ್ ಕೃಷ್ಣನ್ ಅವರನ್ನು 30 ಲಕ್ಷ ರೂ. ಮೂಲ ಬೆಲೆಗೆ ಮುಂಬೈ ಇಂಡಿಯನ್ಸ್ ಫ್ರಾಂಚೈಸಿ ಖರೀದಿಸಿದೆ.

**ಶ್ರೇಯಸ್ ಗೋಪಾಲ್:** 30 ಲಕ್ಷ ರೂ. ಮೂಲ ಬೆಲೆಯೊಂದಿಗೆ ಕಾಣಿಸಿಕೊಂಡಿದ್ದ ಕರ್ನಾಟಕದ ಸ್ಪಿನ್ನರ್ ಶ್ರೇಯಸ್ ಗೋಪಾಲ್ ಅವರು ಬೇಸ ಪ್ರೈಸ್‌ಗೆ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಪಾಲಾಗಿದ್ದಾರೆ.

**ಮನೀಶ್ ಪಾಂಡೆ:** ಕಳೆದ ಸೀಸನ್‌ನಲ್ಲಿ ಕೊಲ್ಕತ್ತಾ ನೈಟ್ ರೈಡರ್ಸ್ ತಂಡದಲ್ಲಿ ಕಾಣಿಸಿಕೊಂಡಿದ್ದ ಮನೀಶ್ ಪಾಂಡೆಯನ್ನು 75 ಲಕ್ಷ ರೂ. ಮೂಲ ಬೆಲೆಗೆ ಕೆಕೆಆರ್ ಫ್ರಾಂಚೈಸಿ ಖರೀದಿಸಿದೆ.

**ಅಭಿನವ್ ಮನೋಹರ್:** ಸ್ಫೋಟಕ ಬ್ಯಾಟಿಂಗ್‌ಗೆ ಹೆಸರುವಾಸಿಯಾಗಿರುವ ಕರ್ನಾಟಕದ ಬಲಗೈ ದಾಂಡಿಗ ಅಭಿನವ್ ಮನೋಹರ್ 30 ಲಕ್ಷ ರೂ. ಮೂಲ ಬೆಲೆಯೊಂದಿಗೆ ಹರಾಜಿನಲ್ಲಿ ಕಾಣಿಸಿಕೊಂಡಿದ್ದರು. ಅವರನ್ನು ಸನ್‌ರೈಸರ್ಸ್ ಹೈದರಾಬಾದ್ ಫ್ರಾಂಚೈಸಿ ಬರೋಬ್ಬರಿ 3.20 ಕೋಟಿ ರೂ. ನೀಡಿ ಖರೀದಿಸಿದೆ.


**ಮನ್ವಂತ್ ಕುಮಾರ್:** 30 ಲಕ್ಷ ರೂ. ಮೂಲ ಬೆಲೆಯೊಂದಿಗೆ ಐಪಿಎಲ್ ಮೆಗಾ ಹರಾಜು ಪಟ್ಟಿಯಲ್ಲಿದ್ದ ಮನ್ವಂತ್ ಕುಮಾರ್ ಅವರನ್ನು ಡೆಲ್ಲಿ ಕ್ಯಾಪಿಟಲ್ಸ್ ಫ್ರಾಂಚೈಸಿಯು ಬೇಸ್ ಪ್ರೈಸ್‌ಗೆ ಖರೀದಿಸಿದೆ.

**ಮನೋಜ್ ಭಾಂಡಗೆ:** ಕಳೆದ ಎರಡು ಸೀಸನ್‌ಗಳಿಂದ ಆರ್‌ಸಿಬಿ ತಂಡದ ಭಾಗವಾಗಿರುವ ಮನೋಜ್ ಭಾಂಡಗೆಯನ್ನು ಈ ಬಾರಿ ಕೂಡ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿ ಖರೀದಿಸಿದೆ. ಅದು ಕೂಡ 30 ಲಕ್ಷ ರೂ. ಮೂಲ ಬೆಲೆಯೊಂದಿಗೆ ಎಂಬುದು ವಿಶೇಷ.

**ಲವ್‌ನೀತ್ ಸಿಸೋಡಿಯಾ:** ಕರ್ನಾಟಕದ ವಿಕೆಟ್ ಕೀಪರ್ ಬ್ಯಾಟರ್ ಲವ್‌ನೀತ್ ಸಿಸೋಡಿಯಾ ಅವರ 30 ಲಕ್ಷ ರೂ. ಮೂಲ ಬೆಲೆಯೊಂದಿಗೆ ಕೊಲ್ಕತ್ತಾ ನೈಟ್ ರೈಡರ್ಸ್ ತಡದ ಪಾಲಾಗಿದ್ದಾರೆ.

**ಪ್ರವೀಣ್ ದುಬೆ:** 30 ಲಕ್ಷ ರೂ. ಬೇಸ್ ಪ್ರೈಸ್ ಪಟ್ಟಿಯಲ್ಲಿದ್ದ ಕರ್ನಾಟಕದ ಸ್ಪಿನ್ನರ್ ಪ್ರವೀಣ್ ದುಬೆಯನ್ನು ಮೂಲ ಬೆಲೆಯೊಂದಿಗೆ ಪಂಜಾಬ್ ಕಿಂಗ್ಸ್ ಫ್ರಾಂಚೈಸಿ ತನ್ನ ತೆಕ್ಕೆಗೆ ತೆಗೆದುಕೊಂಡಿದೆ.

**ದೇವದತ್ ಪಡಿಕ್ಕಲ್:** 2 ಕೋಟಿ ರೂ. ಮೂಲ ಬೆಲೆಯೊಂದಿಗೆ ಐಪಿಎಲ್ ಮೆಗಾ ಹರಾಜಿನಲ್ಲಿ ಕಾಣಿಸಿಕೊಂಡಿದ್ದ ದೇವದತ್ ಪಡಿಕ್ಕಲ್ ಅವರನ್ನು ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿ ಬೇಸ್ ಪ್ರೈಸ್‌ಗೆ ಖರೀದಿಸಿದೆ.



## ಆರ್‌ಸಿಬಿಯಲ್ಲಿ ಡಿಸಿಯಲ್ಲಿ ಕನ್ನಡಿಗರು..!

ಇಂಡಿಯನ್ ಪ್ರೀಮಿಯರ್ ಲೀಗ್ ಸೀಸನ್-18 ರ ಮೆಗಾ ಹರಾಜಿನಲ್ಲಿ ಕರ್ನಾಟಕದ 24 ಆಟಗಾರರು ಕಾಣಿಸಿಕೊಂಡಿದ್ದರು.

ಇವರಲ್ಲಿ ಆರ್‌ಸಿಬಿ ಫ್ರಾಂಚೈಸಿಯು ಕೇವಲ ಇಬ್ಬರನ್ನು ಮಾತ್ರ ಖರೀದಿಸಿದೆ. ಅತ್ತ ಡೆಲ್ಲಿ ಕ್ಯಾಪಿಟಲ್ಸ್ ಮೂವರನ್ನು ಖರೀದಿಸಿ ಒಂದು ಹೆಜ್ಜೆ ಮುಂದೆ ಹೋಗಿರುವುದು ವಿಶೇಷ.

ಐಪಿಎಲ್ ಮೆಗಾ ಹರಾಜಿನ ಮೂಲಕ ಫ್ರಾಂಚೈಸಿಯು 22 ಸದಸ್ಯರ ಬಲಿಷ್ಠ ಬಳಗವನ್ನು ರೂಪಿಸಿದೆ. ಈ ಬಳಗದಲ್ಲಿ ಕರ್ನಾಟಕದಿಂದ ಆಯ್ಕೆಯಾಗಿರುವುದು ಕೇವಲ ಇಬ್ಬರು ಮಾತ್ರ ಎಂಬುದೇ ಅಚ್ಚರಿ. ಅದರಲ್ಲೂ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿಯು ಕರ್ನಾಟಕದ ಯುವ ಪ್ರತಿಭೆಗಳನ್ನು ನಿರ್ಲಕ್ಷಿಸಿದ್ದಾರೆ ಎಂಬ ಆರೋಪವೊಂದು ಕೇಳಿ ಬಂದಿದೆ. ಏಕೆಂದರೆ ಆರ್‌ಸಿಬಿ ಈ ಬಾರಿ ಖರೀದಿಸಿರುವುದು ಮಾಜಿ ಆಟಗಾರರನ್ನು ಎಂಬುದು ಇಲ್ಲಿ ಉಲ್ಲೇಖಾರ್ಹ. ಅಂದರೆ ಈ ಹಿಂದೆ ಆರ್‌ಸಿಬಿ ಪರ ಆಡಿದ್ದ ದೇವದತ್ ಪಡಿಕ್ಕಲ್ ಅವರನ್ನು ಮತ್ತೆ ತಂಡಕ್ಕೆ ಆಯ್ಕೆ ಮಾಡಿದ್ದಾರೆ. ಹಾಗೆಯೇ ಕಳೆದ ಎರಡು ಸೀಸನ್‌ಗಳಿಂದ ಆರ್‌ಸಿಬಿ ಬಳಗದಲ್ಲಿದ್ದ ಮನೋಜ್ ಭಾಂಡಗೆಯನ್ನು ಮತ್ತೆ ಖರೀದಿಸಿದ್ದಾರೆ.


ಅದರಂತೆ ಐಪಿಎಲ್ 2025 ರಲ್ಲಿ ಆರ್‌ಸಿಬಿ ಪಡೆಯ ಕನ್ನಡಿಗರಾಗಿ ದೇವದತ್ ಪಡಿಕ್ಕಲ್ ಹಾಗೂ ಮನೋಜ್ ಭಾಂಡಗೆ ಕಾಣಿಸಿಕೊಳ್ಳಲಿದ್ದಾರೆ. ಇಲ್ಲಿ ಇಂಟ್ರೆಸ್ಟಿಂಗ್ ವಿಷಯ ಎಂದರೆ ಆರ್‌ಸಿಬಿಗಿಂತ ಡೆಲ್ಲಿ ಕ್ಯಾಪಿಟಲ್ಸ್ ಫ್ರಾಂಚೈಸಿಯು ಕನ್ನಡಿಗರಿಗೆ ಮಣೆ ಹಾಕಿರುವುದು. ಅಂದರೆ ಡೆಲ್ಲಿ ಕ್ಯಾಪಿಟಲ್ಸ್ ರೂಪಿಸಿರುವ 23 ಆಟಗಾರರ ಬಳಗದಲ್ಲಿ ಮೂವರು ಕನ್ನಡಿಗರು ಸ್ಥಾನ ಪಡೆದಿದ್ದಾರೆ.

## ಅರ್ಜುನ್ ತೆಂಡೂಲ್ಕರ್ ಕೈ ಹಿಡಿದ ಮುಂಬೈ ಇಂಡಿಯನ್ಸ್

ಐಪಿಎಲ್ 2021 ರಿಂದ ಅರ್ಜುನ್ ತೆಂಡೂಲ್ಕರ್ ಮುಂಬೈ ಇಂಡಿಯನ್ಸ್ ತಂಡದ ಭಾಗವಾಗಿದ್ದಾರೆ. ಇದರ ನಡುವೆ 5 ಪಂದ್ಯಗಳಲ್ಲಿ ಕಣಕ್ಕಿಳಿದಿರುವ ಸಚಿನ್ ತೆಂಡೂಲ್ಕರ್ ಅವರ ಪುತ್ರ 3 ವಿಕೆಟ್ ಕಬಳಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇಂಡಿಯನ್ ಪ್ರೀಮಿಯರ್ ಲೀಗ್ ಮೆಗಾ ಹರಾಜಿನಲ್ಲಿ 182 ಆಟಗಾರರು ಬಿಕರಿಯಾಗಿದ್ದಾರೆ. ಇವರಲ್ಲಿ ಮಾಸ್ಟರ್ ಬ್ಲಾಸ್ಟರ್ ಸಚಿನ್ ತೆಂಡೂಲ್ಕರ್ ಅವರ ಪುತ್ರ ಅರ್ಜುನ್ ತೆಂಡೂಲ್ಕರ್ ಕೂಡ ಸೇರಿದ್ದಾರೆ. ಈ ಬಾರಿ ಕೂಡ ಅರ್ಜುನ್ ಅವರ ಕೈ ಹಿಡಿದದ್ದು ಮುಂಬೈ ಇಂಡಿಯನ್ಸ್ ಎಂಬುದು ವಿಶೇಷ.

ಪ್ರತಿ ಸೀಸನ್‌ನಂತೆ ಈ ಬಾರಿ ಕೂಡ ಕನಿಷ್ಠ ಮೂಲ ಬೆಲೆಯೊಂದಿಗೆ ಕಾಣಿಸಿಕೊಂಡ ಅರ್ಜುನ್ ತೆಂಡೂಲ್ಕರ್ ಅವರನ್ನು ಮುಂಬೈ ಇಂಡಿಯನ್ಸ್ ಫ್ರಾಂಚೈಸಿ ಖರೀದಿಸಿದೆ. ವಿಶೇಷ ಎಂದರೆ ಕಳೆದ 5 ಸೀಸನ್‌ಗಳಿಂದ ಮುಂಬೈ ಇಂಡಿಯನ್ಸ್ ಫ್ರಾಂಚೈಸಿ ಹೊರತುಪಡಿಸಿ ಜೂನಿಯರ್ ತೆಂಡೂಲ್ಕರ್ ಅವರನ್ನು ಯಾವುದೇ ತಂಡ ಖರೀದಿಸಿಲ್ಲ. ಇನ್ನು ಮುಂಬೈ ಇಂಡಿಯನ್ಸ್ ಹೊರತುಪಡಿಸಿ ಅರ್ಜುನ್ ತೆಂಡೂಲ್ಕರ್‌ಗಾಗಿ ಬಿಡ್ ಮಾಡಿದ ಏಕೈಕ ತಂಡವೆಂದರೆ ಗುಜರಾತ್ ಟೈಟಾನ್ಸ್. 2022ರ ಹರಾಜಿನಲ್ಲಿ 20 ಲಕ್ಷ ರೂ. ಮೂಲ ಬೆಲೆಯೊಂದಿಗೆ ಕಾಣಿಸಿಕೊಂಡಿದ್ದ ಅರ್ಜುನ್ ತೆಂಡೂಲ್ಕರ್ ಅವರ ಮೊತ್ತವನ್ನು ಗುಜರಾತ್ ಟೈಟಾನ್ಸ್ 25 ಲಕ್ಷ ರೂ.ಗೆ ಏರಿಸಿದ್ದರು. ಇದಾದ ಬಳಿಕ 30 ಲಕ್ಷ ರೂ.ಗೆ ಮುಂಬೈ ಇಂಡಿಯನ್ಸ್ ಖರೀದಿಸಿತ್ತು.

ಈ ಬಾರಿ 30 ಲಕ್ಷ ರೂ. ಮೂಲ ಬೆಲೆಯೊಂದಿಗೆ ಕಾಣಿಸಿಕೊಂಡಿದ್ದ ಅರ್ಜುನ್ ತೆಂಡೂಲ್ಕರ್ ಮೊದಲ ಸುತ್ತಿನಲ್ಲಿ ಮಾರಾಟವಾಗಿರಲಿಲ್ಲ. ಆದರೆ ಅಂತಿಮ ಸುತ್ತಿನಲ್ಲಿ ಅರ್ಜುನ್ ಅವರ ಖರೀದಿಗೆ ಮುಂಬೈ ಇಂಡಿಯನ್ಸ್ ಆಸಕ್ತಿ ತೋರಿಸಿತು. ಅದರಂತೆ ಬೇಸ್ ಪ್ರೈಸ್‌ಗೆ ಐದನೇ ಬಾರಿ ಅರ್ಜುನ್ ತೆಂಡೂಲ್ಕರ್ ಮುಂಬೈ ಇಂಡಿಯನ್ಸ್ ಪಾಲಾಗಿದ್ದಾರೆ.




## ಐಪಿಎಲ್‌ನಲ್ಲಿ ಹೊಸ ಇತಿಹಾಸ ಬರೆದ 13ರ ಬಾಲಕ

ಇಂಡಿಯನ್ ಪ್ರೀಮಿಯರ್ ಲೀಗ್ ಇತಿಹಾಸದಲ್ಲಿ 15 ವರ್ಷಕ್ಕಿಂತ ಕಡಿಮೆ ವಯಸ್ಸಿನ ಯಾವುದೇ ಆಟಗಾರ ಕಾಣಿಸಿಕೊಂಡಿರಲಿಲ್ಲ. ಆದರೆ ಈ ಬಾರಿ ರಾಜಸ್ಥಾನ್ ರಾಯಲ್ಸ್ ಫ್ರಾಂಚೈಸಿಯು ಯಂಗ್ ಸೆನ್ಸೇಷನ್ ಆಟಗಾರನನ್ನು ಖರೀದಿಸಿ ಹೊಸ ಇತಿಹಾಸ ನಿರ್ಮಿಸಿದ್ದಾರೆ.



ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ವೈಭವ್ ಸೂರ್ಯವಂಶಿ ಹೊಸ ಇತಿಹಾಸ ಬರೆದಿದ್ದಾರೆ. ಅದು ಕೂಡ ತಮ್ಮ 13ನೇ ವಯಸ್ಸಿನಲ್ಲಿ ಐಪಿಎಲ್‌ಗೆ ಆಯ್ಕೆಯಾಗುವ ಮೂಲಕ ಎಂಬುದು ವಿಶೇಷ. ನವೆಂಬ್ 25 ರಂದು ಜಿದ್ದಾದಲ್ಲಿ ನಡೆದ ಐಪಿಎಲ್ ಮೆಗಾ ಹರಾಜಿನಲ್ಲಿ ವೈಭವ್ ಅವರನ್ನು ರಾಜಸ್ಥಾನ್ ರಾಯಲ್ಸ್ 1.10 ಕೋಟಿ ರೂ.ಗೆ ಖರೀದಿಸಿದೆ. ಇದರೊಂದಿಗೆ ಐಪಿಎಲ್‌ಗೆ ಆಯ್ಕೆಯಾದ ಅತ್ಯಂತ ಕಿರಿಯ ಆಟಗಾರನೆಂಬ ದಾಖಲೆ ವೈಭವ್ ಸೂರ್ಯವಂಶಿ ಪಾಲಾಗಿದೆ. ಇದಕ್ಕೂ ಮುನ್ನ ಈ ದಾಖಲೆ ಪ್ರಯಾಸ್ ರೇ ಬರ್ಮನ್ ಹೆಸರಿನಲ್ಲಿತ್ತು. ಐಪಿಎಲ್ 2019 ರ ಹರಾಜಿನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿಯು ಪ್ರಯಾಸ್ ಅವರನ್ನು 1.5 ಕೋಟಿ ರೂ. ಖರೀದಿಸಿತ್ತು. ಈ ವೇಳೆಗೆ ಅವರ ವಯಸ್ಸು 16 ವರ್ಷ. ಈ ಮೂಲಕ ಐಪಿಎಲ್ ಇತಿಹಾಸದ ಅತ್ಯಂತ ಕಿರಿಯ ಆಟಗಾರ ಎಂಬ ದಾಖಲೆಯನ್ನು ಪ್ರಯಾಸ್ ನಿರ್ಮಿಸಿದ್ದರು. ಇದೀಗ 13ನೇ ವಯಸ್ಸಿನಲ್ಲಿ ಐಪಿಎಲ್‌ಗೆ ಎಂಟ್ರಿ ಕೊಡುವ ಮೂಲಕ ವೈಭವ್ ಸೂರ್ಯವಂಶಿ ಹೊಸ ಇತಿಹಾಸ ನಿರ್ಮಿಸಿದ್ದಾರೆ. ಇನ್ನು ಈ ಬಾರಿಯ ಐಪಿಎಲ್‌ನಲ್ಲಿ ಕಣಕ್ಕಿಳಿದರೆ ಟಿ20 ಇತಿಹಾಸದಲ್ಲೇ ಸ್ಪರ್ಧಾತ್ಮಕ ಟೂರ್ನಿ ಆಡಿದ ವಿಶ್ವದ ಅತ್ಯಂತ ಕಿರಿಯ ಆಟಗಾರ ಎನಿಸಿಕೊಳ್ಳಲಿದ್ದಾರೆ.

ಅಂದಹಾಗೆ ವೈಭವ್ ಸೂರ್ಯವಂಶಿ ಬಿಹಾರ ಮೂಲದ ಕ್ರಿಕೆಟಿಗ. 5ನೇ ವಯಸ್ಸಿನಲ್ಲೇ ಕ್ರಿಕೆಟ್ ಅಭ್ಯಾಸ ಶುರು ಮಾಡಿದ್ದ ವೈಭವ್ 12ನೇ ವಯಸ್ಸಿಗೆ ಪ್ರಥಮ ದರ್ಜೆ ಪಂದ್ಯವಾಡಿದ್ದರು ಎಂದರೆ ನಂಬಲೇಬೇಕು. ಅಲ್ಲದೆ ಈಗಾಗಲೇ ರಣಜಿ ಟ್ರೋಫಿ, ಹೇಮಂತ್ ಟ್ರೋಫಿ, ಕೂಚ್ ಬೆಹಾರ್ ಟ್ರೋಫಿ ಮತ್ತು ವಿನೂ ಮಂಕಡ್ ಟೂರ್ನಿಗಳಲ್ಲಿ ಕಣಕ್ಕಿಳಿದಿದ್ದಾರೆ. ಅಷ್ಟೇ ಅಲ್ಲದೆ ತಮ್ಮ 13ನೇ ವಯಸ್ಸಿನೊಳಗೆ ಭಾರತ ಅಂಡರ್-19 ತಂಡದಲ್ಲೂ ಕಾಣಿಸಿಕೊಂಡಿದ್ದಾರೆ.

**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news

**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**